ದೇವದಾಸಿಯರ ಆರ್ಥಿಕ ಸ್ಥಿತಿಗತಿ

(ಹಗರಿಬೊಮ್ಮನಹಳ್ಳಿ ತಾಲೂಕಿನ ದೇವದಾಸಿಯರನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ ಫಿಲ್(ಅರ್ಥಶಾಸ್ತ್ರ) ಪದವಿಗಾಗಿ ಸಾದರಪಡಿಸಿದ ನಿಬಂಧ

ನೋಂದಣಿ ಸಂಖ್ಯೆ: ೧೭೦೧೧೨೦೩೦೦೧೬

ಸಂಶೋಧನ ವಿದ್ಯಾರ್ಥಿ

ಅಂಜಿನಪ್ಪ ಗಡಾದ

ಮಾರ್ಗದರ್ಶಕರು

ಡಾ ಚಲುವರಾಜು

ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ- ೫೮೩ ೨೭೬

೨೦೧೭-೧೮

ದೇವದಾಸಿಯರ ಆರ್ಥಿಕ ಸ್ಥಿತಿಗತಿ

(ಹಗರಿಬೊಮ್ಮನಹಳ್ಳಿ ತಾಲೂಕಿನ ದೇವದಾಸಿಯರನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ ಫಿಲ್(ಅರ್ಥಶಾಸ್ತ್ರ) ಪದವಿಗಾಗಿ ಸಾದರಪಡಿಸಿದ
ನಿಬಂಧ

ನೋಂದಣಿ ಸಂಖ್ಯೆ: ೧೭೦೧೧೨೦೩೦೦೧೬

ಸಂಶೋಧನ ವಿದ್ಯಾರ್ಥಿ
ಅಂಜಿನಪ್ಪ ಗಡಾದ

ಮಾರ್ಗದರ್ಶಕರು
ಡಾ ಚಲುವರಾಜು
ಪ್ರಾಧ್ಯಾಪಕರು

ಬುಡಕಟ್ಟು ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೧೭-೧೮

ಸಂಶೋಧಕರ ಪ್ರಮಾಣ ಪತ್ರ

"ದೇವದಾಸಿಯರ ಆರ್ಥಿಕ ಸ್ಥಿತಿಗತಿ" (ಹಗರಿಬೊಮ್ಮನಹಳ್ಳಿ ತಾಲೂಕಿನ ದೇವದಾಸಿಯರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಎಂ ಫಿಲ್(ಅರ್ಥಶಾಸ್ತ್ರ) ನಿಬಂಧವನ್ನು ಡಾ. ಚಲುವರಾಜು ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಎಂ ಫಿಲ್ ಪದವಿಗಾಗಿ ಸಲ್ಲಿಸಲಾಗಿದೆ. ಪ್ರಸ್ತುತ ನಿಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ:

ಸ್ಥಳ : ವಿದ್ಯಾರಣ್ಯ

ಅಂಜಿನಪ್ಪ ಗಡಾದ
ಸಂಶೋಧನ ವಿದ್ಯಾರ್ಥಿ
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಮಾರ್ಗದರ್ಶಕರ ದೃಢೀಕರಣ ಪತ್ರ

ಅಂಜಿನಪ್ಪ ಗಡಾದ ಅವರು "ದೇವದಾಸಿಯರ ಆರ್ಥಿಕ ಸ್ಥಿತಿಗತಿ" (ಹಗರಿಬೊಮ್ಮನಹಳ್ಳಿ ತಾಲೂಕಿನ ದೇವದಾಸಿಯರನ್ನು ಅನುಲಕ್ಷಿಸಿ) ಎಂಬ ಶಿರ್ಷಿಕೆಯ ಎಂ ಫಿಲ್(ಅರ್ಥಶಾಸ್ತ್ರ) ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ದಪಡಿಸಿ ಎಂ ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ ಬುಡಕಟ್ಟು ಅಧ್ಯಯನ ವಿಭಾಗಕ್ಕೆ ಸಲ್ಲಿಸಿದ್ದಾರೆ. ಈ ನಿಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ:
ಸ್ಥಳ : ವಿದ್ಯಾರಣ್ಯ

ಡಾ. ಚಲುವರಾಜು
ಪ್ರಾಧ್ಯಾಪಕರು
ಬುಡಕಟ್ಟು ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅಧ್ಯಾಯ: ಒಂದು
ಪ್ರವೇಶ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

೧.೩. ಅಧ್ಯಯನದ ಮಹತ್ವ ಮತ್ತು ಅಧ್ಯಯನದ ಊಹೆಗಳು

೧.೪. ಅಧ್ಯಯನದ ಸ್ವರೂಪ

೧.೫. ಸಂಶೋಧನ ವಿಧಾನಗಳು

೧.೬. ಇದುವರೆಗೆ ನಡೆದ ಅಧ್ಯಯನ ಸಮೀಕ್ಷೆ

೧.೭. ಅಧ್ಯಯನ ಸ್ವರೂಪ ಮತ್ತು ವಿನ್ಯಾಸ

ಅಧ್ಯಾಯ: ಒಂದು
ಪ್ರವೇಶ

೧.೧. ಪೀಠಿಕೆ

ಮೂಲತಃ ಕಾಡುವಾಸಿಯಾದ ಮಾನವ ತನ್ನ ಆಹಾರಕ್ಕಾಗಿ ಕಾಡಿನಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ನಿರಂತರವಾಗಿ ಅಲೆಯುತ್ತಿದ್ದನು. ಕಾಲಾಂತರ ಮಾನವ ತನ್ನ ಅಲೆಮಾರಿ ಜೀವನಕ್ಕೆ ಅಂತ್ಯ ಹಾಡಿ ಒಂದೆಡೆ ನೆಲೆ ನಿಂತನು. ವಾಸಕ್ಕೆ ಯೋಗ್ಯವಾದ ಪ್ರದೇಶದಲ್ಲೆಲ್ಲಾ ಮಾನವ ತನ್ನ ವಾಸ್ತವ್ಯವನ್ನು ಕಂಡುಕೊಂಡನು. ಆದಿಮ ಬದುಕಿನಿಂದ ಆಧುನಿಕ ಬದುಕಿನವರೆಗೂ ವಿವಿಧ ಕಾಲಘಟ್ಟಗಳಲ್ಲಿ ಆಯಾ ಭೌಗೋಳಿಕ ಹಿನ್ನೆಲೆಯನ್ನು ರೂಡಿಸಿಕೊಂಡಿದ್ದು. ತನ್ನ ಆಹಾರ ಮತ್ತು ರಕ್ಷಣೆಗೆ ಸಮಸ್ಯೆ ಇಲ್ಲದಂತೆ ಮಾಡಿಕೊಂಡು ವಾಸಿಸುತ್ತಿದ್ದ ಮಾನವನ ದೃಷ್ಟಿ ಮೊದಲ ಬಾರಿಗೆ ತನ್ನ ಆಹಾರ ಮತ್ತು ಸಂರಕ್ಷಣೆಯ ವಿಷಯದಿಂದ ಬೇರೆಡೆಗೆ ಹರಿಯಿತು, ಆಹಾರ ಸಂಗ್ರಹಕ್ಕೆ ಬೇಟೆ, ಪಶುಪಾಲನೆ, ಪೈರು ಬೆಳೆಯುವುದನ್ನು ಮಾಡುತ್ತಾ. ತನ್ನ ಸುತ್ತಲಿನ ಪರಿಸರ ಇತರ ಪ್ರಾಣಿಗಳು ಬಾಹ್ಯಾಕಾಶ ಅಲ್ಲಿರುವ ಸೂರ್ಯ, ಚಂದ್ರ, ನಕ್ಷತ್ರ, ಮೋಡ, ಮಿಂಚು, ಗುಡುಗು, ಮಳೆ, ಹಗಲು–ರಾತ್ರಿಗಳ ಬಗೆಗೆ, ವಲಸೆ, ಹೋಗುವ ಪ್ರಾಣಿ, ಕ್ರಿಮಿಕೀಟ, ಪಕ್ಷಿಗಳ ಜಗತ್ತು ಮುಂತಾದವುಗಳ ಬಗೆಗೆ ವಿಚಾರ ಮಾಡತೊಡಗಿದನು. ತನ್ನವರೊಡನೆ ಈ ವಿಚಾರಗಳ ಕುರಿತು ಕೊನೆ ಇಲ್ಲದೆ ಚರ್ಚಿಸಿದನು. ಅವುಗಳ ಬಗ್ಗೆ ತನ್ನ ಜ್ಞಾನ ಮತ್ತು ಬುದ್ಧಿಮಟ್ಟಕ್ಕೆ ತಕ್ಕಂತೆ ತನ್ನದೆಯಾದ ಅರ್ಥಕಲ್ಪನೆ ಸಿದ್ದಾಂತ ನೀಡಿದನು. "ತನಗರ್ಥವಾಗದ ಹಾಗೂ ತನ್ನ ವಿಚಾರದ ಆಳಕ್ಕೆ ನಿಲುಕದ ವಿಷಯಗಳ ಬಗ್ಗೆ ವಿಸ್ಮಿತನಾಗುತ್ತಾನೆ. ಈ ವಿಸ್ಮಯವೇ ಕ್ರಮೇಣ ಒಂದು ಬಗೆಯ ನಂಬಿಕೆಯಾಗಿ ಬೆಳೆಯಿತು. ಅಂದರೆ ಎಲ್ಲಾ ವಸ್ತುಗಳಲ್ಲಿ ಪ್ರಬಲವಾದ ಶಕ್ತಿಯಿದೆ ಎಂದು ಆತ ಅಂದುಕೊಂಡನು. ಮಾನವನಲ್ಲಿನ ಈ ಧಾರ್ಮಿಕ ಮನೋವೃತ್ತಿಯು ಕೆಲವೊಮ್ಮೆ ಭಯದಿಂದಲೂ ಮತ್ತೊಮ್ಮೆ ಕುತೂಹಲದಿಂದಲೂ ಆವೃತವಾಗಿರುವುದು"[೧] ಭಯ ಎಲ್ಲಿ ಕಂಡುಬರುತ್ತದೆಯೋ ಅಲ್ಲಿ ಭಕ್ತಿ ಕಾಣುತ್ತದೆ. ಭಯ ಭಕ್ತಿ ಒಂದು ನಾಣ್ಯದ ಎರಡು ಮುಖಗಳಿದ್ದಂತೆ.

"ಮಾನವನು ತನ್ನ ದುಃಖ, ಮೃತ್ಯ, ಜನ್ಮ ಮತ್ತು ಜರಗಳಿಂದ ಮುಕ್ತವಾಗಬೇಕೆಂಬ ಕಾರಣದಿಂದ ಅಗೋಚರವಾದ ಶಕ್ತಿಯ ಕೃಪೆಗೆ ಪಾತ್ರನಾಗಲು ಮುಂದಾದನು ಆ ಸಂದರ್ಭದಲ್ಲಿ ಆ ಅಗೋಚರ

ಶಕ್ತಿಯನ್ನು ಸಂತೃಪ್ತಿ ಪಡಿಸಲು ಸೂಕ್ತ ಮಾರ್ಗ ಹುಡುಕಿ ಪೂಜೆ, ಆಹುತಿ, ಪ್ರಾರ್ಥನೆ ಮುಂತಾದವುಗಳನ್ನು ರೂಢಿಗೆ ತಂದನು. ಹೀಗೆ ಆದಿ ಮಾನವನು ನಾಗರಿಕತೆಯ ಮೊದಲ ಹಂತದಲ್ಲಿ ಪ್ರಕೃತಿಯ ವೈಚಿತ್ರ್ಯಗಳಿಗೆ ಬೆರಗಾಗಿ ಅದಕ್ಕೆ ಕಾರಣವಾದ ಅಗೋಚರ ಶಕ್ತಿಯನ್ನ ದೇವರು ಎಂದು ಕರೆದು ವಿವಿಧ ದೇವರುಗಳನ್ನು ಸೃಷ್ಟಿಸಿಕೊಂಡ ಈ ದೇವರುಗಳನ್ನು ತೃಪ್ತಿಪಡಿಸುವುದಕ್ಕಾಗಿ ನಾನಾ ರೀತಿಯ ಆಚರಣೆಗಳನ್ನು ರೂಢಿಗೆ ತಂದ ಪರಿಣಾಮವಾಗಿ ಬಲಿ ಕೊಡುವ, ಬಸವಿ ಬಿಡುವ, ಬೆತ್ತಲೆ ಸೇವೆ ನಡೆಸುವಂತಹ ಅನಿಷ್ಟ ಪದ್ಧತಿ ಹುಟ್ಟಿಕೊಂಡಿವೆ. ಹೀಗೆ ಮನುಷ್ಯನ ಅಂಧಶ್ರದ್ಧೆ ನಂಬಿಕೆಗಳು ದೇವದಾಸಿ ಸಂಪ್ರದಾಯದಂತಹ ಆಚರಣೆಗಳ ಬೆಳವಣಿಗೆಗೆ ಕಾರಣವಾಗಿರಬಹುದು."[೨] ಇಂತಹ ಸಾಂಪ್ರದಾಯಿಕ ಆಚರಣೆಗಳು ಮತ್ತು ಪದ್ಧತಿ ಇವುಗಳು ಸಮಾಜದಲ್ಲಿ ಮಾನವ ಆರ್ಥಿಕವಾಗಿ ಬಲಹೀನವಾಗಿರುವಾಗ ಮಾತ್ರ ಕಂಡು ಬರುತ್ತವೆ. ಇಂತಹ ಆರ್ಥಿಕ ಬಲಹೀನತೆಯಿಂದ ದೇವದಾಸಿ ಪದ್ಧತಿಯಂತಹ ಆಚರಣೆಗಳಿಗೆ ಬಲಿಯಾದ ಬಹುತೇಕ ಮಹಿಳೆಯರು ಅನಕ್ಷರಸ್ಥರು ಮತ್ತು ತಳ ಸಮುದಾಯದವರಾಗಿದ್ದಾರೆ. ಇಂತಹ ದೇವದಾಸಿ ಮಹಿಳೆಯರ ಆರ್ಥಿಕತೆ ಅವರ ಆರ್ಥಿಕ ಹಿನ್ನಡೆಗೆ ಕಾರಣಗಳನ್ನು ತಿಳಿಯುವ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧದಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕಿನ ವ್ಯಾಪ್ತಿಯ ದೇವದಾಸಿಯರ ಆರ್ಥಿಕತೆಯ ಕುರಿತು ತಿಳಿಸುವ ಪ್ರಯತ್ನ ಮಾಡಲಾಗಿದೆ. ದೇವದಾಸಿ ಪದ್ಧತಿಯ ಉಗಮ, ವಿಕಾಸ, ಸ್ವರೂಪ, ಕಾರಣ ಪರಿಣಾಮಗಳನ್ನು ಕುರಿತಂತೆ ಹಲವು ಬಗೆಯ ಅಧ್ಯಯನಗಳು ನಡೆದು ಬಂದಿವೆ. ಅಂತೆಯೇ ಭಾರತದ ಉದ್ದಗಲಕ್ಕೂ ಹರಡಿಕೊಂಡಿರುವ ಈ ಸಂಪ್ರದಾಯವನ್ನು ಕುರಿತು ಮೊದಲಿಗೆ ಪಾಶ್ಚಿಮಾತ್ಯರು, ಆನಂತರ ದೇಶಿಯ ವಿದ್ವಾಂಸರು, ಸಮಾಜಶಾಸ್ತ್ರಜ್ಞರು ಅಧ್ಯಯನ ನಡೆಸಿದ್ದಾರೆ. ಜಗತ್ತಿನ್ಯಾದ್ಯಂತ ಈ ಪದ್ಧತಿ ಒಂದಿಲ್ಲೊಂದು ರೀತಿಯಲ್ಲಿ ಆಚರಣೆಯಲ್ಲಿದೆ. ಭಾರತ ಅಲ್ಲದೆ ಪಶ್ಚಿಮ ಏಷ್ಯ, ಮಧ್ಯ ಅಮೆರಿಕಾ, ಈಜಿಪ್ಟ್, ಗ್ರೀಸ್ ರೋಮ್‌ಗಳಲ್ಲದೆ ಪಶ್ಚಿಮ ಆಫ್ರಿಕಾ ಮುಂತಾದೆಡೆಗಳಲ್ಲಿ ಆಯಾ ಪ್ರದೇಶಕ್ಕನುಗುಣವಾಗಿ ಬೇರೆಬೇರೆ ಪದ್ಧತಿಗಳು ಸಂಪ್ರದಾಯಗಳು ಬೆಳೆದು ಆಚರಣೆಯಲ್ಲಿರುವುದನ್ನು ಕಾಣುತ್ತೇವೆ. "ಭಾರತದಲ್ಲಿ ಆದಿ ಕಾಲದಿಂದಲೂ ಈ ಪದ್ಧತಿ ಇರುವುದಕ್ಕೆ ನಿದರ್ಶನಗಳಿವೆ ಸ್ಕಂದಪುರಾಣ, ಶಿವಪುರಾಣದಲ್ಲಿ ದೇವನರ್ತಕಿಯರ, ಗಣಿಕಾ ಸ್ತ್ರೀಯರ ಬಗ್ಗೆ ಉಲ್ಲೆಖಗಳಿವೆ. ಮೊದಮೊದಲು ಮಾತೃ ಪ್ರಧಾನ ಸಂಸ್ಕೃತಿಯಲ್ಲಿ ಸ್ತ್ರೀಯರನ್ನು ಗೌರವಿಸುವ ಸಂಕೇತವಾಗಿ ಶಕ್ತಿ ಆರಾಧನಾ ಕೇಂದ್ರಗಳು ಬೆಳೆದು ಬಂದಿವೆ. ಹರಪ್ಪ–ಮೆಹೆಂಜೊದಾರೊ ನಿವೇಶನಗಳ ಬಳಿಯ ಯೋಬ್ ಪ್ರದೇಶದ ರಣ ಗಾಂಧಾರಿ ಮತ್ತು ಕುಳ್ಳಿಯ ಮಡಕೆಗಳಲ್ಲೂ ವೃಷಿವಿ ಸ್ವರೂಪದ ಚಿತ್ರವಿರುವಂತೆ ಅಲ್ಲಿಯೇ ಕಂಚಿನ ನೃತ್ಯದ ಹುಡುಗಿಯ ಚಿತ್ರವು ಗಮನ ಸೆಳೆಯುತ್ತದೆ. ಈ ಚಿತ್ರದಲ್ಲಿ ಹುಡುಗಿಯು ಬೆತ್ತಲೆಯಾಗಿದ್ದು ಕತ್ತಿನಲ್ಲಿ ಭಾರವಾಗಿರುವ ಸರವನ್ನು, ಕೈಗಳ ತುಂಬಾ ಬಳೆಗಳನ್ನು ಧರಿಸಿದ್ದಾಳೆ"[೩] ಪ್ರಾಯಶಃ ಇದು ಆ ಕಾಲದ ಸ್ತ್ರೀಯರ ಸಾಂಸ್ಕೃತಿಕ ಅಭಿವ್ಯಕ್ತಿಯ ಸಂಕೇತವೂ ಇರಬಹುದು ಅಥವಾ ದೇವಸ್ಥಾನದ ಪರಿಚಾರಿಕೆಯರ ಚಿತ್ರವೂ ಇರಬಹುದು. ಶಾಸನಗಳಲ್ಲಿ ದೊರೆಯುವ ರಾಣಿವಾಸ, ಪೆಂಡವಾಸದ ಸೂಳೆಯರು, ಗಣಿಕೆಯರು ಮುಂತಾದ

ಪದಗಳನ್ನು ಗಮನಿಸಿದಾಗ ಇವರು ರಾಜನೊಂದಿಗೆ ಸಂಬಂಧ ಹೊಂದಿದ್ದು ಉತ್ತಮ ಸ್ಥಿತಿವಂತರಾಗಿದ್ದುದು ಕಂಡು ಬರುತ್ತದೆ”[೪] ಅಂದರೆ ಹಿಂದಿನ ಕಾಲದಲ್ಲಿ ದೇವದಾಸಿಯರ ಸ್ಥಿತಿ ಉತ್ತಮವಾಗಿತ್ತು ಎಂದು ಇವುಗಳಿಂದ ತಿಳಿದು ಬರುತ್ತದೆ.

ದೇವದಾಸಿ ಪದ್ಧತಿಗೂ ವೇಶ್ಯವಾಟಿಕೆಗೂ ಮೊದಮೊದಲು ನೇರವಾದ ಸಂಬಂಧವಿರಲಿಕ್ಕಿಲ್ಲವಾದರೂ ನಂತರದ ದಿನಗಳಲ್ಲಿ ದೇವಾದಾಸಿ ಮಹಿಳೆಯರನ್ನು ಅಧಿಕೃತವಾಗಿ ಸೂಳೆಗಾರಿಕೆಗಾಗಿ ಬಳಸಿಕೊಂಡಿದ್ದು ಇದೆ ದೇವಸ್ಥಾನಗಳಲ್ಲೂ ಅಂಗಭೋಗ-ರಂಗಭೋಗಗಳೆಂದು ಇದ್ದು ದೇವರಿಗೆ ಅಲಂಕಾರ ಮಾಡುವುದು, ಪೂಜೆ ಪುನಸ್ಕಾರ, ದೇವಾಲಯ ಸ್ವಚ್ಚಗೊಳಿಸುವುದು, ನೈವೇದ್ಯ ತಯಾರಿಸುವುದು ಇತ್ಯಾದಿ ಕೆಲಸಗಳಿಗಾಗಿ ಮಹಿಳೆಯರನ್ನು ನೇಮಿಸಿಕೊಂಡು. ಅವರನ್ನು ಅಂಗಭೋಗ ದಾಸಿಯರೆಂದು, ದೇವಾಲಯದ ಪ್ರಾಂಗಣದಲ್ಲಿ ನೃತ್ಯ, ಸಂಗೀತ ಇತ್ಯಾದಿ ಸಾಂಸ್ಕೃತಿಕ ಕಲಾಪಗಳಿಗಾಗಿ ಮೀಸಲಾದವರನ್ನು ರಂಗಭೋಗದ ದಾಸಿಯರೆಂದು ಗುರುತಿಸಲಾಗುತ್ತಿತ್ತು. ದೇವಸ್ಥಾನದ ಈ ದಾಸಿಯರು ಬರುಬರುತ್ತಾ ರಾಜನ ಪರಿವಾರಕ್ಕೆ ಸೇರಿಕೊಂಡು ರಾಜ ನರ್ತಕಿಯರಾಗಿ ರಾಜ ಪರಿವಾರದ ವೇಶ್ಯೆಯರಾಗಿ ಪರಿವರ್ತಿತವಾದದ್ದು ಇತಿಹಾಸದ ಸಂಗತಿ. ನಿಜವಾಗಿಯೂ ಲಲಿತಕಲೆಗಳಾದ ಸಾಂಪ್ರದಾಯಿಕ ಶೈಲಿಯ ನೃತ್ಯ ಸಂಗೀತಗಳಿಗೆ ದೇವದಾಸಿಯರೇ ಮೂಲ ಆಕರವಾಗಿದ್ದರು. ಮೈಸೂರು ಒಡೆಯರ ಕಾಲದಲ್ಲಿ ರಾಜಾಶ್ರಯದ ಮೂಲಕ ದೇವದಾಸಿಯರಿಂದ ನೃತ್ಯ ಶೈಲಿ ಅಭಿವೃದ್ಧಿ ಕಂಡಿತು. ದೇವದಾಸಿಯರಿಗೆ ನೃತ್ಯಭ್ಯಾಸ ಮಾಡಿಸುವವರನ್ನು ನಟುವರ್‌ಗಳೆಂದು ಕರೆಯುತ್ತಿದ್ದರು. ಅಲ್ಲಮಪ್ರಭು ನಟುವರ್ ಜಾತಿಯರಾಗಿದ್ದು ಇಲ್ಲಿ ಸ್ಮರಿಸಬಹುದು. “ಮೈಸೂರು ಅರಸರ ಕಾಲಕ್ಕೆ ಸುಮಾರು ಇನ್ನೂರು ಮಂದಿ ನರ್ತಕಿಯರು ಇರುವುದು ಕಂಡಬರುತ್ತದೆ. ಅವರಲ್ಲಿ ಜಟ್ಟಿ ತಾಯಮ್ಮ ಪ್ರಮುಖರು. ಜಟ್ಟಿ ತಾಯಮ್ಮ ಇಪ್ಪತ್ತೆಂಟನೆಯ ವಯಸ್ಸಿನಲ್ಲಿಯೇ ನಾಟ್ಯ ಶಾರದೆ ಬಿರುದನ್ನೂ ಪಡೆದಿದ್ದರು. ಜಗದ್ವಿಖ್ಯಾತ ಸಂಗೀತಗಾರತಿ ಎಂ ಎಸ್ ಸುಬ್ಬಲಕ್ಷ್ಮಿ ಕೂಡಾ ಈ ಪರಂಪರೆಯಲ್ಲಿಯೇ ಬಂದು ಅದ್ವಿತೀಯ ಸಾಧನೆ ಗೈದಿದ್ದಾರೆ”.[೫] ಉತ್ತರ ಕರ್ನಾಟಕದ ಬಹುತೇಕ ಪ್ರದೇಶಗಳಲ್ಲೂ ಕೆಳಸ್ತರದ ಹೆಣ್ಣು ಮಕ್ಕಳ ಕೊರಳಿಗೆ ಮುತ್ತು ಕಟ್ಟುವ ಮೂಲಕ ದೇವತೆ, ದೇವರೊಂದಿಗೆ ಮದುವೆ ಮಾಡಿ ಅವಳನ್ನ ದೇವರ ಸೇವೆಗೆ ಮೀಸಲಿಡುವ ಒಂದು ಅನಿಷ್ಟ ಸಂಪ್ರದಾಯ ದೇವದಾಸಿ ಪದ್ಧತಿಯಾಗಿದೆ. ಧಾರ್ಮಿಕತೆ, ಸಂಪ್ರದಾಯಿಕತೆಯ ಹೆಸರಿನಲ್ಲಿ ಸಾವಿರಾರು ವರ್ಷಗಳಿಂದ ನಡೆದುಬಂದ ಈ ದೇವದಾಸಿ ಪದ್ಧತಿಗೆ ತನ್ನದೇ ಆದಂತಹ ಇತಿಹಾಸವೇ ಇದೆ. ರಾಜ ಮಹಾರಾಜರು ತಮ್ಮ ತಮ್ಮ ಆಳ್ವಿಕೆಯಲ್ಲಿ ಪೋಷಿಸಿ ಬೆಳಸಿಕೊಂಡು ಬಂದ ಈ ಪದ್ದತಿಗೆ ಒಳಗಾದ ದೇವದಾಸಿಯರನ್ನು ಬಸವಿ, ನರ್ತಕಿ, ಗಣಿಕೆ, ಮುಗಳಿ, ಜೋಗತಿ ಹೀಗೆ ಹಲವಾರು ಹೆಸರುಗಳಿಂದ ಗುರುತಿಸುವುದುಂಟು. “ಕೌಟಿಲ್ಯನು ತನ್ನ ಅರ್ಥಶಾಸ್ತ್ರದ ಎರಡನೇ ಅಧಿಕರಣದ ೪೪ನೇ ಪ್ರಕರಣದಲ್ಲಿ ಗುಪ್ತಕಾಲದ ಗಣಿಕೆಯರ ಕುರಿತು ಉಲ್ಲೇಖಿಸುತ್ತಾನೆ. ಗಣಿಕೆಯರ ಕುಲದಲ್ಲಿ ಅಥವಾ ಬೇರೆಯ ಕುಲದಲ್ಲಿ ಹುಟ್ಟಿದ ರೂಪವತಿಯೂ, ಯೌವ್ವನ ಸಂಪನ್ನಳೂ, ಕಲಾ ಪ್ರೌಢಳೂ ಎನಿಸಿದ ಆಸಕ್ತ ಸ್ತ್ರೀಯನ್ನು ೧೦೦೦

ಪಣಗಳ ವರ್ಷಾಸನದ ಮೇಲೆ ಗಣಿಕಾಧ್ಯಕ್ಷನೆಸಿದ್ದ ಅಧಿಕಾರಿಯು ಗಣಿಕೆಯರನ್ನಾಗಿ ನಿಯಮಿಸಿಕೊಳ್ಳುತ್ತಿದ್ದನು. ಇವರಿಗೆ ವೇಶ್ಯಾವೃತ್ತಿಗೆ ಸಂಬಂಧಿಸಿದ ೬೪ ಕಲೆಗಳನ್ನು ಕಲಿಸಲು ರಾಜನು ರಾಜಬೊಕ್ಕಸದಿಂದ ಕಲಿಸುವವರಿಗೆ ಜೀವಿಕೆಯನ್ನು ಕೊಡಬೇಕಾಗಿದ್ದಿತು. ಈ ಸ್ತ್ರೀಯರ ಚಟುವಟಿಕೆಯನ್ನು ಮಾನ್ಯಮಾಡಿ ರಾಜನು ತನ್ನ ಅಧಿಕಾರದಿಂದ ಅವರ ಕಾರ್ಯ ಚಟುವಟಿಕೆಯನ್ನು ನಿಯಂತ್ರಿಸುತ್ತಿದ್ದನು. ಹೀಗೆ ಒಂದು ಕಾಲದಲ್ಲಿ ಕಾನೂನಿನ ಚೌಕಟ್ಟಿನಲ್ಲಿ ನ್ಯಾಯ ಸಮ್ಮತವೆನ್ನಿಸಿ ರಾಜಾಶ್ರಯ ಪಡೆದಂತಹ ಪದ್ಧತಿಯು ೧೬೬೭ರ ಸಂದರ್ಭದಲ್ಲಿ ಒಬ್ಬ ಸಂತನಂತೆ ಜೀವನ ನಡೆಸಿದ ಮಹಮ್ಮದೀಯ ಔರಂಗಜೇಬನ ಕಾಲದಲ್ಲಿ ವೇಶ್ಯಾವೃತ್ತಿಯು ನಿಷೇಧಿಸಲ್ಪಟ್ಟಿತು. ಅವನ ಆಡಳಿತ ಕಾಲದಲ್ಲಿ ಸಾವಿರಾರು ಹಿಂದೂ ದೇವಾಲಯಗಳನ್ನು ನಾಶಪಡಿಸಲಾಯಿತಲ್ಲದೆ ಅವುಗಳೊಂದಿಗೆ ಸಂಬಂಧ ಹೊಂದಿದ್ದ ಎಲ್ಲಾ ವೇಶ್ಯಯರನ್ನು ಮತ್ತು ಅವರಿಗೆ ಸಂಬಂಧಿಸಿದ ಎಲ್ಲವನ್ನು ನಾಶ ಮಾಡಲು ಪ್ರಯತ್ನಗಳನ್ನು ನಡೆಸಲಾಯಿತು".೬ ಹಾಡುವುದು ಮತ್ತು ನೃತ್ಯ ಮಾಡುವವರ ವಿರುದ್ಧ ಅವನು ಆಜ್ಞೆಗಳನ್ನು ಜಾರಿ ಮಾಡಿದ ಅದೇ ಹೊತ್ತಿನಲ್ಲಿ ಎಲ್ಲಾ ನೃತ್ಯದ ಹುಡುಗಿಯರಿಗೆ ಮದುವೆ ಮಾಡಿಕೊಳ್ಳಲು ಆಜ್ಞೆ ಮಾಡಿದ ಒಪ್ಪಿದಿದ್ದವರನ್ನು ರಾಜ್ಯದಿಂದ ಹೊರ ಹಾಕಿದ ಎಂದು ಡಾ ಜೋಗನ್ ಶಂಕರ್ ಅವರು ತಮ್ಮ "ದೇವದಾಸಿ ಸಂಪ್ರದಾಯ" ಕೃತಿಯಲ್ಲಿ ಉಲ್ಲೇಕಿಸುತ್ತಾರೆ. ಆದರೆ ದೇವದಾಸಿ ಮಹಿಳೆಗೆ ಈ ಎಲ್ಲ ಧಾರ್ಮಿಕ ಸಾಮಾಜಿಕ ಮತ್ತು ರಾಜಕೀಯ ಅಂಶಗಳು ಗಣನೆಗೆ ಬರುವುದಿಲ್ಲ ಎಂದು ಸ್ವತಃ ಅವರೇ 'ಹೀಗೊಂದು ಪಯಣ' ಎಂಬ ಪುಸ್ತಕದಲ್ಲಿ ತಿಳಿಸಿದ್ದಾರೆ. ಇಂದಿನ ದಿನಮಾನಗಳು ಮಹಿಳೆಯ ಅಸ್ಮಿತೆ ಅಸ್ತಿತ್ವಗಳನ್ನು ಗುರುತಿಸುವ ಅವಳ ಬದುಕನ್ನು ಸುಗಮವಾಗಿಸುವ ದಿಸೆಯಲ್ಲಿ ಚಿಂತನೆ ನಡೆಸಬೇಕಾಗಿದೆ. ಈ ದೃಷ್ಟಿಯಿಂದ ದೇವದಾಸಿಯರ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಜೀವನ ತಿಳಿದುಕೊಂಡು ಸಮಾಜದಲ್ಲಿ ಇವರಿಗೆ ಆರ್ಥಿಕ ಪ್ರಗತಿ ಕಂಡುಕೊಳ್ಳಲು ಸದ್ಯದ ಯಾವ-ಯಾವ ಕಾರ್ಯಕ್ರಮಗಳು ಅಥವಾ ಯೋಜನೆಗಳನ್ನು ಸರ್ಕಾರ ಹಾಕಿಕೊಂಡಿದೆ. ಇನ್ನು ಯಾವ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಅಗತ್ಯತೆ ಇದೆ ಎಂಬುದರ ಕುರಿತು ತಿಳಿಸುವುದಾಗಿದೆ.

ಪ್ರಸ್ತುತ ನಿಬಂಧದಲ್ಲಿ ಹಗರಿಬೋಮ್ಮನಹಳ್ಳಿ ತಾಲೂಕಿನ ಮರಿಯಮ್ಮನಹಳ್ಳಿಯಲ್ಲಿ ಮತ್ತು ಹಂಪಪಟ್ಟಣ ಗ್ರಾಮದಲ್ಲಿ ದೇವದಾಸಿ ಮಹಿಳೆಯರು ಹೆಚ್ಚಾಗಿ ಕಂಡು ಬರುತ್ತಾರೆ. ಹಾಗಾಗಿ ಹಗರಬೊಮ್ಮನಹಳ್ಳಿಯ ತಾಲೂಕಿನ ಮರಿಯಮ್ಮನಹಳ್ಳಿ ಹಂಪಪಟ್ಟಣದ ಗ್ರಾಮಗಳಲ್ಲಿನ ದೇವದಾಸಿ ಮಹಿಳೆಯರ ಕುರಿತು ಕ್ಷೇತ್ರಕಾರ್ಯ ಕೈಗೊಂಡು ಅವರ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಜೀವನ ತಿಳಿದುಕೊಂಡು. ಅವರ ಅಭಿವೃದ್ದಿಗೆ ಸರ್ಕಾರ ಕೈಗೊಂಡ ಕಾರ್ಯಕ್ರಮಗಳನ್ನು ಅರ್ಥಶಾಸ್ತ್ರ ಹಿನ್ನೆಲೆಯಲ್ಲಿ ಕಟ್ಟಿಕೊಡಲಾಗಿದೆ.

೧.೨. ಅಧ್ಯಯನದ ಉದ್ದೇಶ

ಪ್ರಸ್ತುತ ಸಂಶೋಧನೆಯು ದೇವದಾಸಿಯರ ಆರ್ಥಿಕ ಸಮಸ್ಯೆಗಳನ್ನು ಇಟ್ಟುಕೊಂಡು ಆ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವುದಾಗಿದೆ. ಉತ್ತರವು ವೈಯಕ್ತಿಕವಾಗಿರಬಹುದು.

ಸಾಮಾಜಿಕವಾಗಿರಬಹುದು ಒಟ್ಟಿನಲ್ಲಿ ಸಂಶೋಧನೆಯಿಂದ ಹೊರ ಹೊಮ್ಮಿದ ಫಲಿತಾಂಶ ಉಪಯೋಗವಾಗಬೇಕು ಸಂಶೋಧನೆಯ ಉದ್ದೇಶಗಳು ನಿರ್ಧಿಷ್ಟ ಯೋಜನೆಯಡಿಯಲ್ಲಿ ಬರುವ ಒಟ್ಟು ಕೆಲಸಗಳ ಒಂದು ಸ್ಥೂಲ ಚಿತ್ರಣವನ್ನ ಹುಡುಕುವ ಕೆಲಸವನ್ನ ಉದ್ದೇಶ ಸೂಚಿಸುತ್ತದೆ. ಅಧ್ಯಯನದ ಉದ್ದೇಶಗಳು ಸಂಶೋಧನಾ ಕೆಲಸಕ್ಕೆ ಒಂದು ಮಾರ್ಗಸೂಚಿಯಂತೆ ಕೆಲಸ ಮಾಡುತ್ತದೆ. ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ಕಾರ್ಯನಿರ್ವಹಿಸುವಾಗ ಪರಿಪೂರ್ಣವಾಗುತ್ತದೆ ಈ ಅಂಶಗಳನ್ನೂ ಗಮನಲ್ಲಿಟ್ಟುಕೊಂಡು ದೇವದಾಸಿಯರ ಆರ್ಥಿಕ ಸ್ಥಿತಿಗತಿ ಎಂಬ ವಿಷಯವನ್ನು ಸಂಶೋಧನೆಗೆ ಒಳಪಡಿಸುತ್ತಿದ್ದೇನೆ.

೧. ದೇವದಾಸಿ ಪದ್ಧತಿಯ ಹಿನ್ನೆಲೆಯನ್ನು ತಿಳಿಸಲಾಗಿದೆ.

೨. ದೇವದಾಸಿಯ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತಿ–ಗತಿಯನ್ನ ವಿಶ್ಲೇಸಿಸಲಾಗಿದೆ.

೩. ದೇವದಾಸಿಯರ ಅಭಿವೃದ್ಧಿಗೆ ಇರುವ ಯೋಜನೆಗಳ ಕುರಿತು ವಿವರಿಸಲಾಗಿದೆ.

ಊಹೆಗಳು

೧. ದೇವದಾಸಿಯರ ಜೀವನವು ಸಾಮಾಜಿಕ ಹಾಗೂ ಆರ್ಥಿಕವಾಗಿ ಬಹಳ ಕುಂಠಿತವಾಗಿದೆ.

೨. ಬಹುತೇಕ ದೇವದಾಸಿಯರು ವೇಶ್ಯಾವೃತ್ತಿಯಲ್ಲಿ ತೊಡಗಿರುತ್ತಾರೆ.

೩. ದೇವದಾಸಿ ಮಹಿಳೆಯರಲ್ಲಿ ಸರ್ಕಾರದ ಸವಲತ್ತುಗಳನ್ನು ಪಡೆಯವಲ್ಲಿ ವಿಫಲರಾದವೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

೧.೩. ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಸಂಶೋಧನೆಯು ಯಶಸ್ವಿಯಾಗಬೇಕಾದರೆ ಅದಕ್ಕೆ ವ್ಯಾಪ್ತಿ ಬಹಳ ಮುಖ್ಯವಾಗಿದೆ. ಸಾಮಾನ್ಯ ಅರ್ಥದಲ್ಲಿ ವ್ಯಾಪ್ತಿ ಎಂದರೆ ಎಲ್ಲೆ, ಮೇರೆ, ಗಡಿ ಎಂದಾಗುತ್ತದೆ. ನಿರ್ದಿಷ್ಟ ಹಾಗೂ ಉದ್ದೇಶ ಪೂರಿತವಾದ ಸಂಶೋಧನೆಯು ಗುರಿ ತಲುಪಬೇಕಾದರೆ ಅದಕ್ಕೆ ತನ್ನದೇ ಆದ ಚೌಕಟ್ಟಿನ ಕ್ರಮ ಬದ್ಧತೆಯಿಂದಾಗಿ ಸ್ಪಷ್ಟವಾಗಿ ಸಂಪೂರ್ಣವಾಗಿ ಮಾಹಿತಿ ಸಂಗ್ರಹಿಸಲು ಸಾಧ್ಯವಾಗುತ್ತದೆ. ವ್ಯಾಪ್ತಿಗಳಿಲ್ಲದೇ ಅಧ್ಯಯನವು ಗೊಂದಲಕ್ಕೆ ಒಳಪಡಿಸಿ ಸಂಶೋಧಕರ ದಾರಿ ತಪ್ಪಿಸುತ್ತದೆ. ಅದಕ್ಕೆ ಸಂಶೋಧನೆಗೆ ವ್ಯಾಪ್ತಿ ಮುಖ್ಯವಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕನ್ನು ಆಯ್ಕೆಮಾಡಿಕೊಂಡಿದ್ದು ಇವುಗಳಲ್ಲಿ ಮರಿಯಮ್ಮನಹಳ್ಳಿ ಮತ್ತು ಹಂಪ ಪಟ್ಟಣ ಗ್ರಾಮಗಳಲ್ಲಿ ದೇವದಾಸಿಯ ಪ್ರಮಾಣ ಹೆಚ್ಚಾಗಿದ್ದು ಅವುಗಳಲ್ಲಿ ದೇವಾದಾಸಿ ಮಹಿಳೆಯರ ಆರ್ಥಿಕ ಸ್ಥಿತಿ–ಗತಿಯ ವ್ಯಕ್ತಿ ಅಧ್ಯಯನದ ಮೂಲಕ ಮಾಹಿತಿ ಸಂಗ್ರಹಿಸಿ ಈ ವರ್ಗದ ದೇವದಾಸಿಯರನ್ನು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ದೃಷ್ಟಿಕೋನದಿಂದ ಮತ್ತು ದೇವದಾಸಿ ಬದುಕಿನ ಸ್ಥಿತ್ಯಂತರಗಳ ಕುರಿತು ಅಧ್ಯಯನ ನಡೆಸುವ ಪ್ರಯತ್ನವನ್ನು ಮಾಡಲಾಗುತ್ತದೆ.

೧.೪. ಅಧ್ಯಯನದ ಮಹತ್ವ

ದೇವದಾಸಿ ಸಂಪ್ರದಾಯವನ್ನ ಹಲವು ಸಮುದಾಯಗಳು ಆಚರಿಸುತ್ತವೆ. ಒಂದೇ ಸಂಪ್ರದಾಯವನ್ನ ಹಲವು ಸಮುದಾಯಗಳಲ್ಲಿ ವಿಭಿನ್ನವಾದ ರೀತಿಯ ಆಚರಣೆಗಳ ಮೂಲಕ ಆಚರಿಸುತ್ತಾರೆ. ದೇವದಾಸಿಯರ ಸಾಮಾಜಿಕ ಸಾಂಸ್ಕೃತಿಕ ಜೀವನ ತಿಳಿಯುವುದ್ದರ ಜೊತೆಗೆ ಬೇರೆ ಬೇರೆ ಸಮುದಾಯದ ದೇವದಾಸಿ ಸಂಪ್ರದಾಯಗಳು ಮತ್ತು ಆಚರಣೆಗಳು ವಿಶ್ಲೇಷಿಸುವ ಅವಶ್ಯಕತೆ ಈ ವರ್ಗದವರಿಗೆ ಅರ್ಥಿಕವಾಗಿ ಪ್ರಗತಿಯ ಹೊಂದಲು ಸರ್ಕಾರದ ಯೋಜನೆಯನ್ನು ಎಷ್ಟರ ಪ್ರಮಾಣದಲ್ಲಿ ಪಡೆದುಕೊಳ್ಳುತ್ತಾರೆ. ಎಂಬುವುದನ್ನು ಅಧ್ಯಯನ ಮಾಡುವುದು.

ದೇವದಾಸಿ ಪದ್ಧತಿಗೆ ಒಳಪಡಿಸುವ ಸಮುದಾಯದ ಒಳಗಿನ ಒತ್ತಡಗಳೇನು? ಸರ್ಕಾರದ ಯೋಜನೆಗಳು ದೇವದಾಸಿಯರಿಗೆ ಯಾವ ರೀತಿಯಲ್ಲಿವೆ? ಇದರಿಂದ ಅವರ ಪರಿವರ್ತನೆ ಸಾಧ್ಯವಾಗಿದೆ. ಹಾಗೆಯೇ ಪ್ರಸ್ತುತ ಸಮಾಜದಲ್ಲಿ ದೇವದಾಸಿಯರ ಬದಲಾವಣೆಯ ಹಾದಿಯನ್ನು ತಿಳಿಯುವುದು ಅವಶ್ಯವಾಗಿದೆ.

೧.೫. ಅಧ್ಯಯನದ ವಿಧಾನ

ಅಧ್ಯಯದ ಉದ್ದೇಶಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಯಾವ ಮೂಲದಿಂದ ಮತ್ತು ಯಾವ ಕ್ರಮದಲ್ಲಿ ಸಂಗ್ರಹಿಸಬೇಕೆನ್ನುವ ವಿವರಗಳನ್ನೂ ಅಧ್ಯಯನ ವಿಧಾನ ತಿಳಿಸುತ್ತದೆ. ಸಂಶೋಧನೆ ನಡೆಸಿಕೊಂಡು ಹೋಗಲು ಉಪಯುಕ್ತ ಕ್ರಮಬದ್ದವಾದ ಅಧ್ಯಯನ ಇರಬೇಕಾಗುತ್ತದೆ. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ದೇವದಾಸಿಯರ ಅರ್ಥಿಕ ಸ್ಥಿತಿಗತಿ ಎಂಬ ವಿಷಯವನ್ನು ಆಯ್ದುಕೊಳ್ಳಲಾಗಿದೆ. ಈಗಾಗಲೇ ಸಂಶೋಧನೆ ಆಗಿರುವ ವಿಷಯಗಳನ್ನೂ ಪರಾಮರ್ಶಿಸಿ ಪ್ರಸ್ತುತ ಅಧ್ಯಯನವವನ್ನ ಕೈಗೊಳ್ಳಲಾಗುವುದು. ಅದಕ್ಕಾಗಿ ಈ ಕೆಳಗಿನ ಅಧ್ಯಯನ ವಿಧಾನಗಳನ್ನೂ ಒಳಸಿಕೊಳ್ಳಲಾಗುತ್ತದೆ.

೧.೫.೧. ಪ್ರಶ್ನಾವಳಿಯ ವಿಧಾನ

ಅಧ್ಯಯನಕ್ಕೆ ಸಂಬಂಧಸಿದಂತೆ ಹಗರಿಬೊಮ್ಮನ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿನ ದೇವದಾಸಿ ಮಹಿಳೆಯರ ಆಥಿಕ ಸ್ಥಿತಿಗತಿ, ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ಮಾಹಿತಿ ಪಡೆಯಲು ಅಧ್ಯಯನದ ಮುಖ್ಯ ಉದ್ದೇಶಗಳಿಗೆ ಅನುಗುಣವಾಗಿ ವಿವಿಧ ಆಯಾಮಗಳಲ್ಲಿ ಪ್ರಶ್ನೆಗಳನ್ನು ಹೊಂದಿರುವ ಸೂಕ್ತ ಪ್ರಶ್ನಾವಳಿಯನ್ನು ತಯಾರಿಸಿಕೊಂಡು ಮಾಹಿತಿಯನ್ನು ಕ್ಷೇತ್ರದಿಂದ ಸಂಗ್ರಹಣೆ ಮಾಡಲಾಗುವುದು. ಇದರ ಮೂಲಕ ವರಿಂದ ಉಪಯುಕ್ತ ಮಾಹಿತಿ ಪಡೆದುಕೊಳ್ಳಲಾಗಿದೆ.

೧.೫.೨. ಸಂದರ್ಶನ ವಿಧಾನ

ಸಂದರ್ಶನ ವಿಧಾನದಲ್ಲಿ ದೇವದಾಸಿ ಪದ್ದತಿಯನ್ನು ಅನುಸರಿಸುತ್ತಿರುವ ಹಿರಿಯ, ಕಿರಿಯ ಮಹಿಳೆಯರನ್ನು ಮತ್ತು ಆಯ್ದಾ ಕುಟುಂಬಗಳು ಹಾಗೂ ದೇವದಾಸಿಯರ ಜೊತೆ ಸಂಬಂಧ

ಹೊಂದಿರುವ ಇತರೆ ವ್ಯಕ್ತಿಗಳೊಂದಿಗೆ ಸಂದರ್ಶನ ನಡೆಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಒಟ್ಟಾರೆ ಹಗರಬೊಮ್ಮನಹಳ್ಳಿ ತಾಲೂಕಿನಲ್ಲಿ ಕಂಡುಬರುವ ದೇವದಾಸಿಯರನ್ನು ಸಂದರ್ಶಿಸಿ ಮಾಹಿತಿ ಸಂಗ್ರಹಿಸಲಾಗಿದೆ.

೧.೫.೩. ಐತಿಹಾಸಿಕ ವಿಧಾನ

ದೇವದಾಸಿ ಸಂಪ್ರದಾಯದ ಹಿನ್ನೆಲೆ ಮತ್ತು ಚರಿತ್ರೆ ತಿಳಿಯಲು ಐತಿಹಾಸಿಕ ವಿಧಾನವನ್ನು ಬಳಸಲಾಗುತ್ತದೆ. ದೇವದಾಸಿಯರ ಬಗ್ಗೆ ಮಾಹಿತಿಇರುವ ಶಾಸನಗಳು, ಚಾರಿತ್ರಿಕ ದಾಖಲೆಗಳು, ಐತಿಹಾಸಿಕ ಘಟನೆಗಳ ಮೂಲಕ ಮಾಹಿತಿ ಸಂಗ್ರಹಿಸಿ ನಿಬಂಧ ಸಿದ್ದಪಡಿಸಲಾಗಿದೆ. ಈ ಪದ್ದತಿಯಿಂದ ಅವರ ಸಾಮಾಜಿಕ, ಸಂಸ್ಕೃತಿಕ ಮತ್ತು ಆರ್ಥಿಕ ಜೀವನ ತಿಳಿಯಲಾಗುವುದು.

೧.೫.೪. ತೌಲನಿಕ ವಿಧಾನ

ಬೇರೆ ಬೇರೆ ಸಮುದಾಯಗಳಲ್ಲಿ ಕಂಡುಬರುವ ದೇವದಾಸಿಯರ ಆರ್ಥಿಕ ಸ್ಥಿತಿಗತಿಗಳನ್ನು ಮತ್ತು ದೇವದಾಸಿ ಪದ್ದತಿಯ ವಿವಿಧ ಪ್ರಕಾರಗಳನ್ನು ತೌಲನಿಕವಾಗಿ ನೋಡಲಾಗಿದೆ.

೧.೫.೫. ಸಹಭಾಗಿತ್ವ ವಿಧಾನ

ದೇವದಾಸಿ ಮಹಿಳೆಯರಲ್ಲಿನ ಕೆಲವು ವಿಶೇಷ ಆಚರಣೆಗಳ ಹಿನ್ನೆಲೆ ತಿಳಿಯಲುಸಹಭಾಗಿ ಅವಲೋಕನವನ್ನು ಬಳಸಿಕೊಳ್ಳಲಾಗಿದೆ. ಅವರ ಆಚರಣೆಗಳಲ್ಲಿ ಬಾಗವಹಿಸಿ ಮಾಹಿತಿ ಸಂಗ್ರಹಿಸಲಾಗಿದೆ.

೧.೫.೬. ವ್ಯಕ್ತಿ ಅಧ್ಯಯನ ವಿಧಾನ

ಯಾವ ಕ್ಷೇತ್ರದಲ್ಲಿ ದೇವದಾಸಿ ಪದ್ದತಿ ಹೆಚ್ಚಾಗಿ ಕಂಡುಬರುವುದು, ಹೆಚ್ಚಾಗಿ ಈ ಪದ್ದತಿ ಕಂಡು ಬರುವುದಕ್ಕೆ ಇರುವ ಕಾರಣಗಳನ್ನು, ಆಯಾ ಜಾತಿ ಅಥವಾ ವರ್ಗದ ದೇವದಾಸಿಯರನ್ನು ವೈಯಕ್ತಿಕವಾಗಿ ಸಂದರ್ಶಿಸಿ ಮಾಹಿತಿ ಪಡೆದು ಅಧ್ಯಯನ ಮಾಡಲು ಮತ್ತು ಅವರ ಆರ್ಥಿಕತೆಯ ಅನುಭವಗಳನ್ನು ತಿಳಿಯಲು ವ್ಯಕ್ತಿ ಅಧ್ಯಾಯನ ವಿಧಾನ ಬಳಸಿಕೊಳ್ಳಲಾಗಿದೆ.

೧.೬. ಇದುವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ದೇವದಾಸಿ ಪದ್ದತಿಯು ವೇದಗಳ ಕಾಲದಿಂದಲೂ ಇದೆ ಎನ್ನುವುದಕ್ಕೆ ಅನೇಕ ನಿದರ್ಶನಗಳಿವೆ. ಪುರಾಣ ಕಥೆಗಳಲ್ಲಿ ದೇವದಾಸಿಯರ ಬಗ್ಗೆ ಉಲ್ಲೇಖಗಳು ದೊರೆತಿವೆ. ಅದರಂತೆಯೇ ದೇವದಾಸಿಯ ಕುರಿತಾಗಿ ಅನೇಕ ಪುಸ್ತಕಗಳು, ಮಹಾಪ್ರಬಂಧಗಳು ದೊರಕುತ್ತವೆ. ದೇವದಾಸಿ ಪದ್ದತಿಗೆ ಸಂಬಂಧಿಸಿದಂತೆ ಈ ವರೆಗಿನ ಅಧ್ಯಯನಗಳ ವಿವರ ಇಂತಿವೆ.

ಜೋಗನ್ ಶಂಕರ್, ೧೯೯೩, ದೇವದಾಸಿ ಸಂಪ್ರದಾಯ, ವಿಮೋಚನಾ ಪ್ರಕಾಶನ, ಅಥಣಿ, ಪ್ರಕಟಿಸಿದ ಈ ಕೃತಿಯಲ್ಲಿ ಲೇಖಕರು ಆಲಹಳ್ಳಿಯಲ್ಲಿ ದೊರೆತ ಕ್ರಿ ಶ ೧೪೧೩ನೇ ಇಸವಿಯ ಶಾಸನದಲ್ಲಿ ದೇವದಾಸಿ ಪದದ ಉಲ್ಲೇಖವಿರುವುದನ್ನು ತಿಳಿಸುತ್ತಾರೆ. ಅಲ್ಲದೆ ದೇವದಾಸಿ ಪದ್ದತಿಯ

ಬಗ್ಗೆ ಪ್ರಸ್ತಾಪವಿರುವ ಅತ್ಯಂತ ಪ್ರಾಚೀನ ಶಾಸನ ಇದು ಎಮದಿದ್ದಾರೆ. ಈ ಕೃತಿಯಲ್ಲಿ ದೇವದಾಸಿ ಪದ್ಧತಿಯ ಬಗ್ಗೆ ವಿಸ್ತಾರವಾಗಿ ವಿವರಿಸಿದ್ದಾರೆ. ದೇವದಾಸಿಯರ ಆರ್ಥಿಕತೆಯ ಬಗ್ಗೆ ಅಧ್ಯಯನ ಮಾಡ ಹೊರಟ ನನಗೆ ಇದು ಒಂದು ಪ್ರಮುಖ ಆಕರವಾಗಿದೆ.

ಮರುಳು ಸಿದ್ದಯ್ಯ ಎಚ್ ಎಂ, ೧೯೯೪, ಭಾರತ ಸಮಾಜ ಕಾರ್ಯ ವಿಶ್ವಕೋಶ ಸಂಪುಟ-೧, ರಲ್ಲಿ ದೇವದಾಸಿ ಪದ್ಧತಿಯ ಮೂಲ ರೂಪ, ಅದು ಬೆಳೆದು ಬಂದ ದಾರಿಯ ಕುರಿತು ವಿಶ್ಲೇಷಿಸಿದ್ದಾರೆ, ಈ ಕೃತಿಯಲ್ಲಿ ದೇವಾಲಯಗಳಲ್ಲಿ ದೇವದಾಸಿಯರನ್ನು ನಿರ್ಮಾಣ ಮಾಡುವ ಚಟುವಟಿಕೆಗಳು ಹೆಚ್ಚಾಗಿದ್ದವು ಎಮದು ತಿಳಿಸಿದ್ದಾರೆ. ಈ ಕೃತಿಯು ಪ್ರಸ್ತುತ ಅಧ್ಯಯನಕ್ಕೆ ಪೂರಕ ಆಕರವಾಗಿದೆ.

ಮುತ್ತಿ ವಸಂತಕುಮಾರ್, ೨೦೦೨, ಬಸ್ರೂರಿನ ದೇವದಾಸಿ ಪದ್ದತಿ. ಈ ಮಹಾಪ್ರಬಂಧದಲ್ಲಿ ಬಸ್ರೂರಿನ ದೇವದಾಸಿ ಪದ್ಧತಿಯ ಬಗ್ಗೆ ಮತ್ತು ಅಲ್ಲಿನ ದೇವದಾಸಿಯರು ಕಲಾವಿದರಾಗಿ ಪರಿವರ್ತನೆಗೊಂಡ ಬಗೆಗೆ ವಿವರಣೆ ನೀಡಿದ್ದಾರೆ ಈ ಕೃತಿಯೂ ಸಹ ನನ್ನ ಅಧ್ಯಯನಕ್ಕೆ ಪೂರಕ ಆಕರವಾಗಿದೆ.

ವಾಣಿಶ್ರಿ ಟಿ ಕೆ, ೨೦೦೩, ಕರ್ನಾಟಕದ ಚರಿತ್ರೆ ಮತ್ತು ಸ್ತ್ರೀವಾದಿ ನೆಲೆಗಳು, ಪಿಎಚ್ ಡಿ ಮಹಾಪ್ರಬಂಧ. ಸಂಶೋಧಕರು ಈ ಪ್ರಬಂಧದಲ್ಲಿ ದೇವದಾಸಿ ಪದ್ಧತಿಯ ಕುರಿತು ಹೇಳುವ ಸಂದರ್ಭದಲ್ಲಿ ದೇವಾಲಯದಲ್ಲಿ 'ಅಂಗಬೋಗ ರಂಘಬೋಗ' ಎಂಬ ದೇವ ಸೇವಕಿಯರಿದ್ದರು ಅವರನ್ನು ದೇವದಾಸಿ ಎಂದು ಕರೆಯುತ್ತಿದ್ದರು ಎಂದು ವಿವರಣೆ ನೀಡಿದ್ದಾರೆ.

ನಾಗೇಶ್ ಟಿ, ೨೦೦೭, ದೇವದಾಸಿ ಪದ್ದತಿ: ಸ್ತ್ರೀ ಶೋಷಣೆಯ ಒಂದು ಮಜಲು. ಎಂಬ ಲಾಖನದಲ್ಲಿ ದೇವದಾಸಿ ಪದ್ದತಿ ಎನ್ನುವುದು ಸ್ತ್ರೀಯರನ್ನು ಹೇಗೆ ಶೋಷಣೆಗೆ ಗುರಿಮಾಡುತ್ತಿದೆ ಎನ್ನುವುದನ್ನು ತಿಳಿಸಿದ್ದಾರೆ ಅಲ್ಲದೆ ದೇವದಾಸಿಯರ ಅಬಿವೃದ್ಧಿಗೆ ಸರ್ಕಾರ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ತಿಳಿಸಿದ್ದಾರೆ. ಪ್ರಸ್ತುತ ನಿಬಂಧದಲ್ಲಿ ದೇವದಾಸಿಯರ ಆಥಿಕ ಬದಲಾವಣೆಗೆ ಸರ್ಕಾರದ ಯೋಜನೆಗಳ ನೆರುವಗಲ ಕುರಿತು ಚರ್ಚಿಸುವ ಸಂದರ್ಭದಲ್ಲಿ ಇ ಕೃತಿಯು ಉಪಯುಕ್ತ ಆಕರವಾಗುವುದು.

ಕೊತ್ಲಮ್ಮ, ೨೦೦೮, ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ(ಕುಡ್ಲಿಗಿ ಪಟ್ಟಣದ ಬೇಡಬುಡಕಟ್ಟು ದೆವದಾಸಿ ಸಮುದಾಯವನ್ನು ಅನುಲಕ್ಷಿಸಿ) ಪಿಎಚ್ ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ಸಂಶೋಧಕರು ಈ ಪ್ರಬಮಧದಲ್ಲಿ ಮಾನವನು ತನ್ನ ಸುಖ-ದುಃಖ, ಹುಟ್ಟು-ಸಾವು ಮತ್ತು ಜರಗಳಿಂದ ಮುಕ್ತವಾಗಬೇಕೆಂಬ ಕಾರಣದಿಂದ ಅಗೋಚರವಾದ ಶಕ್ತಿಯ ಕೃಪೆಗೆ ಪಾತ್ರನಾಗಲು ಮುಂದಾದನು ಆ ಸಂದರ್ಭದಲ್ಲಿ ಆ ಅಗೋಚರ ಶಕ್ತಿಯನ್ನು ಸಂತೃಪ್ತಿಪಡಿಸಲು ಸೂಕ್ತ ಮಾರ್ಗ ಹುಡುಕಿ ಪೂಜೆ, ಆಹುತಿ, ಪ್ರಾರ್ಥನೆ ಮುಂತಾದವುಗಳನ್ನು ರೂಢಿಗೆ ತಂದನು ಎಂದು ಹೇಳಿದ್ದಾರೆ. ಆದಿ ಮಾನವನು ನಾಗರಿಕತೆಯ ಮೊದಲ ಹಂತದಲ್ಲಿ ಪ್ರಕೃತಿಯ ವೈಚಿತ್ಯಗಳಿಗೆ

ಬೇರಗಾಗಿ ಅದಕ್ಕೆ ಕಾರಣವಾದ ಅಗೋಚರ ಶಕ್ತಿಯನ್ನ ದೇವರು ಎಂದು ಕರೆದು ವಿವಿಧ ದೇವರುಗಳನ್ನು ಸೃಷ್ಟಿಸಿಕೊಂಡ ಈ ದೇವರುಗಳನ್ನು ತೃಪ್ತಿಪಡಿಸುವುದಕ್ಕಾಗಿ ನಾನಾ ರೀತಿಯ ಆಚರಣೆಗಳನ್ನು ರೂಢಿಗೆ ತಂದ ಪರಿಣಾಮವಾಗಿ ಬಲಿ ಕೊಡುವ, ಬಸವಿ ಬಿಡುವ, ಬೆತ್ತಲೆ ಸೇವೆ ನಡೆಸುವಂತಹ ಅನಿಷ್ಟ ಪದ್ಧತಿ ಹುಟ್ಟಿಕೊಂಡವು. ಹೀಗೆ ಮನುಷ್ಯನ ಅಂಧಶ್ರದ್ದೆ ನಂಬಿಕೆಗಳು ದೇವದಾಸಿ ಸಂಪ್ರದಾಯದಂತಹ ಆಚರಣೆಗಳ ಬೆಳವಣಿಗೆಗೆ ಕಾರಣವಾಗಿರಬಹುದು ಎಂದಿದ್ದಾರೆ.

ಶಿವಾನಂದ ಎಸ್ ವಿರಕ್ತಮಠ(ಸಂ), ೨೦೦೮, ಮಹಿಳಾ ಅಧ್ಯಯನ, ಶಾಂತಮಠ,(ಲೇ), ದೇವದಾಸಿ ಪದ್ಧತಿ ಒಂದು ವಿಶ್ಲೇಷಣೆ. ಈ ಲೇಖನದಲ್ಲಿ ದೇವದಾಸಿ ಪದ್ಧತಿಯ ಆಚರಣೆ, ದೇವದಾಸಿ ಪದ್ಧತಿಗೆ ಬಿಡುವ ನಿಯಮ, ಅದರ ಸಾಮಾಜಿಕ ಸ್ಥಿತಿ ಗತಿಗಳ ಬಗ್ಗೆ ತಿಳಿಸಿದ್ದಾರೆ. ಕರ್ನಾಟಕದ ೧೪ ಜಿಲ್ಲೆಗಳಲ್ಲಿ, ೬೦ ಸಾವಿರಕ್ಕೂ ಹೆಚ್ಚು ದೇವದಾಸಿ ಮಹಿಳೆಯರು ಇರುವರು, ರೇಣುಕ ಮಾಪುರಾತಾಯಿ ಇತ್ಯಾದಿ, ದೇವರುಗಳನ್ನು ಆರಾಧಿಸಿ ಕೆಲವು ಆಚರಣೆಗಳನ್ನು ಮಾಡುವಲ್ಲಿ ಮೇಲ್ಜಾತಿ ಸಮುದಾಯದ ಜನರು ಇರುವರು ಮನೆಯಲ್ಲಿಯೇ ಬೇವಿನುಡಿಗೆಯನ್ನುಟ್ಟು, ಸೇವೆ ಮಾಡುವ ಪ್ರಕರಣಗಳು ಇವೆ. ಆದರೆ ಇವರ್‍ಯಾರು ಮುತ್ತು ಕಟ್ಟಿಸಿಕೊಂಡ ದೇವದಾಸಿಯರಲ್ಲ ಆದರೆ ದಲಿತ ಸಮುದಾಯದ ಮಹಿಳೆಯರನ್ನು ಮಾತ್ರ ದೇವದಾಸಿಯರನ್ನಾಗಿಸಲಾಗಿದೆ ಎಂಬ ಮಾಹಿತಿಯನ್ನು ನೀಡಿದ್ದಾರೆ.

ಶೈಲಜ ಹಿರೇಮಠ(ಸಂ), ೨೦೧೦, ಮಹಿಳಾ ಅಧ್ಯಯನ, ಸಂಪುಟ–೧೨, ಸಂಚಿಕೆ–೨, ಭಾರತಿ ಕೆ. ವಿಜಾಪುರ(ಲೇ), ದೇವದಾಸಿ ಪದ್ಧತಿಯೂ ಮತ್ತು ವೃದ್ಧ ದೇವದಾಸಿಯೂ.... ಲೇಖಕರು ಈ ಕೃತಿಯಲ್ಲಿ ಉತ್ತರ ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಕೆಳಸ್ತರದ ಹೆಣ್ಣು ಮಕ್ಕಳ ಕೊರಳಿಗೆ ಮುತ್ತು ಕಟ್ಟುವ ಮೂಲಕ ದೇವತೆ, ದೇವರೊಂದಿಗೆ ಮದುವೆ ಮಾಡಿ ದೇವದಾಸಿ ಪದ್ಧತಿಗೆ ಬಿಡುವ ಇತಿಹಾಸವಿದೆ ಎಮದು ತಿಳಿಸಿದ್ದಾರೆ. ದೇವದಾಸಿಯರು ವೃದ್ಧರಾದಮೇಲೆ ಅವರ ಸ್ಥಿತಿ ಗತಿ ಏನು ಎಂಬುದನ್ನು ವಿಶ್ಲೇಷಿಸಿದ್ದಾರೆ. ದೇವದಾಸಿಯರ ಸಾಮಾಜಿಕ ಸ್ಥಿತಿಗತಿಯನ್ನು ತಿಳಿಸುವು ಸಂದರ್ಭದಲ್ಲಿ ಈ ಕೃತಿಯು ಪೂರಕ ಆಕರವಾಗಿದೆ.

ಬಾರತೀಯ ಜೀವಿ, ೨೦೧೧, ದೇವದಾಸಿ ಪ್ರಸಂಗದೀಪ್ತಿ. ಈ ಪುಸ್ತಕದಲ್ಲಿ ದೇವದಾಸಿಯರ ಆಚರಣೆಗಳ ಬಗ್ಗೆ ವಿವರಣೆ ನೀಡುವ ಮೂಲಕ ಈ ಪದ್ಧತಿಯನ್ನು ನಿರ್ಮೂಲನೆ ಮಾಡುವ ಕ್ರಮಗಳನ್ನು ತಿಳಿಸಿಕೊಟ್ಟಿದ್ದಾರೆ. ಈ ಕೃತಿಯೂ ಸಹ ನನ್ನ ಅಧ್ಯಯನ ವಿಷಯಕ್ಕೆ ಪೂರಕ ಆಕರವಾಗಿದೆ.

ಪ್ರಜಾವಾಣಿ, ಆವೃತಿ ೩, ದಿನಾಂಕ ೨೬.೦೯.೨೦೧೨ರ ಪತ್ರಿಕೆಯ ವರದಿ.

ದಾವಣಗೆರೆ ಜಿಲ್ಲೆ ಹರಪನಹಳ್ಳಿ ತಾಲೂಕಿನ ಉಚ್ಚಂಗಿದುರ್ಗದಲ್ಲಿ ಭರತ ಹುಣ್ಣಿಮೆ(ಮುತ್ತೈದೆ ಹುಣ್ಣಿಮೆ)ಯಂದು ಮಾಜಿ ದೇವದಾಸಿಯರು ತಮ್ಮ ಅನಿಷ್ಟ ಪದ್ಧತಿ ನವೀಕರಣಗೊಳಿಸಿಕೊಂಡರು ಮುತ್ತೈದೆ ಹುಣ್ಣಿಮೆ ಎಂದೇ ಕರೆಯಲಾಗುವ ಈ ದಿನ ಉಚ್ಚಂಗಿದುರ್ಗಕ್ಕೆ ರಾಜ್ಯದ ವಿವಿಧೆಡೆಯ ಸಾವಿರಾರು ದೇವದಾಸಿಯರು ಆಗಮಿಸಿದ್ದರು ಕೈಯಲ್ಲಿನ ಹಸಿರು ಬಳೆ, ಕೊರಳಲ್ಲಿನ ಬಿಳಿ ಮತ್ತು

ಕೆಂಪು ಮುತ್ತಿನ ಸರ, ಪಡ್ಲಗೆ.(ದೇವರ ಸಾಮಾನುಳ್ಳ ಸಣ್ಣ ಪುಟ್ಟಿ)ಯನ್ನು ಮತ್ತೆ ಹೊಸದಾಗಿ ಧರಿಸುವ ದೇವದಾಸಿ ಪದ್ಧತಿ ನವೀಕರಣಗೊಳಿಸಿಕೊಳ್ಳುವ ಧಾರ್ಮಿಕ ಆಚರಣೆ ಕೈಗೊಂಡರು. ಮನೆಯಲ್ಲಿ ಬಡತನ ಹೇಗೋ ೭. ೮ ನೇ ತರಗತಿ ತನಕ ಓದಿದೆವು ಅಷ್ಟರಲ್ಲಾಗಲೇ ತಲೆಯಲ್ಲಿ ಜಡೆ ಕಾಣಿಸಿಕೊಂಡಿತು. ಹಾಗಾಗಿ, ಗ್ರಾಮದ ಮುಖಂಡರು, ಮನೆಯ ಹಿರಿಯರು ಇದು ದೇವಿಯ ಪ್ರತೀಕ ಎಂದು ನಂಬಿ, ನಮಗೆ ಮುತ್ತು ಕಟ್ಟಿಸಿದರು. ಈಗ ಈ ಪದ್ಧತಿಯಿಂದ ಹೊರಬರಲಾದಷ್ಟು ಅದರಲ್ಲಿ ಬೆರೆತಿದ್ದೇವೆ, ನಮಗೆ ಯಾರೂ ಕೂಲಿ ಕೊಡೋದಿಲ್ಲ, ಯುವಕರಿಂದ ಹಿಡಿದು ಮುದುಕರ ತನಕ ಎಲ್ಲ ಆಸೆಯಿಂದಲೇ ನಮ್ಮತ್ತ ಕಣ್ಣು ಹಾಯಿಸುತ್ತಾರೆ. ನಾವು ಕೆಳ ಜಾತಿಯವರು. ಎಂದು ಮೇಲ್ವಾರ್ಗದ ಮಹಿಳೆಯರಿಗೆ ಇಲ್ಲದ ಈ ಪದ್ಧತಿ ನಮಗೇಕೆ ಎಂದು ಎಷ್ಟೋ ಸಲ ಅನಿಸಿದೆ. ನಮಗೂ ಅವರಂತೆ ಮದುವೆಯಾಗಿ ಗಂಡ–ಮಕ್ಕಳ ಜತೆ ಇದ್ದು ಸಂಸಾರ ಮಾಡಬೇಕು ಎಂಬ ಆಸೆಯಾಗುತ್ತೆ. ಆದರೆ ಸಮಾಜ ನಮ್ಮನ್ನು ವೇಶ್ಯಯರಂತೆ ಕಾಣುತ್ತದೆ ಮಾರ್ಯದೆಯಿಂದ ಬದುಕಲು ಆಗದೇ, ಕೂಲಿ ಮಾಡಲು ಆಗದೇ, ತುತ್ತು ಅನ್ನಕ್ಕಾಗಿ ಈ ನೋವು ಅನುಭವಿಸುತ್ತಿದ್ದೆವೆ. ಹೀಗೆ ಹಲವಾರು ಪತ್ರಿಕೆಗಳು, ಪ್ರಬಂಧಗಳು, ಪುಸ್ತಕಗಳು ದೇವದಾಸಿಯರ ಬಗ್ಗೆ ಸಾಕಷ್ಟು ಮಾಹಿತಿಯನ್ನು ನಿಡಿದ್ದರೂ ಅವರ ಆರ್ಥಿಕತೆಯ ಬಗ್ಗೆ ಅದುವರೆಗೆ ಆಗಿರುವ ಅಧ್ಯಯನಗಳು ಕಡಿಮೆಯೆಂದೇ ಹೇಳಬಹುದು. ಆದ್ದರಿಂದ ಪ್ರಸ್ತುತ ನಿಬಂಧದಲ್ಲಿ ದೇವದಾಸಿಯರ ಆರ್ಥಿಕ ಸ್ಥಿತಿಗತಿಯ ಕುರಿತು ಅಧ್ಯಯನಮಾಡಲಾಗುವುದು.

೧.೭. ಅಧ್ಯಯನದ ಸ್ವರೂಪ

ಪ್ರಸ್ತುತ ಸಂಶೋಧನೆಯನ್ನು ಅಧ್ಯಯನದ ಅನುಕೂಲಕ್ಕಾಗಿ ಆರು ಅಧ್ಯಾಯಗಳಾಗಿ ವಿಭಾಗಿಸಲಾಗಿದೆ. ಹಾಗೆಯೇ ಅವಶ್ಯಕತೆಗೆ ತಕ್ಕಂತೆ ಉಪವಿಭಾಗಗಳನ್ನೂ ಮಾಡಿಕೊಳ್ಳಲಾಗಿದೆ. ಈ ಅಧ್ಯಯಗಳು ಒಳಗೊಂಡಿರುವ ವಿಷಯ ಮತ್ತು ಸ್ವರೂಪ ಈ ಕೆಳಗಿನಂತಿದೆ.

ಮೊದಲನೇ ಅಧ್ಯಾಯದಲ್ಲಿ ಉದ್ದೇಶ, ವ್ಯಾಪ್ತಿ ಅಧ್ಯಯನದ ವಿಧಾನ ಇದುವರೆವರೆಗಿನ ಅಧ್ಯಯನಗಳ ಸಮೀಕ್ಷೆ, ಅಧ್ಯಯನಗಳ ಮಹತ್ವ ಮತ್ತು ಸ್ವರೂಪಗಳನ್ನು ವಿಶ್ಲೇಷಿಸಲಾಗಿದೆ.

ಎರಡನೇಯ ಅಧ್ಯಾಯದಲ್ಲಿ ಒಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಭೌಗೋಳಿಕ ಮತ್ತು ಸಾಮಾಜಿಕ, ಸಾಂಸ್ಕೃತಿಕ ಜೀವನ ತಿಳಿಸುತ್ತಾ ದೇವದಾಸಿಯರ ಆರ್ಥಿಕ ಸ್ಥಿತಿಗತಿ ಅಧ್ಯಯನ ಮಾಡಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಇರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ, ಆಚರಣೆಗಳು, ಪದ್ಧತಿಗಳು, ಆರ್ಥಿಕ ಅಭಿವೃದ್ಧಿಯನ್ನು ಅಧ್ಯಯನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ದೇವದಾಸಿಯರ ಅರ್ಥಿಕ ಹಿನ್ನೆಲೆ, ಅವರುಗಳು ದೈನಂದಿನ ಜೀವನದಲ್ಲಿ ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳು ಮತ್ತು ಸವಾಲುಗಳನ್ನು ತಿಳಿಯುವುದು. ದೇವದಾಸಿಯರಿಗೆ ಸರ್ಕಾರ ಕೈಗೊಂಡಿರುವ ಅಭಿವೃದ್ಧಿಯ ಯೋಜನೆಗಳು ಇವುಗಳಿಂದ ಇವರ ಬದುಕು ಯಾವ ಹಂತದಲ್ಲಿ ಬದಲಾವಣೆಯ ಹಾದಿಯಲ್ಲಿ ಸಾಗುತ್ತಿದೆ ಎನ್ನುವುದನ್ನು ತಿಳಿಯುವುದು.

ನಾಲ್ಕನೆ ಅದ್ಯಾಯದಲ್ಲಿ ಸರಕಾರದ ಯೋಜನೆಗಳನ್ನು ಪಡೆಯುವಲ್ಲಿ ದೇವದಾಸಿಯರ ಸಾಧಕ ಮತ್ತು ಬಾಧಕಗಳ ಅಂದರೆ ಯಾವ ವರ್ಗದ ದೇವದಾಸಿಯರಿಗೆ. ಈ ಯೋಜನೆಗಳು ಸಿಗುತ್ತಿವೆ. ಯಾವ ಸಮುದಾಯಕ್ಕೆ ಸೌಲಭ್ಯಗಳು ದೊರೆಯುತ್ತಿಲ್ಲ? ಏಕೆ ಎಂಬ ಅಂಶಗಳನ್ನೂ ದಾಖಲಾತಿಯ ವಿಶ್ಲೇಷಣೆ, ವಿವರಣೆಯನ್ನು ನೀಡುವುದಾಗಿದೆ.

ಐದನೆಯ ಅಧ್ಯಾಯದಲ್ಲಿ ವಿಷಯಕ್ಕೆ ಸಂಬಂಧಿಸಿದ ಉಪಸಂಹಾರ, ಅಧ್ಯಯನದ ಫಲಿತ ಹಾಗೂ ಸಲಹೆಗಳನ್ನು ನೀಡಲಾಗಿದೆ. ಅನುಬಂಧದಲ್ಲಿ ಪರಾಮರ್ಶನ ಗ್ರಂಥಗಳು, ಸಂಕ್ಷೇಪ್ತ ಸೂಚಿ, ಕೋಷ್ಟಕಗಳು ಸಂಪನ್ಮೂಲ ವ್ಯಕ್ತಿಗಳ ಪಟ್ಟಿ, ಛಾಯಚಿತ್ರಗಳನ್ನು ಒಳಗೊಂಡಂತೆ ಈ ಅಧ್ಯಯವು ರೂಪಿಸಲಾಗುವುದು.

ಅಡಿಟಿಪ್ಪಣಿ

೧. ಕೊತ್ಲಮ್ಮ, ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ(ಕೂಡ್ಲಿಗಿ ಪಟ್ಟಣದ ಬೇಡಬುಡಕಟ್ಟು ದೆವದಾಸಿ ಸಮುದಾಯವನ್ನು ಅನುಲಕ್ಷಿಸಿ) ಪಿಎಚ್ ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೮, ಪುಟ-೫೩.

೨. ಅದೇ ಪುಟ-೫೪

೩. ಶಿವಾನಂದ ಎಸ್ ವಿರಕ್ತಮಠ(ಸಂ), ಮಹಿಳಾ ಅಧ್ಯಯನ, ಶಾಂತಮಠ(ಲೇ), ದೇವದಾಸಿ ಪದ್ದತಿ ಒಂದು ವಿಶ್ಲೇಷಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮, ಪುಟ-೭೭.

೪. ಅದೇ ಪುಟ-೭೮.

೫. ಶೈಲಜಾ ಹಿರೇಮಠ(ಸಂ), ಮಹಿಳಾ ಅಧ್ಯಯನ, ಭಾರತಿ ಕೆ. ಬಿಜಾಪುರ(ಲೇ), ದೇವದಾಸಿ ಪದ್ದತಿಯೂ ಮತ್ತು ವೃದ್ಧ ದೇವದಾಸಿಯೂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪುಟ-೧೨೫.

ಅಧ್ಯಾಯ: ಎರಡು
ಹಗರಿಬೊಮ್ಮನಹಳ್ಳಿ ತಾಲೂಕಿನ ಹಿನ್ನೆಲೆ

೨.೧. ಭೌಗೋಳಿಕ ಹಿನ್ನೆಲೆ

೨.೨. ಪೌರಾಣಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೩. ಜನಸಂಖ್ಯೆ

ಅಧ್ಯಾಯ: ಎರಡು
ಹಗರಿಬೊಮ್ಮನಹಳ್ಳಿಯ ಭೌಗೋಳಿಕ ಹಿನ್ನೆಲೆ

೨.೧. ಭೌಗೋಳಿಕ ಪರಿಚಯ


ದಖ್ಖನ್ ಪ್ರಸ್ಥಭೂಮಿಯ ದಕ್ಷಿಣ ಭಾಗದಲ್ಲಿ, ಕರ್ನಾಟಕದ ಮಧ್ಯಭಾಗದ ಬಯಲು ಸೀಮೆಯಲ್ಲಿ ನೆಲೆಗೊಂಡಿರುವ ಬಳ್ಳಾರಿ ಜಿಲ್ಲೆಯ ಏಳು ತಾಲೂಕುಗಳಲ್ಲಿ ಹಗರಿಬೊಮ್ಮನಹಳ್ಳಿ ತನ್ನದೇ ಆದ ವಿಶಿಷ್ಟ ಸ್ಥಾನಮಾನವನ್ನು ಹೊಂದಿದೆ. ಈ ಜಿಲ್ಲೆಯಲ್ಲಿನ ಇತರ ತಾಲೂಕುಗಳಿಗೆ ಹೋಲಿಸಿದಲ್ಲಿ ಹಡಗಲಿಯನ್ನು ಹೊರತು ಪಡಿಸಿದರೆ ಚಿಕ್ಕ ತಾಲೂಕು ಇದು. ಜನಸಂಖ್ಯಾ ದೃಷ್ಟಿಯಿಂದಲೂ ಕೊನೆಯ ಸ್ಥಾನ ಪಡೆದುಕೊಂಡಿದೆ.

"ಸಮುದ್ರ ಮಟ್ಟದಿಂದ ೫೧೩ ಮೀಟರ ಎತ್ತರದಲ್ಲಿರುವ ಈ ತಾಲೂಕಿನ ಪೂರ್ವದಲ್ಲಿ ಕೂಡ್ಲಿಗಿ ಪಶ್ಚಿಮದಲ್ಲಿ ಹಡಗಲಿ ಉತ್ತರದಿಂದ ಹೊಸಪೇಟೆ ಹಾಗೂ ತುಂಗಭದ್ರ ನದಿ ಮತ್ತು ದಕ್ಷಿಣಕ್ಕೆ ಕೂಡ್ಲಿಗಿ ತಾಲೂಕಿನ ಕೊಟ್ಟೂರು ಹಾಗೂ ಹರಪನಹಳ್ಳಿ ತಾಲೂಕುಗಳಿವೆ. ೭೫-೪೦ ಮತ್ತು ೭೨-೧೧ ರೇಖಾಂಶ ಮತ್ತು ೧೪-೧೩ ಮತ್ತು ೧೫-೫೦ ಅಕ್ಷಾಂಶದ ಮಧ್ಯೆ ಇರುವ ಬಳ್ಳಾರಿ ಜಿಲ್ಲೆಯಲ್ಲಿ ಈ ತಾಲೂಕು ವಿಸ್ತಾರಿಸಿದೆ. ಕೆಲವೆಡೆ ಕಲ್ಲುಗುಂಡು ಬಂಡೆಗಳ ಗುಡ್ಡಗಳಿಗೆ ಅಷ್ಟೇನು ದಟ್ಟವಲ್ಲದ ಸ್ವಲ್ಪ ಅರಣ್ಯ ಪ್ರದೇಶವಿದೆ. ಉಳಿದಂತೆಲ್ಲ ಬಯಲು ಸೀಮೆಯೇ ಇಲ್ಲ ಯಾವುದೇ ಖನಿಜಗಳಾಗಲಿ ಅವುಗಳಿಗೆ ಸಂಬಂದಿಸಿದ ಕಾರ್ಖಾನೆಗಳಾಗಲಿ ಇಲ್ಲ. ಕರ್ನಾಟಕದ ಭೂಪಟದಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವನ್ನೂ ಪಡೆದಿರುವ ಬಳ್ಳಾರಿ ಜಿಲ್ಲೆ ವಿಜಯನಗರ ಸಾಮ್ರಾಜ್ಯದ ಹಂಪಿಗೆ, ಬಿಸಿಲಿಗೆ, ತುಂಗಭದ್ರ ಆಣೆಕಟ್ಟೆಗೆ ಪ್ರಸಿದ್ದವಾಗಿದೆ. ಈ ಜಿಲ್ಲೆಯಲ್ಲಿ ಈಗ ಬಳ್ಳಾರಿ, ಸಿರುಗುಪ್ಪ, ಸಂಡೂರು, ಕೂಡ್ಲಿಗಿ, ಹೊಸಪೇಟೆ, ಹಗರಿಬೊಮ್ಮನಹಳ್ಳಿ, ಕೊಟ್ಟರು, ಮತ್ತು ಹೂವಿನ ಹಡಗಲಿ ಸೇರಿ ಕಂಪ್ಲಿ ಸೇರಿ ೦೯ ತಾಲೂಕುಗಳಿವೆ.

ಹಗರಿಬೊಮ್ಮನಹಳ್ಳಿ ಯಾವ ಐತಿಹಾಸಿಕ ಹಿನ್ನೆಲೆ ಇಲ್ಲದೇ ವರ್ತಮಾನದ ಊರಾಗಿದೆ. ಬೊಮ್ಮನಹಳ್ಳಿ ಎಂದ ತಕ್ಷಣ ನಮಗೆ ರಾಷ್ಟಕವಿ ಕುವೆಂಪುರವರ "ಬೊಮ್ಮನಹಳ್ಳಿ ಕಿಂದರಜೋಗಿ"

ಕೃತಿ ನೆನಪಾಗುತ್ತದೆ. ಆದರೆ ಆ ಕೃತಿಗೂ ಈ ಬೊಮ್ಮನಹಳ್ಳಿಗೂ ಯಾವುದೇ ಸಂಬಂಧವಿಲ್ಲ ನಮ್ಮ ಇತಿಹಾಸದುದ್ದಕ್ಕೂ ನದಿದಂಡೆಯಲ್ಲಿ ನಗರ ಸಂಸ್ಕೃತಿಗಳು ಬೆಳೆದಿದ್ದು ಕಂಡು ಬರುತ್ತದೆ. ಹಾಗೆಯೇ ಹಗರಿಬೊಮ್ಮನಹಳ್ಳಿ ಕೂಡಾ ಹಗರಿ ದಂಡೆಯಲ್ಲಿರುವ ಊರುಗಳನ್ನೂ ಗುರುತಿಸುವ ಸಲುವಾಗಿ ಹಗರಿ ಸೇರಿಸಿ ಹೇಳುವುದು ರೂಢಿಯಾಗಿ ಬೆಳೆದು ಬಂದಿದೆ. ಉದಾಹರಣೆಗೆ ಹಗರಿ ಕ್ಯಾದಿಗಿಹಳ್ಳಿ ಹಗರಿಗಜಾಪುರ, ಹಗರಿಬೊಮ್ಮನಹಳ್ಳಿ ಹಗರಿಬೊಮ್ಮನಹಳ್ಳಿಗೆ ಈ ಹೆಸರು ಬರಲು ಕಾರಣ ಹಿಂದಿನ ಕಾಲದಲ್ಲಿ ನಮ್ಮ ಹಿರಿಯರು ಬೋರ್ಗರೆದು ಹರಿಯುತ್ತಿದ್ದ ತುಂಗಭದ್ರ ತೀರದಲ್ಲಿ ನೆಲೆಸಿದ್ದರು. ಅವರಿಗೆ ಬಳ್ಳಾರಿಯ ಪಕ್ಕದಲ್ಲಿ ವಿಶಾಲವಾಗಿ ಪ್ರವಹಿಸುವ ನದಿಯು ಹಳ್ಳದಂತೆ ಕಂಡಿತು ಅದನ್ನು ಹಗರಿ ಎಂದರು. ಅದಕ್ಕಿಂತ ಕೊಂಚ ಕಿರಿದಾದ ಮತ್ತೊಂದು ಪ್ರವಾಹವನ್ನು ಚಿಕ್ಕ ಹಗರಿ ಎಂದರು. ಈ ಚಿಕ್ಕ ಹಗರಿ(ಪಗರೆ) ಯು ದಡದಲ್ಲಿರುವ ಬೊಮ್ಮ(ಬ್ರಹ್ಮ)ನ ಹಳ್ಳಿಯೇ ಈಗ ಹಗರಿಬೊಮ್ಮನಹಳ್ಳಿಯಾಗಿದೆ. ಈ ಊರು ೧೯೫೦ ರಲ್ಲಿ ತುಂಗಭದ್ರೆಯಲ್ಲಿ ಮುಳುಗಡೆಯಾದವರಿಗೆ ಪುನರ್ವಸತಿ ಕಲ್ಪಿಸಲು ನಿರ್ಮಿಸಿದ ರಾಮನಗರ, ಅರಳಿಹಳ್ಳಿ, ಕುಗುದಗಡ್ಡಿ ಜೊತೆಗೆ ಹಗರಿ ಯೋಜನೆಯಲ್ಲಿ ಮುಳುಗಡೆಯಾದ ಗ್ರಾಮಗಳಿಂದ ವಲಸೆ ಬಂದ ಜನರು ಇಲ್ಲಿ ನೆಲೆಸಿದ್ದರಿಂದ ಈ ಊರಿಗೆ ಹೊಸಕಳೆ ಬಂದಿದೆ. ೧೯೪೫ ರ ವರೆಗೆ ಗ್ರಾಮವಾಗಿದ್ದ ಈ ಊರು ಆ ಸಮಯದಲ್ಲಿ ಸ್ಥಾಪಿತವಾದ ಎಣ್ಣೆ ಉದ್ಯಮವೊಂದರಿಂದ ಇಲ್ಲಿನ ಬೆಳವಣಿಗೆ ತೀವ್ರಗತಿಯಲ್ಲಾಯಿತು. ಈ ರೀತಿಯಾಗಿ ಹಳೇ ಹಗರಿಬೊಮ್ಮನಹಳ್ಳಿ ಹಾಗೂ ರೈತಾಪಿ ಮತ್ತು ವ್ಯಾಪಾರಿ ವರ್ಗದ ಜನರು ನೆಲೆಸಿದ ರಾಮನಗರ (ಹೊಸ ಹಗರಿಬೊಮ್ಮನಹಳ್ಳಿ) ಈ ಎರಡು ಬೆಳೆದು ಕೊಡಿಕೊಂಡು ಒಟ್ಟಾರೆಯಾಗಿ ಹಗರಿಬೊಮ್ಮನಹಳ್ಳಿಯಾಗಿದೆ. ಆ ಸಮಯದಲ್ಲಿ ಕೆಲವು ಗ್ರಾಮಗಳು ಹಗಡಲಿ ತಾಲೂಕಿನಲ್ಲಿ ಇನ್ನೂ ಕೆಲವು ಆಗಿನ ಮಲ್ಲಾಪುರ ತಾಲೂಕಿನಲ್ಲಿ ಉಳಿದವು ಕೂಡ್ಲಿಗಿ ಮತ್ತು ಹೊಸಪೇಟೆ ತಾಲೂಕಿನಲ್ಲಿದ್ದವು ಹಗರಿಬೊಮ್ಮನಹಳ್ಳಿ ತಾಲೂಕಾಗಬೇಕೆಂದು ಈ ಬಾಗದ ಜನರು ಮನವಿಗೆ ಸ್ಪಂದಿಸಿದ ಅಂದಿನ ಶಾಸಕರಾಗಿದ್ದ ಶ್ರೀ ಅಂದಾನಪ್ಪನ ಅದಕ್ಕಾಗಿ ಅವಿರತವಾಗಿ ಶ್ರಮಿಸುತ್ತಾ ಅಂದಿನ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ದೇವರಾಜು ಅರಸ ಅವರ ಮೇಲೆ ಒತ್ತಡ ತಂದರು. ಇದರ ಫಲವಾಗಿ ಹಗರಿಬೊಮ್ಮನಹಳ್ಳಿ ಕೇಂದ್ರವಾಗಿ ಹೊಸದೊಂದು ತಾಲೂಕು ೦೧-೦೭-೧೯೭೩ ರಲ್ಲಿ ಉದಯಿಸಿತು. ಅದೇ ಸಮಯದಲ್ಲಿ ಹಗರಿಬೊಮ್ಮನಹಳ್ಳಿ ಜಲಾಶಯದ ನೀರು ರೈತರಿಗೆ ಒದಗಿದ್ದರಿಂದ ಬೆಳವಣಿಗೆಗೆ ನಾಂದಿಯಾಯಿತು. ವ್ಯಾಪಾರ ವಾಣಿಜ್ಯಕ್ಕಾಗಿ ಬಹಳ ಪ್ರಸಿದ್ಧಿ ಪಡೆದ ಈ ಊರಿನಲ್ಲಿ ಅಹೋರಾತ್ರಿ ಖಾದ್ಯತೈಲ ತಯಾರಿಸುವ ಎಣ್ಣೆ ಗಿರಣಿಗಳಿದ್ದವು. ಪಶ್ಚಿಮ ತಾಲೂಕುಗಳಲ್ಲೇ ಬಲಾಢ್ಯವಾದ ವ್ಯಾಪಾರಿ ಸ್ಥಳವಾಗಿ ಈ ಊರು ಬೆಳೆದಿದೆ. ಸುಂದರವಾದ ವೆಂಕಟೇಶ್ವರ ಸ್ವಾಮಿಯ ತೇರು ಆ ಸಮಯದಲ್ಲಿ ನಡೆದ ಜಾತ್ರೆ, ಛತ್ರ, ಗುರುಭವನ ಸಿನೆಮಾ ಮಂದಿರಗಳು ಅಪೂರ್ವವೇನಿಸುವ ನವೀನ ವಾಸವೀಯ ದೇವಸ್ಥಾನ ತಾಲೂಕಿನ ಎಲ್ಲಾ ಪ್ರಮುಖ ಕಛೇರಿಗಳು ಹಗರಿಬೊಮ್ಮನಹಳ್ಳಿಗೆ ಬಂದು ಹೋಗುವ ಜನರ ಸಂಖ್ಯೆಯನ್ನು ಹೆಚ್ಚಿಸಿವೆ.೧ ಹೀಗೆ ತನ್ನದೇ ಆದ ಭೌಗೋಳೀಕ ಹಿನ್ನೆಲೆಯನ್ನು ಹೊಂದಿರುವ ಹಗರಿಬೊಮ್ಮನಹಳ್ಳಿಯು ಸಾಮಾಜಿಕವಾಗಿಯೂ, ಸಾಂಸ್ಕೃತಿಕವಾಗಿಯೂ ತನ್ನದೇ ಆದ ವೈಶಿಷ್ಟ್ಯತೆಯನ್ನು ಹೊಂದಿದೆ.

ಕೋಷ್ಟಕ: ೨.೧ ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲಾ ಹೆಚ್‌ಬಿ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮವಾರು						
ದೇವದಾಸಿ ಕುಟುಂಬದ ಜನಸಂಖ್ಯಾ ಪ್ರಮಾಣ						
ಕ್ರ.ಸಂ.	ನೆಲೆಗಳು	ಕುಟುಂಬಗಳು	ಜನಸಂಖ್ಯೆ			ಶೇಕಡಾ
			ಗಂಡು	ಹೆಣ್ಣು	ಒಟ್ಟು	%
೧	ಮರಿಯಮ್ಮನಹಳ್ಳಿ	೧೦	೧೫	೨೧	೩೬	೧೮.೭೫
೨	ರಾಮನಗರ	೧೦	೧೨	೨೬	೩೮	೧೯.೭೯
೩	ಚಿಲುಗೊಡು	೧೦	೧೬	೨೦	೩೬	೧೮.೭೫
೪	ಬನ್ನಿಗೋಳ್	೧೦	೧೯	೨೨	೪೧	೨೧.೩೫
೫	ಹಂಪಾಪಟ್ಟಣ	೧೦	೧೦	೩೧	೪೧	೨೧.೩೫
ಒಟ್ಟು		೫೦	೭೨	೧೨೦	೧೯೨	




ಕೋಷ್ಟಕ-೨.೧

ಹಗರಿಬೊಮ್ಮನಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಐದು ಗ್ರಾಮಗಳ ದೇವದಾಸಿಯರ ಮಕ್ಕಳ ಜನಸಂಖ್ಯೆ ಪ್ರಮಾಣ ಸಮೀಕ್ಷೆಗೆ ಒಳಪಡಿಸಲಾಗಿದೆ. ಮರಿಯಮ್ಮನಹಳ್ಳಿಯಲ್ಲಿ ಹತ್ತು ಕುಟುಂಬ ಇದ್ದು ಅದರಲ್ಲಿ ಗಂಡು ೧೫, ಹೆಣ್ಣು ೨೧, ಒಟ್ಟು-೩೬ ಜನ ಇರುವುದನ್ನು ನೋಡುತ್ತೆವೆ. ಶೇಕಡವಾರು ನೋಡಿದಾಗ ೧೮.೭೦%ರಷ್ಟು ಕಂಡು ಬರುತ್ತದೆ. ಹೀಗೆ ರಾಮನಗರದಲ್ಲಿ ಹತ್ತು ಕುಟುಂಬಗಳನ್ನು ಸಮೀಕ್ಷೆಗೆ ಒಳಪಡಿಸಿದಾಗ ಗಂಡು ೧೨, ಹೆಣ್ಣು ೨೬, ಒಟ್ಟು ೩೮ ಶೇಕಡವಾರು ೧೯.೭೯% ಹಾಗೂ ಚಿಲುಗೋಡು ಗ್ರಾಮ ಮಕ್ಕಳ ಪ್ರಮಾಣ ಗಂಡು ೧೬, ಹೆಣ್ಣು ೨೦, ಒಟ್ಟು ೩೬ ಶೇಕಡವಾರು ೧೪.೭೫% ಬನ್ನಿಗೋಳದಲ್ಲಿ ಗಂಡು ೧೯ ಹೆಣ್ಣು ೨೨, ಒಟ್ಟು ೪೧, ಶೇಕಡವಾರು ೨೧.೩೫% ಮತ್ತು ಹಂಪಾಪಟ್ಟಣ ಗ್ರಾಮದಲ್ಲಿ ಗಂಡು ೧೦, ಹೆಣ್ಣು ೩೧, ಒಟ್ಟು ೪೧ ಶೇಕಡವಾರು ೨೧.೩೫% ಈ ರೀತಿಯಲ್ಲಿ ಐದು ಗ್ರಾಮಗಳ ದೇವದಾಸಿ ಮಕ್ಕಳ ದಾಖಲಾತಿಗಳು ದೊರತಿವೆ ಎಂದು ತಿಳಿದಿರುತ್ತದೆ. ಇಲ್ಲಿ ಅತಿ ಹೆಚ್ಚಾಗಿ ೧೨೦ ಹೆಣ್ಣು ಮಕ್ಕಳು ಇದ್ದಾರೆ ೭೨ ಗಂಡು ಮಕ್ಕಳು ಇದ್ದಾರೆ ಗಂಡು ಮಕ್ಕಳೂ ಮದುವೆಯ ನಂತರ ತಾಯಿಯನ್ನು ನೋಡಿಕೋಳ್ಳುವುದೆ. ಬೇರೆ ಮನೆಯಲ್ಲಿ ಜೀವನ ನಡೆಸಿಕೊಂಡು ಹೊಗುತ್ತಾರೆ. ಹೆಣ್ಣು ಮಕ್ಕಳ ಮದುವೆಯಾಗಿರುವ ಕೇಲವರು ಮದುವೆಯಾಗಿ ಮತ್ತೇ ಇದೇ ಸಂಪ್ರದಾಯಕ್ಕೆ ಗುರಿಯಾಗುತ್ತಿದ್ದಾರೆ. ಕುಟುಂಬ ಬೆಳೆಯಬೇಕು ಎನ್ನುವ ಅಂಶದಿಂದ, ಆರ್ಥಿಕವಾಗಿ ಹಿಂದುಳಿದಿರಿವುದರಿಂದ ಈ ಪದ್ದತಿ ಇನ್ನೂ ಜೀವಂತವಾಗಿದೆ ಎಂದು ತಿಳಿಯುತ್ತದೆ.

ಕೋಷ್ಟಕ-೨.೨ ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲಾ ಹೆಚ್‌ಬಿ ಹಳ್ಳಿ ತಾಲೂಕಿನ ಗ್ರಾಮವಾರು, ಜಾತಿವಾರು ದೇವದಾಸಿಯರ ಕುಟುಂಬಗಳ ಪ್ರಮಾಣ

ಕ್ರ.ಸಂ.	ನೆಲೆಗಳು	ಕುಟುಂಬಗಳು	ಜಾತಿಗಳು		
			ಪ.ಜಾ.	ಪ.ಪಂ.	ಪ್ರವರ್ಗ-೧
೧	ಮರಿಯಮ್ಮನಹಳ್ಳಿ	೧೦	೩	೭	೦
೨	ರಾಮನಗರ	೧೦	೪	೩	೩
೩	ಚಿಲುಗೊಡು	೧೦	೬	೩	೧
೪	ಬನ್ನಿಗೋಳ್	೧೦	೩	೭	೦
೫	ಹಂಪಾಪಟ್ಟಣ	೧೦	೪	೪	೨
ಒಟ್ಟು		೫೦	೨೦	೨೪	೬



ಕೋಷ್ಟಕ–೨.೨ ಮತ್ತು ಕೋಷ್ಟಕ–೧ರಲ್ಲಿ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ ಐದು ಗ್ರಾಮಗಳ ದೇವಾದಾಸಿ ಜಾತಿ ವರ್ಗಗಳ ಸಮೀಕ್ಷೆಯನ್ನು ಕೈಕೊಂಡಾಗ ಮರಿಯಮ್ಮನಹಳ್ಳಿಯಲ್ಲಿ ಪರಿಶಿಷ್ಟ ಜಾತಿ ದೇವದಾಸಿಯರು ಮೂರು ಕುಟುಂಬ ಪರಿಶಿಷ್ಟ ಪಂಗಡದಲ್ಲಿ ಏಳು ಕುಟುಂಬಗಳು ರಾಮನಗರದಲ್ಲಿ, ಪರಿಶಿಷ್ಟ ಜಾತಿ ದೇವದಾಸಿಯರು ನಾಲ್ಕು ಕುಟುಂಬಗಳು, ಪರಿಶಿಷ್ಟ ಪಂಗಡ ಮೂರು ಮತ್ತು ಪ್ರವರ್ಗ–೧ ರಲ್ಲಿ ದೇವದಾಸಿಯರು ಮೂರು ಕುಟುಂಬಗಳು ಕಂಡು ಬರುತ್ತವೆ. ಹೀಗೆ ಚಿಲುಗೋಡು ಗ್ರಾಮದಲ್ಲಿ ಪರಿಶಿಷ್ಟ ಜಾತಿ ದೇವದಾಸಿಯರು ಆರು ಪರಿಶಿಷ್ಟ ಪಂಗಡ ಮೂರು , ಪ್ರವರ್ಗ–೧ ಒಂದು ಕುಟುಂಬ, ಬನ್ನಿಗೋಳ ಹಂಪಾಪಟ್ಟಣ ಗ್ರಾಮದಲ್ಲಿ ಪರಿಶಿಷ್ಟ ಜಾತಿ ನಾಲ್ಕು ಕುಟುಂಬ ಪರಿಶಿಷ್ಟ ಪಂಗಡ ನಾಲ್ಕು ಮತ್ತು ಪ್ರವರ್ಗ–೧ ಎರಡು ಕುಟುಂಬಗಳು ದೇವದಾಸಿಯರ ಸಮೀಕ್ಷೆಯ ಒಳಪಡಿಸಿದಾಗ ಅತಿ ಹೆಚ್ಚಾಗಿ ಪರಿಶಿಷ್ಟ ಪಂಗಡದವರು ಎಂದು ತಿಳಿದಿರುತ್ತದೆ.

ಸಮೀಕ್ಷೆಗೊಳಪಟ್ಟ ಐದು ಗ್ರಾಮ, ಐವತ್ತು ದೇವದಾಸಿಯರ ಕುಟುಂಬಗಳ ಶೇಕಡಾವಾರು ನೋಡಿದಾಗ ಪರಿಶಿಷ್ಟ ಜಾತಿಯಲ್ಲಿ ೪೦%ರಷ್ಟು ಪರಿಶಿಷ್ಟ ಪಂಗಡದಲ್ಲಿ ೪೮%ರಷ್ಟು ಮತ್ತು ಪ್ರವರ್ಗ–೧ರಲ್ಲಿ ೧೨%ರಷ್ಟು ದೇವದಾಸಿಯರುವುದು ಅಂಕಿ–ಅಂಶಗಳಿಂದ ತಿಳಿದು ಬರುತ್ತದೆ.



ಈ ಜಾತಿವಾರು ಗಮನಿಸಿದಾಗ ಕೆಳಜಾತಿಯರು ದೇವದಾಸಿ ಪದ್ಧತಿಯನ್ನು ತಮ್ಮ ಸಂಪ್ರದಾಯ ಎಂದೂ ಕೊಂಡು ಜೀವನ ನಡೆಸುತ್ತಿದ್ದಾರೆ. ಆದರೆ ಈ ಪದ್ದತಿಯಿಂದ ಸಮಾಜದಲ್ಲಿ ಯಾವುದೇ ರೀತಿಯ ಆರ್ಥಿಕ, ಸಾಮಾಜಿಕ ಬದಲಾವಣೆಯನ್ನು ಕಾಲಕ್ಕೆ ಸಾಧ್ಯವಾಗುತ್ತಿಲ್ಲ. ಇವರಲ್ಲಿ ಇಂದಿಗೂ ಮೌಢ್ಯತೆ, ಮೂಡನಂಬಿಕೆ ಅನಿಷ್ಟ ಸಂಪ್ರದಾಯಗಳು ಆಳವಾಗಿ ತಮ್ಮಲ್ಲಿ ಬೇರೂರಿವೆ ತಿಳಿದು ಬರುತ್ತದೆ.

೨.೨. ಹಗರಿಬೊಮ್ಮನಹಳ್ಳಿಯ ಶಾಸನಗಳು

ಶಾಸ್ ಎಂಬ ಧಾತುವಿನಿಂದ ಹುಟ್ಟಿದ ಶಾಸನ ಎಂಬ ಪದ ರಾಜಾಜ್ಞೆ ಎಂದು ಅರ್ಥ ನೀಡುತ್ತದೆ. ಆದರೆ ನಂತರದ ದಿನಗಳಲ್ಲಿ ಇದು ರಾಜನಲ್ಲದೆ ಬೇರೆಯವರು ನೀಡಿದ ದಾನ, ಧರ್ಮ, ವೀರಮರಣ ಸತಿಸಹಗಮನ, ಸನ್ಯಾಸಿಗಳ ಸಾಧನೆ ಮೊದಲಾದ ವಿಷಯಗಳನ್ನೂ ಕುರಿತು ತಿಳಿಸುವ ಹಿಂದಿನ ಕಾಲದ ಜನರು ಜೀವನದ ಧ್ವನಿಗಳಾಗಿವೆ. ಶಾಸನಗಳು ಐತಿಹಾಸಿಕ ಸಂಶೋಧನೆ ಅಧ್ಯಯನಗಳಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಹಾಗಾಗಿ ಎಂ.ಎಂ ಕಲ್ಬುರ್ಗಿಯವರು ಶಾಸನಗಳು ಹಿಂದಿ ಕಾಲದ ಸಂಸ್ಕೃತಿಯ ಮೂಖ ಸಾಕ್ಷಿಗಳು ಎಂದರು.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಒಟ್ಟು ೪೫ ಶಾಸನಗಳು ದೊರೆಕಿವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಹನಸಿಯ ರಾಮೇಶ್ವರ ದೇವಾಲಯದಲ್ಲಿರುವ ಶಾಸನವನ್ನು ಕ್ರಿ.ಶ. ೧೨-೦೭-೧೧೧೧ ರಲ್ಲಿ ಬರೆಯಲಾಗಿದೆ. ಚಾಲುಕ್ಯ ತ್ರಿಭುವನಮಲ್ಲನ ಸಾಮಂತನಾದ ಪ್ರಭುವನದಲ್ಲಿ ಪಾಂಡ್ಯದೇವನು ನೊಳಂಬವಾಡಿ ಆಕ್ರಮಿತ್ತಾದ್ಯಾಗ ಅವನ ಸಾಮಂತನಾದ ಹೊಳ್ಳಯನು ಕೋಗಳಿ ೫೦೦ ಹನಸಿಯ ಪರಶು ರಾಮೇಶ್ವರ ದೇವರಿಗೆ ಚಿಕ್ಕಾಲಬ್ಬೆಗೆರೆಯನ್ನು ಸೋಮಕರ್ತಾರ ಪಂಡಿತರ ಕಾಲನ್ನು ತೊಳೆದು ದಾನ ನೀಡುತ್ತಾನೆ. ಈ ಶಾಸನದಲ್ಲಿ ಬರೆದವನು ಸೊನಬೋವ(ಶಾನುಬೋಗ) ಸೋಮನಾಥಯ್ಯ ಶಾಸನ ಕೆತ್ತಿದವನು ಕಂಚುಗಾರ ದಾಸೋಜ. ಬೆನಕಲ್ಲಿನ ಕಲ್ಲೇಶ್ವರ ದೇವಾಲಯದಲ್ಲಿರುವ ಶಾಸನವನ್ನು ಕ್ರಿ ಶ. ೧೧-೦೩-೧೨೨೬ ರಲ್ಲಿ ಕೆತ್ತಲಾಗಿದೆ. ಹೊಯ್ಸಳ ಅರಸ ವೀರನರಸಿಂಹದೇವನ ಕಾಲದಲ್ಲಿ ಚಾಮರಸನ ಮಗನಾದ ಮಹಾಪ್ರಧಾನ ಅಮಿತಯ್ಯ ದಂಡನಾಯಕನು ನೋಳಂಬವಾಡಿ ನಾಡಿನ ಕೊಗಳಿ ೫೦೦ ರ ಬೆಣಕಲ್ಲು ೧೨ ರ ಮುಖ್ಯ ಪಟ್ಟಣವಾದ ಬೆಣ್ಣೆಕಲ್ಲಿನಲ್ಲಿ ಪದ್ಮಲೇಶ್ವರ, ಅಮೃತೇಶ್ವರ, ಲಕ್ಷ್ಮೀನಾರಾಯಣ, ಸೋಮೇಶ್ವರ, ಬಲ್ಲಾಳೇಶ್ವರ, ನರಸಿಂಹ ದೇವರ ದೇವಾಲಯಗಳನ್ನೂ ಕಟ್ಟಿಸಿ ಇವುಗಳ ನಿತ್ಯ ನೈಮಿತ್ಯಕ್ಕಾಗಿ ಬೆಣ್ಣಿಕಲ್ಲಿನಲ್ಲಿ ವಜ್ರೇಶ್ವರ ಮತ್ತು ಸೋಮನಾಥ ದೇವರ ಸನ್ನಿದಿಯಲ್ಲಿ ರಾಜಗುರು ಖಳೇಪ್ಪರ ದೇವನ ಕಾಲನ್ನು ತೊಳೆದು ದಾನ ನೀಡುತ್ತಾರೆ. ಈ ಶಾಸನದಲ್ಲಿ ಹೊಯ್ಸಳ ವಂಶದ ವರ್ಣನೆ ದಂಡನಾಯಕ ಅಮಿತಯ್ಯನ ವಂಶಾವಳಿ ಮತ್ತು ಸಾಹಸಗಳು ಹಾಗೂ ಖಳೇಶ್ವರನ ವ್ಯಕ್ತಿತ್ವವನ್ನು ಕಾವ್ಯಮಯವಾಗಿ ವರ್ಣಿಸಲಾಗಿದೆ.

ಅಂಬಳಿಯ ಕಲ್ಲೇಶ್ವರ ದೇವಾಲಯದ ಮುಂದೆ ನೆಟ್ಟಿರುವ ಶಾಸನವನ್ನು ಕ್ರಿ.ಶ. ೭-೦೧-೧೧೦೬ ರಂದು ಬರೆಯಲಾಗಿದೆ. ಚಾಲುಕ್ಯ ತ್ರಿಭುವನಮಲ್ಲನ ಕಾಲದಲ್ಲಿ ನೊಳಂಬವಾಡಿ-೩೨೦

ರಿಂದ ಹೆರ್ಜುಂಕದ ಅಧಿಕಾರಿಯಾಗಿದ್ದು ಅಣುಕಪಲ್ಲವರಾಯನ ಅನುಮತಿಯಂತೆ ಕಾಳಿಮರಸ ಮತ್ತು ಕೇಶೀರಾಜರು ಅಮ್ಮಳೆಯ ೫೦ ಮಹಾಜನರ ಕಾಲನ್ನು ತೊಳೆದು ಹಿರಿಯ ಕೆರೆಯ ಜೀರ್ಣೋದ್ಧಾರಕ್ಕಾಗಿ ಎಲೆಯ ಹೇವು ಮೇಲಿನ ಸ್ರಂಕವನ್ನು ಬಿಡುತ್ತ ಹಾಗೂ ಭೂದಾನವನ್ನು ಮಾಡುತ್ತಾರೆ.

ಮಾಗಿಮಾವಿನಹಳ್ಳಿ ನೀರಿನ ಟ್ಯಾಂಕ್ ಬಳಿ ಹೊಲದಲ್ಲಿರುವ ಶಾಸನವನ್ನು ಕ್ರಿ.ಶ. ೬-೦೩-೧೫೪೪ ರಲ್ಲಿ ಕೆತ್ತಲಾಗಿದೆ. ವಿಜಯನಗರದ ಅಧಿಕಾರಿ ಬಯಕಾರ ರಾಮಪ್ಪಯ್ಯ ತಮ್ಮ ಮಗಳ ಲಖರಸಮ್ಮನಿಗೆ ಪುಣ್ಯವಾಗಲಿಯೆಂದು ಚಿಕ್ಕ ಲಕ್ಕಾ ಸಮುದ್ರದ ಕೆರೆಯನ್ನು ಕಟ್ಟಿಸಿದ ಹಾಗೂ ಬಹುಕಾರಿ ರಾಮಪ್ಪನ ವಂಶಾವಳಿ ಬಗ್ಗೆ ಅವರು ಕಟ್ಟಿಸಿದ ೧೬ ಕೆರೆಗಳ ಬಗ್ಗೆ ಮಾಹಿತಿ ಇದೆ. ಈ ಎಲ್ಲಾ ಶಾಸನಗಳಲ್ಲದೆ ಸೀಗೆನಹಳ್ಳಿ ಪಂಪಾ ಪಟ್ಟಣ, ಹಳೆ ಹಗರಿಬೊಮ್ಮನಗಳ್ಳಿ, ಕೋಡಿಹಳ್ಳಿ ಬಸರಕೋಡು, ಚಿಲುಗೋಡು, ಹಂಪಸಾಗರ, ತಂಬ್ರಹಳ್ಳಿ, ಛತ್ರದಹಳ್ಳಿ ಗಳಲ್ಲಿ ಶಾಸನಗಳು ದೊರೆತಿವೆ. ಅವುಗಳು ಅಳಿಸಿ ಹೋಗಿರುವುದರಿಂದ ಇತಿಹಾಸದ ಮಹತ್ವದ ಅಂಶಗಳು ನಮಗೆ ಸಿಗದಂತವಾಗಿದೆ.೨

೨.೩. ಐತಿಹಾಸಿಕ ಹಿನ್ನೆಲೆಯ ಸ್ಥಳಗಳು

ಒಂದು ಊರು ಅಥವಾ ತಾಲೂಕಿನ ಇತಿಹಾಸವೆಂದರೆ ಕೇವಲ ಅದೊಂದಕ್ಕೆ ಸೀಮಿತವಾಗಿರಲು ಸಾಧ್ಯವಿಲ್ಲ ತನ್ನ ಸುತ್ತಲಿನ ಊರು ಅಥವಾ ತಾಲೂಕುಗಳನ್ನೊಳಗೊಂಡು ಜಿಲ್ಲೆ ಹಾಗೂ ನೆರೆಹೊರೆ ಜಿಲ್ಲೆಗಳ ಇತಿಹಾಸಗಳೊಂದಿಗೆ ತುಳುಕು ಹಾಕಿಕೊಂಡಿರುತ್ತದೆ. ಇಂದಿನ ದಿನಮಾನಗಳಲ್ಲಂತೂ ಈ ಸಂಬಂಧಗಳು ರಾಷ್ಟ್ರಮಟ್ಟದಲ್ಲಿ ವ್ಯಾಪಿಸಿದೆ. ಹಿಗಾಗಿ ತಾಲೂಕಿನ ಇತಿಹಾಸವನ್ನು ಗಮನಿಸಿದಾಗ ಜಿಲ್ಲೆ, ರಾಜ್ಯ ದೇಶಗಳ ಭೂಪಟಗಳನ್ನೂ ಹಿನ್ನೆಲೆಯಾಗಿಟ್ಟುಕೊಂಡು ಗುರುತಿಸಬೇಕಾಗುತ್ತದೆ. ಇತಿಹಾಸ ಪೂರ್ವ ಹಾಗೂ ಇತಿಹಾಸ ಕಾಲದಿಂದಲೂ ಕೆಲವು ಸ್ಥಳಗಳು ಗುರುತಿಸಲ್ಪಟ್ಟಿವೆ. ಇಲ್ಲಿಯ ಪರಿಸರದಲ್ಲಿ ಪ್ರಾಗೈತಿಹಾಸಿಕ ಕುರುಹುಗಳಿರುವುದನ್ನು ಸಂಶೋಧಕರು ಗುರುತಿಸಿದ್ದಾರೆ. ಗದ್ದಿಕೇರಿ, ಹಂಪಸಾಗರ ಮತ್ತು ಕೊಗಳಿ ಸುತ್ತಮುತ್ತ ನೂತನ ಶಿಲಾಯುಗ, ಶಿಲಾ ತಾಮ್ರಯುಗ, ಬೃಹತ್ ಶಿಲಾಯುಗ ಹಾಗೂ ಇತಿಹಾಸ ಆರಂಭಯುಗಕ್ಕೆ ಸೇರಿದ ನೆಲೆಗಳನ್ನೂ ಗುರುತಿಸಲಾಗಿದೆ. "ಇತ್ತೀಚಿಗೆ ದಶಮಾನದ ಹತ್ತಿರದ ತಿಮ್ಮಪ್ಪನ ಅಡಿವಿಯಲ್ಲಿ ೬೧ಕಲ್ಲು ವೃತ್ತಿಗಳನ್ನು ಪತ್ತೆ ಹತ್ತಿದ್ದಾರೆ. ಕದಂಬರು, ಗಂಗರು, ರಾಷ್ಟಕೂಟರು, ಕಲ್ಯಾಣದ ಚಾಲುಕ್ಯರು, ಕಳಚೂರಿ ಅರಸರು, ಹೊಯ್ಸಳರು, ದೇವಗಿರಿಯ ಯಾದವರು, ವಿಜಯನಗರದ ಅರಸರು, ಮೈಸೂರು ಅರಸರು, ಬ್ರೀಟಿಷರು ಈ ಪ್ರದೇಶವನ್ನು ಆಳಿದ್ದಾರೆ. ತಾಲೂಕಿನಲ್ಲಿ ಪ್ರಮುಖವಾಗಿ ಕಂಡು ಬರುವ ಐತಿಹಾಸಿಕ ಸ್ಥಳಗಳೆಂದರೆ ಕೋಗಳಿ, ಅಂಬಳಿ, ಮೊರಗೇರಿ, ತಂಬ್ರಹಳ್ಳಿ, ನಾರಾಯಣದೇವಕೇರಿ, ಉಲುವತ್ತಿ, ಅಲಬೂರು, ಹಂಪಸಾಗರ, ಏಣಿಗಿ, ಚಿಮ್ಮನಹಳ್ಳಿ, ಬನ್ನಿಕಲ್ಲು, ಮಾಗಿಮಾವಿನ ಹಳ್ಳಿ, ದಶಮಾಪುರ ಮತ್ತು ಹಗರಿಬೊಮ್ಮನಹಳ್ಳಿ".[೩]

೨.೩.೧. ಕೋಗಳಿ

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಕೊಗಳಿ ಐತಿಹಾಸಿಕ ಕೇಂದ್ರ, ನಾಡಿನ ಧಾರ್ಮಿಕ, ಸಾಂಸ್ಕೃತಿಕ ಚರಿತ್ರೆಯಲ್ಲಿ ಕೋಗಳಿನಾಡು ಕೋಗಳಿ ೫೦೦ ಎಂದು ಶಾಸನೋಕ್ತವಾಗಿ ಪ್ರಸಿದ್ದಿ ಪಡಿದಿದೆ. ಇದು

ಪ್ರಾಚೀನ ವಿದ್ಯಾಕೇಂದ್ರವಾಗಿರುವುದರ ಜೊತೆಗೆ ಬಹುಮುಖ್ಯ ಜೈನ ಕೇಂದ್ರವೂ ಆಗಿತ್ತು. ಕೋಗಳಿಯನ್ನು ರಾಜಧಾನಿಯನ್ನಾಗಿ ಹೊಂದಿ ಅದರ ಸುತ್ತಮುತ್ತಲು ೫೦೦ ಗ್ರಾಮಗಳನ್ನೊಳಗೊಂಡ ವಿಭಾಗವೇ ಕೋಗಳಿ. ಗಂಗರ ಅರಸ ದುರ್ವಿನೀತನ ಕಾಲಾವದಿ(ಕ್ರಿ.ಶ, ೫೨೯–೫೭) ಯಿಂದಲೂ ಕೊಗಳಿ ಉಲ್ಲೇಖಗಳಿವೆ. ರಾಷ್ಟ್ರಕೂಟರ ೨ನೇ ಕೃಷ್ಣನು(ಕ್ರಿ.ಶ.೯೭೨–೯೬೭) ಕೋಗಳಿಗೆ ಒಡೆಯನಾಗಿದ್ದನು. ಹೊಯ್ಸಳರ ರಾಮನಾಥನ ಕಾಲದಲ್ಲಿ ಕೊಗಳಿ ಚೆನ್ನಪಾರ್ಶ್ವದೇವ ಬಸದಿಗೆ ದತ್ತಿ ನೀಡಿದ್ದಾನೆ. ಕಲ್ಯಾಣದ ಚಾಲುಕ್ಯರು ಆಳಿದ ಬಗ್ಗೆ ಉಲ್ಲೇಖಗಳಿವೆ. ಸುಮಾರು ೧೨೮ ವರ್ಷ ವಿಜಯನಗರ ಅರಸರು ಅಳಿದ್ದಾರೆ. ಕನ್ನಡದ ಉಪಲಬ್ದ ಪ್ರಥಮ ಗದ್ಯಕೃತಿ 'ವಡ್ಡಾರಾಧನೆ'ಯಲ್ಲಿ ಕೊಗಳಿಯ ಪ್ರಸ್ತಾಪವಿದೆ. ಈ ಕೃತಿಯಲ್ಲಿ 'ಕಾರ್ತಿಕ ಋಷಿ' ಕಥೆಯ ಕೊನೆಗೆ ಕಾರ್ತಿಕ ಋಷಿಯ ಬಸದಿಯನ್ನು ಸಹೋದರಿ ವೀರಶ್ರೀ ನಿರ್ಮಿಸುತ್ತಾಳೆ. ಹೀಗೆ ಕೊಗಳಿ ಜೈನರ ಕೇಂದ್ರವಲ್ಲದೆ ರಾಜದಾನಿಯಾಗಿ ಪ್ರಸಿದ್ದವಾಗಿದೆ. ವಿವಿಧ ಶಾಸನಗಳು ಕೊಗಳಿಯನ್ನು ವರ್ಣಿಸುತ್ತವೆ. ಮೋಲಿಗೇರಿ ಶಾಸನದಲ್ಲಿ ಸಮುದ್ರದಿಂದ ಆವೃತ್ತವಾಗಿರುವ ಭೂಮಿ ಎಂಬ ಸುಂದರ ಸ್ತ್ರೀಯ ಮುಖದಂತೆ ಕೊಗಳಿ ನಾಡು ಶೋಭಾಯಮಾನವಾಗಿ ಕಂಗೋಳಿಸುತ್ತಿತ್ತು ಅಂಬಳಿ ಶಾಸನದಲ್ಲಿ ಕುಂತಳ ದೇಶವೆನ್ನುವ ಮುಖಕ್ಕೆ ಮೂಗಿತಿನಂತೆ ನೋಳಂಬವಾಡಿ ನಾಡು ಇದ್ದರೆ ಆ ನೊಳಂಬವಾಡಿ ನಾಡಿಗೆ ಕಣ್ಣುಗಳಿದ್ದಂತೆ ಕೊಗಳಿ ನಾಡು ಮುಖ್ಯವಾಗಿತ್ತು. ಈ ನಾಡಿನ ಗ್ರಾಮಗಳು ನಂದನ ವನಗಳಿಂದ, ಕೆರೆ ದೇವಾಲಯ, ಬೆಳೆದು ನಿಂತ ಪೈರುಗಳಿಂದ ಕಂಗೋಳಿಸುತ್ತಿದ್ದವೆಂದು ವರ್ಣಿಸಲಾಗಿದೆ. ಈ ಎಲ್ಲಾ ವರ್ಣನೆಗಳು ಕೊಗಳಿ ನಾಡಿನ ಸಂಪತ್ತು, ಸಂಸ್ಕೃತಿ, ಪ್ರಾಕೃತಿಕ ಸೊಬಗನ್ನು ಸೂಚಿಸುತ್ತದೆ. ಕೊಗಳಿಯಲ್ಲಿನ ಶಾಸನವು ನಾಲ್ಕು ಯುಗದ ಪೊಳರ್ ಎಂದು ವರ್ಣಿಸುತ್ತದೆ. ಮುಳುಗುಂದ ಕೊಪಣ ಮತ್ತು ಶ್ರವಣಬೆಳಗೊಳಗಳಿಗೆ ಸಮಾನವಾದ ಪವಿತ್ರ ಕ್ಷೇತ್ರ ಕೊಗಳಿಯಾಗಿತ್ತಲ್ಲದೇ ಪಟ್ಟಣಗಳ ಚಕ್ರವರ್ತಿ ಎನಿಸಿತ್ತು.

೨.೩.೨. ನಾರಾಯಣ ದೇವರ ಕೆರೆ

ತುಂಗಭದ್ರಾ ಜಲಾಶಯದಲ್ಲಿ ಮುಳುಗಿದ ಅತಿದೊಡ್ಡ ಸಮೃದ್ದವಾದ ಊರು ನಾರಾಯಣ ದೇವರ ಕೆರೆ. ಹೆಸರೇ ಹೇಳುವಂತೆ ಊರಿನ ಪಕ್ಕದಲ್ಲಿದ್ದ ವಿಶಾಲವಾದ ಕೆರೆಯಿಂದ ಈ ಊರಿಗೆ ಈ ಹೆಸರು ಬಂದಿದೆ. ೧೪ ನೇ ಶತಮಾನದವರೆಗೆ ಪಕ್ಕದಲ್ಲಿ ಕೆರೆಯಿದ್ದರೂ ಗೊಲ್ಲರಹಳ್ಳಿಯಾಗಿತ್ತು. ಆದರೆ ವಿಜಯನಗರ ಕಾಲದಲ್ಲಿ ಹಂಪೆಗೆ ಹೊರಟಿದ್ದ ಯತಿವರ್ಯ ಶ್ರೀ ನರಹರಿ ತೀರ್ಥರು ಮಾರ್ಗಮಧ್ಯದಲ್ಲಿ ಈ ಊರಿನಲ್ಲಿ ವಸತಿ ಮಾಡಿದರು. ಆಗ ಅದರ ಕನಸಲ್ಲಿ ಕೆರೆಯಲ್ಲಿ ಮುಳುಗಿದ್ದ ನಾರಾಯಣನೇ ಕಂಡನಂತೆ. ಹಾಗಾಗಿ ಆ ನಾರಾಯಣನ ಪ್ರೇರಣೆಯಿಂದ ೩ ದಿನ ೩ ಸಾರಿ ಮುಳುಗಿ ಶ್ರೀನಾರಾಯಣ ಶ್ರೀದೇವಿ ಭೂದೇವಿಯರ ವಿಗ್ರಹಗಳನ್ನು ಹೊರತಂದು ಭವ್ಯವಾದ ಗುಡಿಕಟ್ಟಿಸಿ ಊರಿಗೆ ನಾರಾಯಣ ದೇವರ ಕೆರೆ ಎಂದು ನಾಮಕರಣ ಮಾಡಿದರು. ಆಗಿನ ಹೊಸಪೇಟೆಗಿಂತೆ ದೊಡ್ಡದಾಗಿದ್ದ ಅಂದಿನ ಆ ಪಟ್ಟಣದ ವೈಭವವನ್ನು ನೆನೆದು ಇಂದಿನ ಅನೇಕರು ಪುಳಕಿತಗೊಳ್ಳುತ್ತಾರೆ. ವರ್ತಕರು, ವೈದಿಕರು ನಟರು, ಗಣಿಕೆಯರು, ದಾನಿಗಳು, ವಿದ್ಯಾವಂತರು,

ಹೃದಯವಂತರು, ಕುಶಲಕರ್ಮಿಗಳು, ನಾ ನಾ ಕಲಾವಿದರಿಗೆ ನೆಲೆವೀಡಾಗಿದ್ದ. ಈ ಗ್ರಾಮದಲ್ಲಿ ಹೊನ್ನಿನ ಹೊಗೆಯಾಡುತ್ತಿತ್ತು ಎಂದು ಹೇಳುವರು. ನಾರಾಯಣ ದೇವರ ಕೆರೆ ಹರಪನಹಳ್ಳಿ ಪಾಳೇಗಾರರ ಬೇಸಿಗೆ ರಾಜಧಾನಿಯಾಗಿತ್ತು. ಕವಯಿತ್ರಿ ರಾಮನಗರದ ಯುವಕರ ಸಂಘದಿಂದ ಧ್ರುವ ನಾರಾಯಣರು ಬರೆದಿರುವ 'ನಾರಾಯಣ ದೇವರ ಕೆರೆ' ಎಂಬ ಪುಸ್ತಕ ಪ್ರಕಟಿಸಲಾಗಿದೆ. ತುಂಗಭದ್ರಾ ಅಣೆಕಟ್ಟಿನಲ್ಲಿ ಈ ಊರು ಸಂಪೂರ್ಣವಾಗಿ ಮುಳುಗಿ ಹೋಯಿತು. ಆ ಊರಿನಲ್ಲಿದ್ದ ಒಂದೆರಡು ಶಾಸನಗಳು ನೀರಿನಲ್ಲಿ ಮುಳುಗಿ ಹೋಗಿರುವುದರಿಂದ ಖಚಿತ ಇತಿಹಾಸದ ಮಾಹಿತಿಯಿಂದ ನಾವು ವಂಚಿತರಾಗಿದ್ದೆವೆ. ಇಲ್ಲಿಯ ಜನರು ಹಗರಿಬೊಮ್ಮನಹಳ್ಳಿ, ಚಿತ್ರಪಳ್ಳಿ, ವಲ್ಲಭಾಪುರ, ಲಡಕನಬಾವಿ, ಲೋಸಪನ ಹೊಲ, ಮರಿಯಮ್ಮನಹಳ್ಳಿ, ಹೊಸಪೇಟೆ ಮತ್ತಿತರ ಊರುಗಳಿಗೆ ಸ್ಥಳಾಂತರಗೊಂಡರು. ಈ ಊರಿನ ಶ್ರೀ ಲಕ್ಷ್ಮಿನಾರಾಯಣ, ಶ್ರೀದೇವಿ, ಭೂದೇವಿ ಅವರಿಗೆ ವಜ್ರಖಚಿತ ಬಂಗಾರದ ೧೦೪ ಗ್ರಾಂ ತೂಕವುಳ್ಳ ಮೂರು ಕಿರೀಟಗಳನ್ನು ಟಿಪ್ಪು ಸುಲ್ತಾನ್ ದಾನ ನೀಡಿದ್ದನೆಂದು ಹೇಳಲಾಗಿದೆ. ಜೊತೆಗೆ ಎರಡು ಶತಮಾನಕ್ಕೂ ಹಳೆಯಾದಾದ ಬಂಗಾರದ ಅಭರಣಗಳು ಸೇರಿ ಒಂದು ಕೆ.ಜಿ. ೫೦೦ ಗ್ರಾಂ ಉಂಗುರ, ೧೮ ಕೆ.ಜಿ ಬೆಳ್ಳಿಯ ಆಭರಣಗಳು ಚಿದ್ರಿ ಕುಟುಂಬದವದಲ್ಲಿದ್ದವು. ಅವುಗಳ ಮೌಲ್ಯವು ಒಂದು ಕೋಟಿ ಒಂಬತ್ತು ಲಕ್ಷ ಎಂದು ಅಂದಾಜು ಮಾಡಲಾಗಿದೆ. ಹರಪನಹಳ್ಳಿ ಪಾಳೇಗಾರ ಸೋಮಸೇಖರ ಕಾಲದಿಂದಲೂ ಚಿದ್ರಿ/ಕದ್ರಿ ವಿಶ್ವನಾಥ ವಂಶಸ್ಥರ ಬಳಿ ಈ ಆಭರಣಗಳು ಭದ್ರಾವಾಗಿದ್ದವು.

"ನಾರಾಯಣದೇವರ ಕೆರೆ ತುಂಗಭದ್ರಾ ಅಣೆಕಟ್ಟಿನಲ್ಲಿ ಮುಳುಗಡೆಯಾದ ಮೇಲೆ ದೇವಸ್ಥಾನವು ಮರಿಯಮ್ಮನಹಳ್ಳಿಯಲ್ಲಿ ಪುನಃ ನಿರ್ಮಾಣವಾಯಿತು. ಆ ದೇವಸ್ಥಾನದ ಧರ್ಮಕರ್ತರು ದೇವರ ಆಭರಣಗಳನ್ನು ವರುಷಕ್ಕೆರಡು ಮೂರು ಬಾರಿ ಶ್ರೀ ಚಿದ್ರಿ/ಕದ್ರಿ ಕುಟುಂಬದವರಿಂದ ತೆಗೆದುಕೊಂಡು ಹೋಗಿ ಉತ್ಸವಗಳ ನಂತರ ಮತ್ತೆ ವಾಪಸ್ಸು ತಂದು ಆಗಿನ ಕಾಲದ ಭದ್ರವಾದ ಟಿಜೋರಿಯಲ್ಲಿಡುತ್ತಿದ್ದರು. ಕಾಲಮಾನ ಪರಿಸ್ಥಿತಿಗನುಸರಿಸಿ ಈ ಎಲ್ಲಾ ದೇವರ ಸಂಪತ್ತು ಸರಕಾರದ ವಶಕ್ಕೆ ಕೊಡುವುದು ಲೇಸೆಂದು ಬಾವಿಸಿದ ಶ್ರೀ ಚಿದ್ರಿ/ಕದ್ರಿ ವಿಶ್ವನಾಥ ಪರಿವಾರದವರು ಬಳ್ಳಾರಿ ಜಿಲ್ಲೆ ಧಾರ್ಮಿಕ ದತ್ತಿ ಆಯುಕ್ತರಿಗೆ ದಿನಾಂಕ ೨೨-೮-೨೦೦೨ ರಂದು ಕ್ರಮ ಪ್ರಕಾರ ವಹಿಸಿಕೊಟ್ಟಿದ್ದಾರೆ. ಈ ಸಂಪತ್ತು ಕೊಡುವ ಮುನ್ನ ಪ್ರತಿಯೊಂದು ಆಭರಣದ ಪೋಟೊ ತೆಗೆಸಿ ತೂಕವಗೈರಾ ಮಾಡಿಸಿ ದಾಖಲಿಸಿಕೊಂಡಿದ್ದಾರೆ. ಈ ದೇವಸ್ಥಾನ ಆಭರಣಕ್ಕೆ ಸಂಪತ್ತು ನಾರಾಯಣದೇವರ ಕೆರೆಯ ಐತಿಹಾಸಿಕ ಮತ್ತು ಪಾರಾಂಪರಿಕ ಸೌಭಾಗ್ಯವಾಗಿದೆ"೪ ನಾರಾಯಣ ದೇವರ ಕರೆಯು ಪ್ರಾಚೀನ ಕಾಲದಲ್ಲಿ ಪ್ರಸಿದ್ದಿಯನ್ನು ಪಡೆದ ಸ್ಥಳವಾಗಿದ್ದುದು ಶಸನಗಳಿಂದ ತಿಳಿದುಬರುತ್ತದೆ.

೨.೩.೪. ಸಾಹಿತ್ಯ

ಸಾಹಿತ್ಯ ಕ್ಷೇತ್ರದಲ್ಲಿ ತಾಲೂಕಿನ ಕೊಡುಗೆ ಅನನ್ಯವಾಗಿದೆ. ಅನೇಕ ಪ್ರತಿಭಾವಂತರು ತಮ್ಮ ಬರವಣಿಗೆಗಳಿಂದ ಊರಿನ ಹೆಸರನ್ನು ನಾಡಿನ್ಯಾದಂತ ಪ್ರಸಿದ್ದಮಾಡಿದ್ದಾರೆ. ಸಾಹಿತ್ಯ ಕೃಷಿಯು

ಇಲ್ಲಿ ನಿಂತ ನೀರಾಗಿಲ್ಲ 'ಹಳೆ ಬೇರು ಹೊಸ ಚಿಗುರು ಬೆರೆತಿರಲು ಮರ ಸೊಬಗು' ಎನ್ನುವಂತೆ ತಾಲೂಕಿನಾದ್ಯಂತ ಇರುವ ಹಳೆಯ ಬರಹಗಾರರ ಮತ್ತು ಯುವ ಬರಹಗಾರರ ಸಂಗಮದಿಂದ ಸಾಹಿತ್ಯ ಸರಸ್ವತಿ ಶ್ರೀಮಂತಳಾಗಿದ್ದಾಳೆ. "ಇಲ್ಲಿನ ಸಾಹಿತ್ಯದ ಪರಂಪರೆ ಪುರಾತನ ಕಾಲದಲ್ಲಿಯೇ ಆರಂಭವಾಗಿದೆ. ೧೧ನೇ ಶತಮಾನದಲ್ಲಿ ರಚಿತವಾದ ಕನ್ನಡದ ಮೊಟ್ಟ ಮೊದಲ ಗದ್ಯಕೃತಿ 'ವಡ್ಡಾರಾಧನೆ' ಯನ್ನು ಬರೆದವರು ಕೋಗಳಿಯ ಶಿವಕೋಟ್ಯಾಚಾರ್ಯರು. ೮ನೇ ಶತಮಾನದಲ್ಲಿ ಬಳ್ಳಾರಿ ಜಿಲ್ಲೆ ಕನ್ನಡ ಸಾಹಿತ್ಯ ಸಮ್ಮೇಳನ ಹಗರಿಬೊಮ್ಮನಹಳ್ಳಿಯಲ್ಲಿ ಜುಲೈ ೨೪ ಮತ್ತು ೨೫ರ ೧೯೯೩ರಲ್ಲಿ ನ್ಯಾಯವಾದಿ ಸಾಹಿತಿ ಕೊ.ಚನ್ನಬಸಪ್ಪನವರು ಅಧ್ಯಕ್ಷತೆಯಲ್ಲಿ ಶ್ರೀ ಗುರುಮೂರ್ತಿ ಪೆಂಡಕೂರು ಜಿಲ್ಲಾ ಅಧ್ಯಕ್ಷರಾದ ಸಮಯದಲ್ಲಿ ಯಶಸ್ವಿಯಾಗಿ ಜರುಗಿದೆ. ಅವರ ಬಗ್ಗೆ 'ಸೂರ್ಯಕಾಂತಿ' ಸ್ಮರಣ ಸಂಚಿಕೆಯನ್ನು ಹೊರತರಲಾಗಿದೆ.

ಹಗರಿಬೊಮ್ಮನಹಳ್ಳಿ ಕಂಡ ಶ್ರೇಷ್ಠ ವ್ಯಕ್ತಿ ಶ್ರೀ ಎಂ ಪಿ ಪ್ರಕಾಶರವರು ಹಂಪಿ ಉತ್ಸವಕ್ಕೆ ರಾಷ್ಟ್ರೀಯ ಕಳೆ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯ, ಇತಿಹಾಸದ ಬಗ್ಗೆ ಸಂಶೋಧನೆ ಮಾಡುವುದಕ್ಕಾಗಿಯೇ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಲಯವನ್ನು ಸ್ಥಾಪಿಸುವ ಕಲ್ಪನೆಯನ್ನೂ ಮಾಡಿ ಅದನ್ನು ನನಸಾಗಿಸಿದರು. ನಾಲ್ಕು ಪುಸ್ತಕಗಳನ್ನೂ ರಚಿಸಿರುವ ಇವರ ಕೃತಿಯೊಂದು ಕರ್ನಾಟಕದ ವಿಶ್ವವಿದ್ಯಾಲಯದ ಸ್ನಾತಕೊತ್ತರ ಪದವಿಗೆ ಪಠ್ಯವಾಗಿತ್ತು. ಅನೇಕ ಕಥೆಗಳನ್ನೂ ಕನ್ನಡಕ್ಕೆ ಅನುವಾದಿಸಿದ್ದಾರೆ. ರಾಜ್ಯ ಪ್ರಶಸ್ತಿ ಪುರಸ್ಕೃತವಾದ ಎರಡು ಚಲನಚಿತ್ರಗಳು ಸೇರಿದಂತೆ ಮೂರು ಚಿತ್ರಗಳಲ್ಲಿ ಅಭಿನಯಿಸಿದ್ದರೆ. ರಂಗಭೂಮಿಯ ಹಿನ್ನೆಲೆಯನ್ನು ಇವರು ಆಷಾಢದ ಒಂದು ದಿನ, ಜೋಕುಮಾರಸ್ವಾಮಿ, ನಾಗಮಂಡಲ, ಸೂರ್ಯಶಿಕಾರಿ, ಸಂಗ್ಯಾಬಾಳ್ಯ ಸೇರಿದಂತೆ ಅನೇಕ ರಂಗ ಪ್ರಯೋಗವನ್ನು ನಡೆಸಿದ್ದಾರೆ.

ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿ ಸಾಹಿತ್ಯ ಎಂದ ತಕ್ಷಣ ಎಲ್ಲರಿಗೂ ನೆನಪಾಗುವ ಮೊದಲ ವ್ಯಕ್ತಿ ಎಂದರೆ ಶ್ರೀ ಗುರುಮೂರ್ತಿ ಪೆಂಡಕೂರ್. ಶ್ರೀಯುತರು ೯ನೇ ಜೂನ್ ೧೯೩೮ರಲ್ಲಿ ತುಂಗಭದ್ರಾ ಜಲಾಶಯದಲ್ಲಿ ಮುಳುಗಡೆಯಾದ ನಾರಾಯಣದೇವರ ಕೆರೆಯಲ್ಲಿ ಜನಿಸಿದರು. ಇವರು ವೃತ್ತಿಯಲ್ಲಿ ವರ್ತಕರಾದರೂ ಸಾಹಿತ್ಯ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡವರು. ಆಡುಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಲೇಖಕರಾಗಿ, ಅನುವಾದಕರಾಗಿ, ಕವಿಗಳಾಗಿ, ಸಂಘಟಕರಾಗಿ, ಪ್ರಕಾಶಕರಾಗಿ, ಸಂಪಾದಕರಾಗಿ ತಮ್ಮದೇ ಆದ ಶೈಲಿಯಲ್ಲಿ ಅನೇಕ ಕೃತಿಗಳನ್ನು ಬರೆದಿದ್ದಾರೆ. ಬಹುರೂಪ ವಸುಂದಂ, ಅಮರನಾಥ ಪ್ರವಾಸ, ಮುತ್ತು ಹವಳ, ಹೆಜ್ಜೆಗಳು, ಧ್ವನಿ, ಸ್ಕಂದ ಶ್ರೀಗಂಧ, ಸೂರ್ಯಕಾಂತಿ ಅನೇಕ ಕೃತಿಗಳನ್ನು ರಚಿಸಿದ್ದಾರೆ.

• ಬಾಚಿಗೊಂಡನಹಳ್ಳಿಯ ಹುರಕಡ್ಲಿ ಶಿವಕುಮಾರ ಸಾಮಾನ್ಯ ರೈತರಾದರೂ ಸಾಹಿತ್ಯ, ಸಂಘಟನೆ, ಹೋರಾಟ, ಪುಸ್ತಕ ಪ್ರಚಾರಗಳಲ್ಲಿ ಸದಾ ತಮ್ಮನ್ನು ತೊಡಗಿಸಿಕೊಂಡವರು ತೊಗಲು ಬೊಂಬೆಯಾಟ,

ಕಾವ್ಯೋತ್ತರ ತಮ್ಮ ಮೇಷ್ಟ್ರು ಎಂಬ ಕೃತಿಗಳನ್ನು ರಚಿಸಿದ್ದಾರಲ್ಲದೆ ಅನೇಕ ಪುಸ್ತಕಗಳನ್ನು ಸಂಪಾದಿಸಿ ಹೊರ ತಂದಿದ್ದರೆ.

• "ತಂಬ್ರಹಳ್ಳಿಯ ನಿವೃತ್ತ ಶಿಕ್ಷಕರಾದ ಶ್ರೀ ಹವಲ್ದ್‌ರ್ ಕೃಷ್ಣಮೂರ್ತಿ ಕವಿ, ಲೇಖಕ, ಕಥೆಗಾರ, ನಾಟಕಕಾರರಾಗಿದ್ದಾರೆ. ಇವರು ಪ್ರತಿಪಾದಿಸಿದ ಕವನ ಸಂಕಲನ ಮರೆಯಿಂದ ತೆರೆಗೆ, ಜೊತೆಗೆ ಪ್ರತಿಬಿಂಬ ಎಂಬ ಕಥಾಸಂಕಲನ ಹೊರ ತಂದಿದ್ದಾರೆ"೫

೨.೩.೫. ಜನಪದ ರಂಗ ಕಲೆ

ಈ ತಾಲೂಕಿನಲ್ಲಿ ಜನಪದದ ವಿಭಿನ್ನ ಪರಂಪರೆಗಳು ಇವೆ. ಹಳ್ಳಿಗೊಂದರಂತೆ ಜನಪದ ಕಲೆಗಳು ವಿಶಿಷ್ಟಗೊಳ್ಳುತ್ತವೆ. ಇಲ್ಲಿ ವಿಶಿಷ್ಟ ನಂಬಿಕೆಗಳಲ್ಲಿ. ಅವುಗಳಲ್ಲಿ ಸಾಮರಸ್ಯವಿದೆ. ಆಧುನಿಕ ಕಲಾಮಾಧ್ಯಮಗಳ ಅಬ್ಬರದ ನಡುವೆ ಇಲ್ಲಿನ ಜನಪದ ಕಲೆ ಜೀವಂತವಾಗಿದೆ. ಇವುಗಳನ್ನು ನಂಬಿ ಜೀವನ ಸಾಗಿರುತ್ತಿರುವ ಅನೇಕ ಕಲಾವಿದರು ತಾಲೂಕಿನ್ಯಾದ್ಯಂತ ಇದ್ದಾರೆ. ಈ ತಾಲೂಕು ಅನೇಕ ಜನಪದ ಕಲೆಗಳ ಹಾಗೂ ಕಲಾವಿದರ ನೆಲೆಬೀಡಾಗಿದೆ. ದೈವಿಕ ಹಾಗೂ ಜನಾಂಗಿಯ ನೆಲೆಗಳಲ್ಲಿ ಕಲೆ ಕಥೆಗಳಲ್ಲಿ ಸೃಷ್ಟಿಗೊಂಡಿವೆ. ಈ ಭಾಗದಲ್ಲಿ ತೊಗಲುಗೊಂಬೆಯಾಟ, ಜೊಗತಿ ಹಾಡುಗಳು, ಬಯಲಾಟ, ಗೊಂದಲಿಗರ ಹಾಡುಗಳು, ಕೋಲಾಟ, ಡೊಳ್ಳುಕುಣಿತ, ಒಡಪು, ನಂದಿಕೋಲು ಕುಣಿತ, ಭಜನೆ ಸವಾಲದ ಜವಾಲ್, ಲಂಬಾಣಿ ಹಾಡುಗಳು, ನೃತ್ಯಗಳಲ್ಲದೇ ಹತ್ತಾರು ಪ್ರಕಾರದ ಗರತಿಯರು ಹಾಡು ಜನಪದದ ಕಂಪಾಗಿ ಸೂಸುತ್ತಿವೆ. "ಬಾಚಿಕೊಂಡನಹಳ್ಳಿ ಗುಡಿಹಿಂದಲು ಪಕ್ಕೀರವ್ವ ಹಾಗೂ ಏಣಿಗಿ ಬಸಾಪುರ ಹರಿಜನ ಸಾರೆವ್ವ ಉತ್ತಮ ಜನಪದ ಹಾಡುಗಾರ್ತಿಯರಾಗಿದ್ದರು. ಇವರಂತೆ ಬಹಳಷ್ಟು ಜನರಿದ್ದಾರೆ, ಅವರು ಬೆಳಕಿಗೆ ಬಂದಿಲ್ಲ.

ಹಂಪಾಪಟ್ಟಣದ ಗೊಂದಲಿಗರ ದೇವೇಂದ್ರಪ್ಪ ಗೊಂದಲಿಗ ಹಾಡುವಿಕೆಯಲ್ಲಿ ತಮ್ಮದೇ ಆದ ವಿಶಿಷ್ಟತೆಯನ್ನು ಮೆರೆದಿದ್ದಾರೆ. ಇದು ಶಕ್ತಿ ಉಪಾಸನೆಯನ್ನು ಆಧಾರವಾಗಿಟ್ಟುಕೊಂಡವರು. ಗೊಂದಲಿಗರ ಹಾಡು ದಾರ್ಮಿಕ ಕ್ರಿಯೆಯಲ್ಲಿ ಮಹತ್ವದಾಗಿದೆ. ಜಾನಪದ ಕಲೆಗೆ ಪ್ರೋತ್ಸಹ ನೀಡಲು ೧೯೮೨ರಲ್ಲಿ ಜಿಲ್ಲಾ ಮಟ್ಟದ ಜನಪದ ಕಲಾ ಮೇಳ ಹಗರಿಬೊಮ್ಮನಹಳ್ಳಿಯಲ್ಲಿ ನಡೆದಿದೆ. ಈ ಮೇಳಕ್ಕೆ ಪ್ರಸಿದ್ದರಾದ ಶಿವರಾಮ ಕಾರಂತ ಹಾಗೂ ಕೆ ವಿ ಸುಬ್ಬಣ್ಣನವರು ಆಗಮಿಸಿದ್ದರು. ತೊಗಲುಗೊಂಬೆ ಆಡಿಸುವುದರಲ್ಲಿ ಯಡ್ರಾಮನಹಳ್ಳಿ ದೊಡ್ಡ ಭರಮಪ್ಪ ಖ್ಯಾತಿಯನ್ನೇ ಪಡೆದಿದ್ಧಾರೆ. ೧೮ನೇ ವಯಸ್ಸಿಗೆ ರಂಗ ಪ್ರವೇಶಿಸಿದ ಇವರು ರಾಮಾಯಣವನ್ನು ಪರಂಪರಾಗತವಾಗಿ ಬಂದಿರುವ ಗೊಂಬೆಗಳನ್ನೂ ಒಬ್ಬರೆ ಕುಣಿಸುವುದರಲ್ಲಿ ಎತ್ತಿದ ಕೈ.

• ಜೋಗತಿ ಹಾಡಿನಲ್ಲಿ ಕಾಳವ್ವ ಹೆಸರುವಾಸಿಯಾಗಿದ್ದಾರೆ. ಮೂಲತಃ ಮರಿಯಮ್ಮನಹಳ್ಳಿಯವರಾದ ಇವರು ಹಗರಿಬೊಮ್ಮನಹಳ್ಳಿಯಲ್ಲಿ ವಾಸವಾಗಿದ್ದರು. ಮೊದಲಿಗೆ ಕಾಳಪ್ಪನಾಗಿದ್ದು ನಂತರ ಕಾಳವ್ವರಾಗಿ ಬದಲಾವಣೆ ಹೊಂದಿರುವರು. ಪ್ರಥಮವಾಗಿ ಬಯಲಾಟದಲ್ಲಿ ಹೆಣ್ಣು ಪಾತ್ರಗಳನ್ನು ಮಾಡುತ್ತಿದ್ದಳು. ನೃತ್ಯ ಕಲಾವಿದೆಯಾಗಿಯೂ ಜನಪ್ರಿಯಳಾಗಿದ್ದಾಳೆ. ಹಗರಿಬೊಮ್ಮನಹಳ್ಳಿ ಜಾತ್ರೆಯಲ್ಲಿ ರೇಣುಕ,

ಯಲ್ಲಮ್ಮನ ಚರಿತ್ರೆ ಹಾಡುತ್ತ ರಂಗ ಪ್ರವೇಶಿಸಿ ಇವರು ಧಾರವಾಡ, ಉಡುಪಿ, ರಾಣಿಬೆನ್ನೂರು, ಬೆಂಗಳೂರು, ಹುಬ್ಬಳ್ಳಿಗಳಲ್ಲಿ ಜೋಗತಿ ನೃತ್ಯ ಮತ್ತು ಹಾಡುಗಳನ್ನು ಹಾಡಿದ್ದಾರೆ. ಕನಿಷ್ಟ ನಾಲ್ಕು ಜನ ಸಹ ಕಲಾವಿದರೊಂದಿಗೆ ವೇಷ ಭೂಷಣ ಗೆಜ್ಜೆಯ ವಾದ್ಯಗಳೊಂದಿಗೆ ಕಾರ್ಯಕ್ರಮಗಳನ್ನು ನೀಡಿದ್ದಾಳೆ. ಆಕಾಶವಾಣಿಯಲ್ಲೂ ಕಾರ್ಯಕ್ರಮ ನೀಡಿದ್ದಾರೆ, ಚೌಡಿಕೆ ನುಡಿಸುತ್ತ ದಿನಗಮ್ಮೆಲೆ ಪದ ಹೇಳಬಲ್ಲ ಈ ಕಲಾವಿದೆ. ಅನೇಕ ದೃಷ್ಟಾಂತಗಳ ಮೂಲಕ ಪ್ರತಿಮೆಗಳಲ್ಲಿ ಕಾವ್ಯ ಕಟ್ಟುತ್ತಿದ್ದಳು. ತಲೆಯ ಮೇಲೆ ತುಂಬಿದ ಕೊಡ ಹೊತ್ತು ಮಾಡುವ ಸಾಹಸ ನೃತ್ಯ ರೋಮಾಂಚನಕಾರಿಯಾದುದು. ಇವರ ಕಲೆ ಗುರುತಿಸಿ ಸರಕಾರ ೨೦೦೦ ಸಾಲಿನ ರಾಜೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.

• "ಕೋಗಳಿ ಪಂಪಣ್ಣನವರ ಅಜಾನುಬಾವು ದೇಹವೇ ಅವರ ನಾಟಕ ಕಲೆಗೆ ವರದಾನವಾಗಿದೆ. ರಕ್ತರಾತ್ರಿಯಲ್ಲಿ ಅಶ್ವತ್ಥಾಮನಾಗಿ ಪ್ರಸಿದ್ದರಾಗಿದ್ದರು ಯಾರು ನನ್ನವರು ಇವರು ಗೆಳೆಯನೆ? ಇದು ಯಾರ ತಪ್ಪು? ಗುರುಭಕ್ತಿ ಶೀತಾವಲಿ ಅನೇಕ ನಾಟಕಗಳನ್ನೂ 'ಕೊಗಳಿ ಕೋಗಿಲೆ' ಹೆಸರಿನಿಂದ ಬರೆದಿದ್ದಾರೆ. ಅಂಗುಲಿಮಾಲ ನಟನೆಗೆ ವಿಭಾಗ ಮಟ್ಟದ ಅತ್ಯುತ್ತಮ ನಟ ಪ್ರಶಸ್ತಿ ಬಂದಿದೆ"೬


೨.೪. ತಾಲೂಕಿನ ಆರ್ಥಿಕ ಸ್ಥಿತಿಗತಿ

ಬಳ್ಳಾರಿ ಜಿಲ್ಲೆಯಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ಅತ್ಯಂತ ಕಡಿಮೆ ಜನಸಂಖ್ಯೆ ಇರುವ ತಾಲೂಕಾಗಿದೆ. ತಾಲೂಕಿನ ಜನ ಕೃಷಿ ಹಾಗೂ ಇತರೆ ಕಸುಬುಗಳನ್ನು ಅವಲಂಭಿಸಿದ್ದಾರೆ. ದೊಡ್ಡ ಕೈಗಾರಿಕೆಗಳು ಇಲ್ಲದಿದ್ದರೂ ಮಧ್ಯಮ ಹಾಗೂ ಚಿಕ್ಕ ಕೈಗಾರಿಕೆಗಳಿಗೇನು ಕೊರತೆ ಇಲ್ಲ. ಇಲ್ಲಿ ಕಾರ್ಮಿಕರ ಸಂಖ್ಯೆಯು ಹೆಚ್ಚಾಗಿದೆ. ಈ ಎಲ್ಲಾ ಜನರು ಜೀವನ ಮಧ್ಯಮ ಮರ್ಗದ್ದೆಂದು ಹೇಳಬಹುದು. ಇನ್ನುಳಿದಂತೆ ತಾಲೂಕಿನ ಗ್ರಾಮಾಂತರ ಪ್ರದೇಶಗಳಲ್ಲಿ ಶೇ೩೭ ರಷ್ಟು ಜನರು ಕೃಷಿಯನ್ನೇ ನಂಬಿ ಬದುಕುತ್ತಿದ್ದಾರೆ. ಇಲ್ಲಿ ಬೆಳೆಗಳಿಗೆ ಹಗರಿ ಜಲಾಶಯ, ತುಂಗಭದ್ರಾ ಜಲಾಶಯಗಳು ಉಸಿರಾಗಿವೆ. ಆದರೆ ಮಳೆ ಸರಿಯಾಗಿ ಬಾರದಿರುವುದರಿಂದ ರೈತರ ಜೀವನ ಕಷ್ಟಕರವಾಗುತ್ತದೆ. ಬಹಳಷ್ಟು ರೈತರು ಈಗ ತೋಟಗಾರಿಕೆ ಬೆಳೆಗಳಿಗೆ ಮೊರೆ ಹೊಗುತ್ತಾ ಹನಿ ನೀರಾವರಿಯುನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ನೀರಾವರಿ ಅನುಕೂಲವಿದ್ದರೂ ರೈತ ಸಮುದಾಯ ಆರ್ಥಿಕ ಸಂಕಷ್ಟದಲ್ಲಿದೆ.

ಕೋಷ್ಟಕ–೨.೩ ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲಾ ಹೆಚ್‌ಬಿ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ದೇವದಾಸಿ ಕುಟುಂಬಗಳ ಲಿಂಗವಾರು ಕಸುಬುಗಳು

ಕಸುಬುಗಳು	ಲಿಂಗವಾರು		
	ಗಂಡು	ಹೆಣ್ಣು	ಒಟ್ಟು
ಕೃಷಿ	೨	೦	೨
ಕೃಷಿಕೂಲಿ	೪೨	೩೨	೭೪
ವ್ಯಾಪಾರ	೨	೦	೨

ಸರ್ಕಾರಿ	೧	೦	೧
ಖಾಸಗಿ ೫	೧	೬	
ಇತರೆ	೧	೦	೧
ಒಟ್ಟು	೫೩	೩೩	೮೬



ಕೋಷ್ಟಕ–೨.೩ ಈ ಕೋಷ್ಟಕದಲ್ಲಿ ಹಗರಿಬೊಮ್ಮನ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ತಮ್ರಳ್ಳಿ, ಬನ್ನಿಗೋಳ, ಚಿಲುಗೊಡು, ರಾಮನಗರ, ಹಂಪಾಪಟ್ಟಣ, ಮರಿಯಮ್ಮನ ಹಳ್ಳಿ ಈ ಐದು ಗ್ರಾಮಗಳಲ್ಲಿನ ದೇವದಾಸಿ ಕುಟುಂಬದವರು ತಮ್ಮ ಜೀವನಕ್ಕೆ ಯಾವ ಯಾವ ವೃತ್ತಿಯನ್ನು ಅನುಸರಿಸುತ್ತಿದ್ದಾರೆ ಮತ್ತು ಎಷ್ಟು ಪ್ರಮಾಣದ ಜನರು ಅನುಸರಿಸುತ್ತಿದ್ದಾರೆ ಎಂಬುದನ್ನು ತಿಳಿಸಲಾಗಿದೆ. ದೇವದಾಸಿ ಕುಟುಂಬದವರು ಕೃಷಿಯಲ್ಲಿ ೨ ಜನ ಗಂಡುಮಕ್ಕಳು, ಕೃಷಿ ಕೂಲಿಯಲ್ಲಿ ೪೨ ಜನ ಗಂಡು ಮಕ್ಕಳು, ೩೨ ಜನ ಹೆಣ್ಣು ಮಕ್ಕಳು ಒಟ್ಟು ೭೪ ಜನ ದುಡಿಯುತ್ತಿದ್ದಾರೆ. ವ್ಯಾಪಾರದಲ್ಲಿ ೨

ಜನ ಗಂಡುಮಕ್ಕಳು, ಸರ್ಕಾರಿ ಹುದ್ದೆಯಲ್ಲಿ ಒಬ್ಬ, ಖಾಸಗೀ ಹುದ್ದೆಯಲ್ಲಿ ೫ ಗಂಡು, ೧ ಹಣ್ಣು ದುಡಿಯುತಿದ್ದಾರೆ ಇನ್ನು ಇತರೇ ವೃತ್ತಿಯಲ್ಲಿ ಒಬ್ಬ ಗಂಡುಮಗ ದುಡಿಯುತ್ತಿರುವುದು ಕಂಡುಬರುತ್ತದೆ. ಇನ್ನು ಶೆಕಡವಾರು ನೋಡುವುದಾದರೆ ಕೃಷಿಯಲ್ಲಿ ಶೇಕಡ ೨ ರಷ್ಟು, ಕೃಷಿ ಕೂಲಿ ೭೪%ರಷ್ಟು, ವ್ಯಾಪಾರದಲ್ಲಿ ಶೇಕಡ ೨ ರಷ್ಟು, ಸರ್ಕಾರಿ ಹುದ್ದೆಯಲ್ಲಿ ಶೇಕಡ ೧ರಷ್ಟು, ಕಾಸಗೀ ಹುದ್ದೆಯಲ್ಲಿ ಶೇಕಡ ೬ ರಷ್ಟು, ಇತರೆ ವೃತ್ತಿಯಲ್ಲಿ ಶೇಕಡ ೧ರಷ್ಟು ಜನರು ದುಡಿಯುತ್ತಿರುವುದು ಕಂಡುಬರುತ್ತದೆ ಒಟ್ಟಾರೆ ದೇವದಾಸಿಯರ ಕುಟುಂಬಹು ಹೆಚ್ಚಾಗಿ ಕೃಷಿ ಕೂಲಿಯನ್ನೆ ಅವಲಂಬಿಸಿ ಬದುಕುತ್ತಿರುವುದು ಈ ಕೋಷ್ಟಕದಿಂದ ತಿಳಿದುಬರುತ್ತದೆ. ಇದಕ್ಕೆ ಪ್ರಮುಕ ಕಾರಣ ಆವರು ಭೂಮಿಯನ್ನು ಹೊಂದಿಲ್ಲದಿರುವುದು. ಈ ಎಲ್ಲಾ ಅಂಶಗಳನ್ನು ನೋಡಿದರೆ ದೇವದಾಸಿ ಮಹಿಳೆಯರಿಗೆ ಮತ್ತು ಅವರ ಕುಟುಂಬಗಳಿಗೆ ಯಾವುದೇ ಆರ್ಥಿಕ ಭದ್ರತೆ ಇಲ್ಲದಿರುವುದು ತಿಳಿಯುತ್ತದೆ.

ಅಡಿಟಪ್ಪಣಿ

೧. ಪರಮೇಶ್ವರಯ್ಯ ಸೊಪ್ಪಿನ ಮಠ, ಹಗರಿಬೊಮ್ಮನಹಳ್ಳಿ ತಾಲೂಕು ದರ್ಶನ, ೨೦೦೫, ಪುಟ-೩.

೨. ಅದೇ ಪುಟ-೪

೩. ಅದೇ ಪುಟ-೧೩-೧೪

೪. ಅದೇ ಪುಟ-೧೫

೫. ಅದೇ ಪುಟ-೫೧

೬. ಅದೇ ಪುಟ-೬೨

ಅಧ್ಯಾಯ: ಮೂರು

ದೇವದಾಸಿ ಪದ್ಧತಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ

೩.೧. ದೇವದಾಸಿ ಪದದ ಅರ್ಥ, ಹುಟ್ಟು ಮತ್ತು ಬೆಳೆವಣಿಗೆ

೩.೨. ದೇವದಾಸಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ

೩.೩. ದೇವದಾಸಿಯರ ಸಮಸ್ಯೆಗಳು ಮತ್ತು ಸವಾಲುಗಳು

ಅಧ್ಯಾಯ: ಮೂರು
ದೇವದಾಸಿ ಪದ್ಧತಿಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ

೩.೧. ದೇವದಾಸಿ ಪದನಿಷ್ಪತ್ತಿ

ದ್ರಾವಿಡರಲ್ಲಿ ಕೇವಲ ಗುಡಿಯ ಕಸ ಗುಡಿಸಿ, ದೀಪ ಹಚ್ಚಿ, ಪೂಜೆ ಮಾಡುವವಳಿಗೆ ದೇವದಾಸಿ ಎಂದು ಕರೆಯುತ್ತಿದ್ದರು. ಆರ್ಯರು ಇಲ್ಲಿಗೆ ಬಂದ ಮೇಲೆ ಆಕೆ ಸಂಗಿತ, ನೃತ್ಯಗಳಲ್ಲಿ ಪ್ರವೀಣೆಯಾಗಿ ದೊಡ್ಡ ದೇವಾಲಯಗಳಲ್ಲಿ ಅಂಗಭೋಗ, ರಂಗಭೋಗ ನೀಡುವವಳಾಗಿ ಸಾಹಿತ್ಯ, ಸಾಂಸ್ಕೃತಿಕ ಪ್ರತಿನಿಧಿಯಾದಳು. ಆದರೆ ಈಗಾಗಲೇ ಹೆಣ್ಣು ಪೂಜಾರಿಣಿಯ ಬದಲಿಗೆ ಗಂಡು ಪೂಜಾರಿಗಳು ಹುಟ್ಟಿಕೊಂಡಿದ್ದು. ಅವರು ಈ ದೇವದಾಸಿಯರನ್ನು ತಮ್ಮ ಸ್ವಾರ್ಥ ಸುಖಕ್ಕಾಗಿ ಭೋಗ ಲಾಲಸೆಗಾಗಿ ಅನುಭವಿಸುದರ ಜೊತೆಗೆ ರಾಜ ಮಹಾರಾಜರು, ಸಾಮಂತ ಸರದಾರು. ಶ್ರೀಮಂತರು ದೇವರ ಪ್ರತಿನಿಧಿಗಳೆಂದು ಹೇಳಿ ಅವರನ್ನು ಸೂಳೆಯನ್ನಾಗಿ ಮಾಡುವುದರ ಮೂಲಕ ಈ ಪದ್ದತಿಗೆ ಇದ್ದ ಗೌರವ ಹಾಗೂ ಪಾವಿತ್ರ್ಯ ಭಾವನೆಯನ್ನು ಕಳಚಿ ಹಾಕಿದರು. ಈ ಪದದ ಅರ್ಥವ್ಯಾಪ್ತಿಯನ್ನು ಕುಂಠಿತಗೊಳಿಸಿದರು. ಕೆಸರಿನಲ್ಲಿ ಕಮಲ ಹುಟ್ಟಿದಂತೆ ಕೆಳಜಾತಿಯಲ್ಲಿ ಸಂಗೀತ, ಸಾಹಿತ್ಯ, ನೃತ್ಯದಲ್ಲಿ ಪ್ರವೀಣೆಯಾರಾದವರು ಹುಟ್ಟಿದರೂ ಧರ್ಮಶಾಹಿ, ರಾಜಶಾಹಿ, ಅಧಿಕಾರ ಶಾಹಿಗಳಿಗೆ ಸಿಕ್ಕು ಕೆಸರಿನಲ್ಲಿ ಕೆಸರಾಗಿ ಹೋದ ಕಮಲಗಳಾದರು. 'ದೇವದಾಸಿ ಶಬ್ದ ಸಂಸ್ಕೃತ ಭಾಷೆಯಿಂದ ಬಂದಿದ್ದು ಸ್ಥಳೀಯವಾಗಿ ಇವರನ್ನು ಸೂಳೆ, ಬಸವಿ, ಸ್ತಾನ, ಕಸಬಿ, ಮುತ್ತು ಕಟ್ಟಿಕೊಂಡವಳು ಹೀಗೆ ಅನೇಕ ಹೆಸರುಗಳಿಂದ ಕರೆಯಲಾಗುತ್ತದೆ.

ದೇವದಾಸಿ ಪದ ಸಂಸ್ಕೃತದ್ದು ಹಾಗೇ, ಜೋಗತಿ ಸಂಸ್ಕೃತದ ಸಹಯೋಗದಿಂದ ಜೋಗವಾಗಿ ಆದುವೆ ಜೋಗತಿಯಾಗಿದೆ. ಆದರೆ ಬಸವಿ ಪದ ಶುದ್ದ ದ್ರಾವಿಡದ್ದು, ಕನ್ನಡದ್ದು. ಆರ್ಯರು ಈ ದೇಶಕ್ಕೆ ಬರುವ ಪೂರ್ವದಲ್ಲಿ ಈ ಬಸವಿ ಪದ್ದತಿ ಇತ್ತು. ಆದರೆ ಇವತ್ತಿನ ರೂಪದಲ್ಲಿ ಅಲ್ಲ ತಮ್ಮ ಮನೆಯನ್ನು ನೋಡಿಕೊಂಡು ಹೋಗಲು ಒಬ್ಬ ಹೆಣ್ಣು ಮಗಳನ್ನು ಬಿಡುವಂತೆ. ದೇವರನ್ನನು ನೋಡಿಕೊಂಡು ಹೋಗಲು ಒಬ್ಬ ಹೆಣ್ಣು ಮಗಳನ್ನು ದೇವರ ಮನೆಯೊಳಗೆ ಇರಬೇಕೆಂದು ಅವರ ಮುಗ್ದವಾಭವನೆ. ಕಾಲಾನಂತರದಲ್ಲಿ ಆರ್ಯರ ಸಂಪರ್ಕದಿಂದ ಬಸವಿಗೆ ಬಿಡುವ ಪದ್ದತಿ ಬಂದಿತು. ದೇವರಿಗೆ ಹೋರಿ ಬಿಟ್ಟರೆ ಬಸವನೆನ್ನುವಂತೆ ಪೂರ್ವದಲ್ಲಿ ದೇವಸ್ಥಾನಗಳನ್ನು ಸ್ವಚ್ಛವಾಗಿಟ್ಟುಕೊಳಲು

ಒಂದು ಹೆಣ್ಣನ್ನು ಮುಡಿಪಾಗಿಟ್ಟದ್ದೇ ಬಸವಿ ಪದ್ಧತಿಗೆ ಪೀಠಿಕೆಯಾಯಿತು. ದ್ರಾವಿಡ ಮಾತೃ ಪ್ರಧಾನ ವ್ಯವಸ್ಥೆಯಲ್ಲಿ ಇದು ಹುಟ್ಟಿದ್ದಾಗಿದೆ. "ಆರ್ಯರ ಕೃತಿಯಾದ ಋಗ್ವೇದದಲ್ಲಿ 'ಕನ್ಯಾಕುವರ' ಕೌಟಿಲ್ಯ ಅರ್ಥಶಾಸ್ತ್ರದಲ್ಲಿ ಬರುವ ಗಣಿಕೆಯರು ವಿಂದ್ಯಾಪರ್ವತದ ಗುಹೆದಲ್ಲಿ ಸಿಗುವ ಸಚಿತೂನಕಾ ದಾಸಿ ಕುಮಾರಿ ಮುಂತಾದ ಪ್ರಕೃತ ಶಬ್ದಗಳು ದೇವದಾಸಿಯ ಸಮನಾರ್ಥಕ ಶಬ್ದಗಳೇ ಆಗಿದೆ".[೧] ಮಳೆ ಬೆಳೆ ಬರಲೆಂದು ದನಕರು, ಜನಗಳಿಗೆ ಬಂದ ರೋಗ ಹೋಗಲೆಂದು ದೇವರಿಗೆ ಪ್ರಾಣಿಗಳ ಕಾಣಿಗೆ ಕೊಟ್ಟಂತೆ ಮನುಷ್ಯನನ್ನು ಕಾಣಿಕೆ ಕೊಡುವುದಾಗಿದೆ. ದ್ರಾವಿಡ ಭಾಷೆಯಲ್ಲಿ ಸೀಮಿತಾರ್ಥ ಪಡೆದಿದ್ದ ಶುದ್ಧಾರ್ಥದಲ್ಲಿದ್ದ ಬಸವಿ ಆರ್ಯರದಿಂದ ಸಂಸ್ಕೃತೀಕರಣಗೊಂಡು ದೇವದಾಸಿ ಆದ ಮೇಲೆ ಅದರ ವ್ಯಾಪ್ತಿ ಹೆಚ್ಚಾಯಿತೆನ್ನಬಹುದಾಗಿದೆ.

ದೇವದಾಸಿ ಪದದ ಅರ್ಥ, ಹುಟ್ಟು

"ಕರ್ನಾಟಕದಲ್ಲಿ ಅನಾದಿ ಕಾಲದಿಂದಲೂ ವೇಶ್ಯಾವೃತ್ತಿ ಅಸ್ತಿತ್ವದಲ್ಲಿದೆ. ದೇವದಾಸಿಯರು ಈ ವೃತ್ತಿಯ ಒಂದು ಭಾಗವಾಗಿದ್ದಾರೆ. ಇದರ ಅರ್ಥ ದೇವದಾಸಿಯರೆಲ್ಲಾ ವೇಶ್ಯೆಯರು ಎಂದಲ್ಲ. ಆಲನಹಳ್ಳಿಯಲ್ಲಿ ದೊರೆತ ಕ್ರಿ.ಶ. ೧೧೩ ನೇಯ ಇಸವಿಯ ಶಾಸನದಲ್ಲಿ 'ದೇವದಾಸಿ' ಪದದ ಉಲ್ಲೇಖನವಿದೆ. ಈ ಪದದ ಉಲ್ಲೇಖವಿರುವ ಅತ್ಯಂತ ಪ್ರಾಚೀನ ಶಾಸನ ಇದು. ಅದಕ್ಕಿಂತ ಹಿಂದಿನ ಶಾಸನಗಳಲ್ಲಿ ವೇಶ್ಯೆಯರನ್ನು 'ಸೂಳೆ' ಎಂದು ಹೆಸರಿಸಲಾಗಿದೆ. 'ಸೂಳೆ' ಪದವನ್ನು ಉಲ್ಲೇಖಿಸಿರುವ ಅತ್ಯಂತ ಹಳೆಯ ಶಾಸನ ಮಹಾಕಾಶ ಕರ್ನಾಟಕದಲ್ಲಿ ಕ್ರಮವಾಗಿ ಸೂಳೆ ಪದದ ಪ್ರಚೀನತೆ ಕ್ರಿ.ಶ. ೭೩೩ ಮತ್ತು ದೇವದಾಸಿ ಪದದ ಪ್ರಚೀನತೆ ಕ್ರಿ.ಶ. ೧೧೧೩ ಅನೇಕ ಶಾಸನಗಳಲ್ಲಿ ಮತ್ತು ಕಾವ್ಯಗಳಲ್ಲಿ 'ರಾಣಿವಾಸಿ' ಪಂಡವಾಡ, ಪೆಂಡವಾಸದ ಸೂಳೆಯರು ವರ, ವಧು, ಗಣಿಕೆ ಈ ಬಗೆಯ ಗುಣವಾಚಕಗಳು ಸೂಳೆ ಪದಕ್ಕೆ ಇರುವುದನ್ನು ಗಮನಿಸಬಹುದು ಅರಮನೆಗಳಿಗೆ ಸಂಬಂಧ ಹೊಂದಿದ್ದ ವೇಶ್ಯೆಯರನ್ನು ಗಮನಿಸಬಹುದು. ದೇವದಾಸಿ ಪದದ ಕುರಿತು ಈ ಮೇಲಿನ ಪದಗಳು ಬಳಕೆಯಲ್ಲಿದ್ದವು ರಾಜವೇಶ್ಯಯರು ಎಂದು ಅವರನ್ನು ಕರೆಯಲಾಗುತ್ತಿತ್ತು. ಆ ವೇಶ್ಯೆಯರು ಕೆಲವೊಂದು ಅರಮನೆಗಳೊಂದಿಗೆ ಸಂಬಂಧ ಹೊಂದಿದ್ದರು. ಅವರ ಕಸುಬು ವಂಶ ಪಾರಂಪರ್ಯವಾಗಿತ್ತು. ಗೊಂಕ ಎಂಬ ಒಬ್ಬ ರಾಜ ತನ್ನ ಸಾಮ್ರಾಜ್ಯದ ದೇವಾಲಯದ ಒಬ್ಬ ವೇಶ್ಯೆಯನ್ನು ಮದುವೆಯಾದದ್ದರ ಬಗ್ಗೆ ಕ್ರಿ.ಶ. ೯ನೇ ಶತಮಾನದ ಒಂದು ಶಾಸನದಲ್ಲಿ ಉಲ್ಲೇಖವಿದೆ."[೨] ಸಮಾಜದಲ್ಲಿ ಉನ್ನತ ಸ್ಥಾನವನ್ನ ಈ ರಾಜವೇಶ್ಯೆಯರು ಹೊಂದಿದ್ದರು ಅನೇಕ ಶಿಲಾಶಾಸನಗಳ ಸಾಕ್ಷ್ಯಾಧಾರಗಳಿಂದ ಇದು ಮತ್ತಷ್ಟು ಖಚಿತವಾಗುತ್ತದೆ. ಮನುಷ್ಯನ ಮನಸ್ಸಿನಲ್ಲಿ ಇರುವ ದೇವರು ಧರ್ಮದ ಪ್ರಭಾವದಿಂದ ದೇವದಾಸಿ ಪದ್ಧತಿ ಉಳಿದುಕೊಂಡು ಬಂದಿದೆ.

ಈ ಪ್ರಭಾವ ಎಷ್ಟೊಂದು ಪ್ರಭಾವಕಾರಿ ಎನ್ನುವುದಕ್ಕೆ "ಬ್ಯಾಬಿಲೋನಿಯಾದ ಮಿಲಿಟಾದೇವಿಯ ಉದಾಹರಣೆಯನ್ನು ಇಲ್ಲಿ ನೀಡಲೇಬೇಕೆನಿಸುತ್ತದೆ. ಮಿಲಿಟಾದೇವಿ ಮುಕ್ತ ಸ್ವಾತಂತ್ರ್ಯದ ಪ್ರತೀಕ ಎಂದು ಭಾವಿಸಲಾಗಿದೆ. ಬಂಧನದಾಚೆ ಬದುಕುವ ಬೆಂಬಲದ ಈ ದೇವಿಯ ಹೆಸರಿನಲ್ಲಿ ಪ್ರತಿವರ್ಷ

ಜಾತ್ರೆ ಕೂಡ ನಡೆಯುತ್ತದೆ. ಜಾತ್ರೆಯ ದಿನ ದೇವಾಲಯಕ್ಕೆ ಬರುವ ಯಾವುದೇ ಗಂಡು, ಯಾವುದೇ ಹೆಣ್ಣಿನ ಕೈ ಹಿಡಿದನೆಂದರೆ ಮುಗಿಯಿತು ಆ ಹೆಣ್ಣು ಆ ಗಂಡಿನ ಜೊತೆ ರಾತ್ರಿ ಹಾಸಿಗೆ ಹಂಚಿಕೊಳ್ಳಲೇಬೇಕಿತ್ತು. ಇದು ನಿಯಮವಾಗಿಯೂ ಚಾಲ್ತಿಯಲ್ಲಿತ್ತು. ಪ್ರತಿಯೊಬ್ಬ ಹೆಣ್ಣು ತನ್ನ ಬದುಕಿನಲ್ಲಿ ಒಮ್ಮೆಯಾದರೂ ಪರಪುರುಷನ ಸಂಗ ಮಾಡಲೇಬೇಕು ಅದೂ ಅ ದೇವಲಾಯದಲ್ಲೇ ನಡೆಯಬೇಕು. ಕೈ ಹಿಡಿದ ಹೆಣ್ಣಿನೊಂದಿಗೆ ಮಲಗಿ ಸುಖಿಸಿ ತೃಪ್ತನಾಗುತ್ತಿದ್ದ ಗಂಡು ಅನೇಕ ಉಡುಗೊರೆಗಳನ್ನು ಆಕೆಗೆ ನೀಡುತ್ತಿದ್ದನು. ಆ ಉಡುಗೊರೆಗಳನ್ನು ಆ ಹೆಣ್ಣು ಆ ದೇವಾಲಯದ ಪೆಟ್ಟಿಗೆಯಲ್ಲಿಯೇ ಹಾಕಬೇಕಿತ್ತು ಅದು ದೇವಾಲಯದ ಖಜಾನೆಗೆ ಜಮಾ ಆಗುತ್ತಿತ್ತು”.[೩] ಆದರೆ ಇಂತಹ ಪದ್ಧತಿ ಕರ್ನಾಟಕದ ಯಾವುದೇ ಜಿಲ್ಲೆಯಲ್ಲೂ ಅನುಸರಿಸುವುದಿಲ್ಲ ಇದಕ್ಕೆ ಪರ್ಯಾಯ ಪದ್ಧತಿಯಾಗಿ ಮಾರೆಮಾಚಿದ ಜಾತಿಯ ಹೆಸರಿನಲ್ಲಿ ನಮ್ಮ ಆಚರಣೆಗಳನ್ನು ನಾವು ಮತ್ತು ಮುಂದಿನ ಪೀಳಿಗೆಗೆ ಬಳುವಳಿಯಾಗಿ ಪದ್ಧತಿಯನ್ನು ಆಚರಣೆಗೆ ಒಳಪಡಿಸಿಕೊಂಡು ಬರುತ್ತಿರುವುದನ್ನು ತಿಳಿಯಬಹುದಾಗಿದೆ.

ದೇವದಾಸಿ ಪದ್ಧತಿ ಮಧ್ಯಯುಗದಲ್ಲಿ ತುಂಬಾ ಹೆಚ್ಚಾಯಿತು. ಕ್ರಿ.ಶ. ೧೩೧೫ ರಲ್ಲಿ ಭಾರತಕ್ಕೆ ಬೇಟಿ ನೀಡಿದ ಅರೇಬಿಯಾದ ಇಬ್ಬರು ಮುಸ್ಲಿಂ ಪ್ರವಾಸಿಗರು ಭಾರತದ ‘ವೇಶ್ಯೆ’ಯರನ್ನು ದೇವದಾಸಿ ಎಂದು ಕರೆದಿದ್ದಾರೆ. ‘ಒಬ್ಬ ಮಹಿಳೆ ಮಕ್ಕಳಾಗುವಂತೆ ಹರಕೆ ಹೊತ್ತುಕೊಂಡು ಸುಂದರವಾದ ಹೆಣ್ಣು ಮಗುವನ್ನೇ ಹೆತ್ತರೆ ಆ ಮಗುವನ್ನು ‘ಬೇಡ ಎಂದು ದೇವರ ಮೂರ್ತಿ ಇರುವ ಸ್ಥಳದಲ್ಲಿ ಬಿಟ್ಟು ಬರಲಾಗುತ್ತದೆ. ಆ ಹೆಣ್ಣು ಮಗು ದೊಡ್ಡವಳಾದ ನಂತರ ಆ ಊರಿನ ಸಾರ್ವಜನಿಕ ಸ್ಥಳದಲ್ಲಿ ಒಂದು ಮನೆ ಮಾಡಿಕೊಂಡು ಇರುತ್ತಿದ್ದಳು. ಮನೆಯ ಬಾಗಿಲಿಗೆ ಒಂದು ಪರದೇ ಹಾಕಿಕೊಂಡು ಹಾದಿಯಲ್ಲಿ ಹೋಗಿ ಬರುವ ಗಂಡರಸರನ್ನು ಅಹ್ವಾನಿಸುವ ರೀತಿಯಲ್ಲಿ ವರ್ತಿಸುತ್ತಿದ್ದಳು. ಅವಳ ಕರೆಗೆ ಓಗೊಟ್ಟ ಗಂಡಸರು ಹಿಂದೂವಾಗಲಿ ಅಥವಾ ಇನ್ನವುದೇ ಪಂಥದವನಾಗಿರಲಿ ಆಕೆ ಆತನೊಂದಿಗೆ ನಿರ್ದಿಷ್ಟ ಪಡಿಸಿದ ಬೆಲೆಗೆ ದೇಹ ಸುಖವನ್ನು ಹಂಚಿಕೊಳ್ಳುತ್ತಿದ್ದರು ಹಾಗೆ ದೇಹ ಹಂಚಿಕೊಂಡು ಸಂಪಾದಿಸಿದ ಒಟ್ಟು ಹಣ ಅಥವಾ ಸಂಪತ್ತನ್ನು ಆಕೆ ದೇವಾಲಯದ ದೊಡ್ಡ ಮೂರ್ತಿಯ ಪೂಜಾರಿಗಳಿಗೆ ನೀಡುತ್ತಿದ್ದಳು. ಆಕೆ ಗಳಿಸಿದ ದುಡ್ಡಿನಲ್ಲಿಯೇ ದೇವಾಲಯದ ಪುನರುಜ್ಜೀವನ ಅಥವಾ ದೇವಾಲಯದ ಇನ್ನಿತರ ಖರ್ಚುಗಳು ನೀಗುತ್ತಿದ್ದವು”.[೪] ಕರ್ನಾಟಕದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಒಳಪಡಿಸಿಕೊಂಡ ಬಳ್ಳಾರಿ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಪಂಪಾಪಟ್ಟಣ ಗ್ರಾಮದ ಹನುಮಕ್ಕ ಎಂಬ ದೇವದಾಸಿಯು ಅವರ ತಂದೆ ತಾಯಿಗಳು ತಮ್ಮ ದೇವರು ಹುಲಿಗಮ್ಮ ನನಗೆ ಮಕ್ಕಳಾಗಲಿ ಎಂದು ಬೇಡಿಕೊಂಡಿದ್ದಕ್ಕೆ ಹೆಣ್ಣು ಮಗು ಜನನವಾಯಿತು ಅದಕ್ಕಾಗಿ ದೇವರ ಹೆಸರಿನಲ್ಲಿ ಮುತ್ತು ಪಟ್ಟಿಸುವ ಪದ್ಧತಿಯಲ್ಲಿ ನನ್ನನು ದೇವದಾಸಿ ಎಂದು ದೇವರಿಗೆ ಅರ್ಪಿಸಿದರು. ಇವರು ದೇವಸ್ಥಾನದ ಯಾವುದೇ ಕೆಲಸ ಕಾರ್ಯಗಳಿಗೆ ಕೈ ಹಾಕದೇ ತನ್ನ ಮನೆಯ ಸಂಪೂರ್ಣ

ಜವಾಬ್ದಾರಿಯನ್ನು ಒತ್ತುಕೊಂಡು ಅದರ ಜೊತೆಗೆ ತಮ್ಮ ಸಂಪ್ರದಾಯದಂತೆ ಪ್ರತಿ ಆಚರಣೆಗಳನ್ನು ಮಾಡಿಕೊಂಡು ಬರುತ್ತೇವೆ ಎನ್ನುತ್ತಾರೆ.

೩.೨. ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನ

ಕರ್ನಾಟಕದ ಬಹುತೇಕ ಪ್ರದೇಶಗಳಲ್ಲಿ ಕೆಳಸ್ತರದ ಹೆಣ್ಣು ಮಕ್ಕಳ ಕೊರಳಿಗೆ ಮುತ್ತು ಕಟ್ಟುವ ಮೂಲಕ ದೇವತೆ ಅಥವಾ ದೇವರೊಂದಿಗೆ ಮದುವೆ ಮಾಡಿ ಅವಳನ್ನು ದೇವರ ಹೆಸರಿನಲ್ಲಿ ಮೀಸಲಿಡುವ ಒಂದು ಅನಿಷ್ಟ ಸಂಪ್ರದಾಯ ದೇವದಾಸಿ ಪದ್ಧತಿಯಾಗಿದೆ. ಧಾರ್ಮಿಕತೆ ಸಂಪ್ರದಾಯಿಕತೆಯ ಹೆಸರಿನಲ್ಲಿ ಅನೇಕ ವರ್ಷಗಳಿಂದ ನಡೆದುಬಂದ ಈ ದೇವದಾಸಿ ಪದ್ಧತಿಗೆ ತನ್ನದೇ ಆದಂತಹ ಇತಿಹಾಸವೇ ಇದೆ. ರಾಜಮಹಾರಾಜರು ತಮ್ಮ ತಮ್ಮ ಆಳ್ವಿಕೆಯಲ್ಲಿ ಪೋಷಿಸಿ ಬೆಳಸಿಕೊಂಡು ಬಂದ. ಈ ಪದ್ಧತಿಗೆ ಒಳಗಾದ ದೇವದಾಸಿಯರನ್ನು ಬಸದಿ, ನರ್ತಕಿ, ಗಣಿಕೆ, ಮುರುಳಿ, ಜೋಗತಿ ಹೀಗೆ ಹಲವಾರು ಹೆಸರುಗಳಿಂದ ಗುರುತಿಸುವುದುಂಟು. "ಮಾರಿಯಾ ತೋರ್ರಿ ಇವರು ತಮ್ಮ ಅಬ್ಯುಸ್ ಅಫ್ ಲೋಆರ್ ಕ್ಯಾಸ್ಟ್ ಇನ್ ಪೌಥಾ ಇಂಡಿಯಾ ದಿ ಇನ್‌ಸ್ಟಿಟ್ಯೂಟ್ ಆಫ್ ದೇವದಾಸಿ ಎಂಬ ಸಂಶೋಧನಾ ಪ್ರಬಂಧದಲ್ಲಿ ದೇವದಾಸಿ ಎಂಬ ಸಾಮಾಜಿಕ ಸಂಸ್ಥೆಯ ಸಾಮಾಜಿಕ ಸಂಪ್ರದಾಯ ಮತ್ತು ಮೇಲ್ನೋಟಕ್ಕೆ ಧಾರ್ಮಿಕ ಕಾರಣಗಳಿಗಾಗಿ ಆಚರಣೆಯಲ್ಲಿ ಇದೆ ಅರ್ಥಿಕ ಒತ್ತಡಗಳಿಂದಾಗಿಯೇ ಆ ಪದ್ಧತಿಯ ಆಚರಣೆ ಉಳಿದುಕೊಂಡಿದೆ ಎಂದು ಪ್ರತಿಪಾದಿಸುತ್ತಾರೆ. ಹಾಗೆಯೇ ದೇವದಾಸಿ ಪದ್ಧತಿಯು ಕೆಲ ಮಟ್ಟದ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ ಹೊಂದಿದ ಕೆಳ ಜಾತಿಯ ಜನರ ಜೊತೆ ನೇರವಾದ ಸಂಬಂಧ ಹೊಂದಿದ್ದು ಇದರ ವಿರುದ್ಧ ಹೋರಾಟ ಕಷ್ಟವೂ ಮತ್ತು ಪ್ರಯಾಸದಾಯಕವೂ ಅದುದಾಗಿದೆ. ಆದ್ದರಿಂದ ದೇವದಾಸಿ ಮಹಿಳೆಯರ ವಿವಿಧ ಅವಶ್ಯಕತೆಗಳನ್ನೂ ಪೂರೈಸುವುದಷ್ಟೆ ಅಲ್ಲದೇ ಅದಕ್ಕೆ ಪೂರಕವಾದ ಅಸ್ಪೃಶ್ಯತೆ, ಜಾತಿ ಸಂಘರ್ಷಗಳಂತ ಸಮಸ್ಯೆಗಳನ್ನೂ ಬಗೆಹರಿಸಲು ಪರಿಣಾಮಕಾರಿಯಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು ರೂಪಿಸಬೇಕೆಂದು" ಅಭಿಪ್ರಾಯಪಡುತ್ತಾರೆ"[೫] ಕುಟುಂಬದ ನಿರ್ವಹಣೆಗಾಗಿ ಕುಟುಂಬಕ್ಕೆ ಗಂಡು ಇಲ್ಲವೆಂಬ ಕಾರಣಕ್ಕಾಗಿ ಸಮುದಾಯದಲ್ಲಿ ಊರಿನ ಮೇಲ್ಜಾತಿಯ ಪರ ಪುರುಷನೊಂದಿಗೆ ದೇವರ ಹೆಸರಿನಲ್ಲಿ ಮುತ್ತು ಕಟ್ಟಿಸಿ ಅವನೊಂದಿಗೆ ದೇಹ ಸಂಬಂಧವನ್ನು ಬೆಳಸಿಕೊಂಡು ದೇವತೆ ಹೆಸರಿಗೆ ವಾರದಲ್ಲಿ ಎರಡು ದಿನ ದೇವಿಯ ಕೃಪೆಗೆ ಪಾತ್ರರಾಗಿ ಉಳಿದ ದಿನಗಳಲ್ಲಿ ದಿನನಿತ್ಯದ ಕೂಲಿ ಆಧಾರದ ಮೇಲೆ ಜೀವನ ನೆಡೆಸಿಕೊಂಡು ಬರುತ್ತಾರೆ. ಇದು ಕೇವಲ ಇಂತಿಷ್ಟು ವರ್ಷಗಳವರೆಗೆ ಎಂದು ಅವರನ್ನು ದೇಹ ಸುಖಕ್ಕಾಗಿ ಬಳಸಿಕೊಂಡು ಕೈ ಬಿಡುವುದು. ಮೇಲ್ಜಾತಿಯವರು ಕೆಳಜಾತಿಯವರ ಮನಸ್ಸಿನಲ್ಲಿ ದೇವರ ಹೆಸರಿನಲ್ಲಿ ನಂಬಿಸಿ ಸಂಪ್ರದಾಯ ಪದ್ಧತಿ ಹೀಗೆ ಕಾರ್ಯಗತಗೊಳಿಸಿಕೊಂಡು ಹೋಗುವುದಾಗಿದೆ.

ಹನುಮಂತ ಅಥವಾ ಮಾರುತಿ ಗ್ರಾಮದೇವತೆಯಾಗಿರುವ ಊರುಗಳಲ್ಲಿಯೂ ಹನುಮಂತನಿಗೆ ಹೆಣ್ಣುಮಕ್ಕಳನ್ನು ಮೀಸಲು ಬಿಡಲಾಗುತ್ತದೆ. ಸಾಮಾನ್ಯವಾಗಿ ಹನುಮಂತ ಎಂದರೆ ಬ್ರಹ್ಮಚರ್ಯದ ಪ್ರತೀಕ ಎಂದೇ ನಂಬಲಾಗುತ್ತದೆ. ಆದರೂ ಈ ಬ್ರಹ್ಮಚಾರಿಗೆ ಹುಡುಗಿಯರನ್ನು ಮೀಸಲು ಬಿಡುವ ಪದ್ಧತಿ ಚಾಲ್ತಿಯಲ್ಲಿದೆ. ಎಂದರೆ ಅಚ್ಚರಿ ಪಡುವ ಸಂಗತಿಯೇ ಸರಿ. ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳ ಕೆಲ ಗ್ರಾಮಗಳಲ್ಲಿ ಹನುಮಂತ ಸಂಸಾರಿಯಾಗಿರುವುದು ಕಂಡು ಬರುತ್ತದೆ. ಆತನ ಹೆಸರಿನಲ್ಲಿ ಜೋಗಾ ಬೇಡುವ ದೇವದಾಸಿಯರು ಇದ್ದಾರೆ. ಆತನನ್ನು ಪೂಜಿಸುವ ಪೂಜರಿಯನ್ನು ದಾಸಿ ಎನ್ನಲಾಗುತ್ತದೆ. ದೇವಾಲಯದ ಎಲ್ಲಾ ಧಾರ್ಮಿಕ ಕಾರ್ಯಗಳನ್ನು ಅವರೇ ನಿರ್ವಹಿಸುತ್ತಾರೆ. ಹನುಮಂತನಿಗೆ ಆಂಜನೇಯ, ಬಿಳಿಕಲ್ಲಪ್ಪ ಎಂಬ ಹೆಸರುಗಳೂ ಈ ಭಾಗದಲ್ಲಿ ಪ್ರಚಲಿತವಾಗಿವೆ. ಭರತ ನಾಟ್ಯದ ಉಗಮ ದೇವದಾಸಿ ಪದ್ಧತಿಯಿಂದಲೇ ಆಗಿದೆ. ಆದರೆ ಇಂದು ಭರತನಾಟ್ಯದ ಜನಕರಾಗಿರುವ ದೇವದಾಸಿಯರನ್ನು ಯಾರು ನೆನಪಿಸಿಕೊಳ್ಳುವುದಿಲ್ಲ ಸಮಾಜದ ಉಚ್ಚವರ್ಗದ ಹಿಡಿತ ಈ ಭರತನಾಟ್ಯದ ಮೇಲೆ ಇರುವುದು ಕಂಡುಬರುತ್ತದೆ. ದೇವಾಲಯದೊಳಗೆ ಮತ್ತು ಹೊರಗೆ ದೇವದಾಸಿಯರು ನೃತ್ಯ ಮಾಡುತ್ತಿದ್ದರಿಂದ ಅದು ಅಂದು ತುಂಬ ಪ್ರಸಿದ್ದವಾಗಿತ್ತು. ದೇವದಾಸಿಯರಿಗೆ ಆ ನೃತ್ಯದ ಶಿಕ್ಷಣ ಕೂಡ ದೊರೆಯುತ್ತಿತ್ತು ಅವರದೇ ಆದ ಸಂಘಟನೆಗಳೂ ಇದ್ದವೂ ಒಬ್ಬ ದೇವದಾಸಿಯ ನಂತರ ಮತ್ತೊಬ್ಬ ದೇವದಾಸಿ ಆ ನೃತ್ಯ ಕಲೆಯ ಪರಪಂರೆಯನ್ನು ಮುಂದುವರಿಸುತ್ತಿದ್ದಳು. ಇದು ಅವರ ಆದಾಯದ ಮೂಲವಾಗಿತ್ತು ಇದನ್ನು ನಾವು ನಮ್ಮ ಸಂಘಟನೆಗಳನ್ನ ಮೂಲಕ ಬೆಳಸಿಕೊಂಡು ಹೋಗುತ್ತಿದ್ದೇವೆ. (ಸ್ಥಳೀಯ ಮಾಹಿತಿದಾರರು ಮರಿಯಮ್ಮನಹಳ್ಳಿ ದೇವದಾಸಿ ಇವತ್ತಿನ ದಿನಮಾನಗಳಲ್ಲಿ)

ಹಳ್ಳಿಗಳಲ್ಲಿಯ ದೇವದಾಸಿ ಅದರಲ್ಲಿಯೂ ವಿಶೇಷವಾಗಿ ಇಳಿ ವಯಸ್ಸಿನ ದೇವದಾಸಿ ಸಮಾಜದಲ್ಲಿ ಗೌರವದ ಸ್ಥಾನಮಾನ ಪಡೆದಿರುತ್ತಾಳೆ. ಯಾರದಾದರೂ ಸಂಸಾರದಲ್ಲಿ ತೊಂದರೆಗಳು ಕಾಣಿಸಿಕೊಂಡಾಗ ಜನ ಆಕೆಯ ಕಡೆ ಧಾವಿಸುತ್ತಾರೆ. ದೇವದಾಸಿಯ ದೇಹದಲ್ಲಿ ದೇವಿ ಬಂದು ತಮ್ಮ ಪ್ರತಿಯೊಂದು ಸಂಕಷ್ಟಕ್ಕೆ ಪರಿಹಾರವನ್ನು ಹೇಳುತ್ತಾಳೆ. ದೇವದಾಸಿ ಬಾಯಿಯಿಂದ ಹೊರ ಬೀಳುವ ಶಬ್ದಗಳನ್ನೂ ಸತ್ಯವೆಂದು ನಂಬಲಾಗುತ್ತದೆ. ಆದರೆ ದೇವದಾಸಿ ನೀಡುವ ಆದೇಶದ ಹಿಂದೆ ಊರಿನಲ್ಲಿ ದೇವದಾಸಿಯರ ಸಂಖ್ಯೆ ಹೆಚ್ಚಾಗಲಿ ಎನ್ನುವ ಉದ್ದೇಶವೇ ಇರುತ್ತದೆ. ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಯನ್ನ ಆ ಪದ್ಧತಿ ಅನುಸರಿಸುತ್ತಾ ಹೋಗುತ್ತಲೇ ಇರುತ್ತದೆ. ಮೈಮೇಲೆ ಹುರುಕು, ಗಜಕರ್ಣ ಉಂಟಾದಾಗ ಅವುಗಳನ್ನು ಚರ್ಮ ರೋಗವೆಂದು ಭಾವಿಸದೇ ಎಲ್ಲಮ್ಮದೇವಿಯ ಕೆಟ್ಟ ದೃಷ್ಟಿ ಎಂದು ತಿಳಿಯಲಾಗುತ್ತದೆ. ಅವುಗಳಿಗೆ ಔಷಧ ಉಪಚಾರ ಮಾಡದೇ ದೇವಿಯ ಹೆಸರಿನಲ್ಲಿ ಉಪವಾಸ ಮಾಡುವುದು ನೋವಿನ ಮೇಲೆ ಭಂಡಾರ ಹಚ್ಚುವುದು, ಪೂಜೆ

ಮಾಡಿಸುವುದು, ಲಿಂಬೆಕಾಯಿ ನಿವಾಳಿಸುವುದು, ಹರಕೆ ಹೊರುವುದು, ಕೌಲ ಹಚ್ಚುವುದು, ಪೂಜಾರಿಯ ಮನೆಗೆ ಹೋಗಿ ಸಂಕಷ್ಟಗಳ ಪರಿಹಾರಕ್ಕಾಗಿ ಮಾರ್ಗಗಳನ್ನೂ ಕೇಳುವುದು ಮೊದಲಾದವುಗಳನ್ನು ಮಾಡಲಾಗುತ್ತದೆ. ಅವುಗಳಿಂದಲೂ ಗುಣವಾಗದಿದ್ದರೆ ಎಲ್ಲಕ್ಕಿಂತಲೂ ಕಠೋರ ಎನಿಸುವ ಹರಕೆಯೂ ಹೊತ್ತುಕೊಂಡು ದೇವಿಗೆ ಹುಡುಗ ಹುಡುಗಿಯರನ್ನು ಮೀಸಲು ಬಿಡಲು ವಚನವನ್ನು ಜನ ನೀಡುತ್ತಾರೆ. ಮಕ್ಕಳ ತಲೆಗೂದಲು ಜಡೆಗಟ್ಟಿದರೆ ಅವರನ್ನು ದೇವರಿಗೆ ಬಿಡುವ ಪ್ರಮಾಣ ಹೆಚ್ಚಾಗಿದೆ. ಕೂದಲಿನಲ್ಲಿ ಜಡೆ ಮೂಡಿದರೆ ಸಾಕ್ಷಾತ್ ಎಲ್ಲಮ್ಮದೇವಿ ಕಾಣಿಸಿಕೊಂಡಿದ್ದಾಳೆ ಎಂದು ನಂಬಲಾಗುತ್ತದೆ. ಆ ಜಡೆಯ ಮೇಲೆ ಕುಂಕುಮ ಭಂಡರಾ ಹಚ್ಚಲಾಗುತ್ತದೆ, ಎಣ್ಣೆಯಿಂದ ಎರೆಯಲಾಗುತ್ತದೆ. ಎಲ್ಲಮ್ಮದೇವಿಗೆ ಒಬ್ಬ ಹುಡುಗಿ ತುಂಬ ಇಷ್ಟವಾದರೆ ಆ ಹುಡುಗಿಯ ತಲೆಯಲ್ಲಿ ಜಡೆ ಬೆಳೆಯುತ್ತದೆ ಎಂಬ ಮೂಢನಂಬಿಕೆಂಯು ಚಾಲ್ತಿಯಲ್ಲಿದೆ. ಇದರಿಂದಾಗಿ ಜಡೆ ಮೂಡಿದ ಹುಡುಗಿಯರನ್ನು ದೇವಿಗೆ ಮೀಸಲು ಬಿಡಲಾಗುತ್ತದೆ.

ದೇವದಾಸಿಯರ ಮುಖ್ಯ ಕೇಂದ್ರವಾಗಿರುವ ಕರ್ನಾಟಕದ ಕೊಪ್ಪಳ ಜಿಲ್ಲೆ ಹುಲಿಗಿ ಗ್ರಾಮದ ಅಮ್ಮ ಎಂದರೆ ಹುಲಿಗೆಮ್ಮ ಈ ದೇವಿ ಯಲ್ಲಮ್ಮ ದೇವಿಯ ಸಹೋದರಿ ಎಂದು ನಂಬಲಾಗುತ್ತದೆ. ಪ್ರತಿ ಹುಣಿಮ್ಮೆಯೆಂದು ನೂರರು ಸಂಖ್ಯೆಯಲ್ಲಿ ದೇವದಾಸಿಯರು ಇಲ್ಲಿ ಸೇರುತ್ತಾರೆ. ಮೈಯಲ್ಲಿ ದೇವಿ ಬಂದು ಮನೆಯಲ್ಲಿರುವ ಸ್ತ್ರೀಯರನ್ನೂ ಮುತ್ತು ಕಟ್ಟಿಸುವ ಹರಕೆಯನ್ನು ಭಕ್ತಾದಿಗಳಲ್ಲಿ ತುಂಬುತ್ತಾರೆ. ನಂತರ ಅದರ ಆಜ್ಞೆಯಂತೆ ತಮ್ಮ ಹೆಣ್ಣು ಮಕ್ಕಳನ್ನು ದೇವದಾಸಿಯಾಗಿ ಹುದೋ ಹುದೋ ಹುಲಿಗೆಮ್ಮ ನಿನ್ನಕ್ಕೂ ಹುದೋ............. ಈ ದೇವಿಯನ್ನು ಕಳಿಸುತ್ತಾರೆ. ಮತ್ತೆ ಅಲ್ಲಿ ಸೇರಿರುವ ಜನರು ತಮ್ಮ ತಮ್ಮಲ್ಲಿ ಹುಲಿಗೆಮ್ಮ ದೇವಿ ತುಂಬ ನಿಷ್ಠೂರವಾದ ದೇವರಾಗಿದ್ದೂ ಆಕೆ ಕೋಪಗೊಂಡರೆ ಅತಿವೃಷ್ಟಿಯಾಗುತ್ತದೆ, ಅನಾವೃಷ್ಟಿಯಾಗುತ್ತದೆ, ರೋಗಗಳು ಬಂದೆರಗುತ್ತವೆ ಎಂಬ ನಂಬಿಕೆ ಭಕ್ತರಲ್ಲಿ ಇದೆ. ಇದಕ್ಕಾಗಿ ದೇವಿಯನ್ನೂ ಸಂತೃಪ್ತಿಗೊಳಿಸಲು ಕಠಿಣವಾದ ವ್ರತಗಳನ್ನೂ ಕೈಗೊಳ್ಳುತ್ತಾರೆ. ಜಾತ್ರೆಯ ಸಂದರ್ಭದಲ್ಲಿ ಕುದಿಯುವ ಪಾತ್ರೆಯಲ್ಲಿ ಭಕ್ತರು ಕೈ ಹಾಕಿದರೂ ಸುಡುವುದಿಲ್ಲವಂತೆ ಇದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ. ತೀರ ಚಿಕ್ಕದಾಗಿರುವ ಈ ಗ್ರಾಮದ ದೇವಾಲಯಕ್ಕೆ ಲಕ್ಷಾಂತರ ಜನ ಭಕ್ತರು ಬಂದು ದೇವಿಯ ದರ್ಶನ ಪಡೆಯುತ್ತಾರೆ. ದೇವದಾಸಿಯರನ್ನಾಗಿ ಮಾಡಲು ಪ್ರಾರಂಭದಲ್ಲಿ ಅನುಸರಿಸುವ ವಿಧಾನಗಳು ಆ ದಿನ ಹುಡುಗಿಯ ತಾಯಿ ತಂದೆಯರು ಸಂಬಂಧಿಕರು ಹಿರಿಯ ದೇವದಾಸಿಯರು ಒಂದೆಡೆ ಸೇರುತ್ತಾರೆ. ತಮ್ಮ ಮಗಳನ್ನು ದೇವರಿಗೆ ಬಿಡಲು ಅಪೇಕ್ಷಿಸಿದವರು ಮದುವೆಗೆ ಸಿದ್ದತೆ ಮಾಡಿಕೊಳ್ಳುವಂತೆ ಸಿದ್ದತೆ ಮಾಡಿಕೊಳ್ಳುತ್ತಾರೆ. ಒಂಬತ್ತು ಬಗೆಯ ಬಣ್ಣದ ಗಂಧದ ಕಡ್ಡಿ, ಇಪ್ಪತ್ತೈದು ಅಡಿಕೆ, ವಿಭೂತಿ, ಶ್ರೀಗಂಧ, ನಾಣ್ಯಗಳು, ಕಳಸ, ನಾಲ್ಕು ಅಚ್ಚು ಬೆಲ್ಲ ಮತ್ತು ಮುತ್ತು ಕಟ್ಟಿದ ತಾಳಿ ಇವಿಷ್ಟು ವಸ್ತುಗಳನ್ನು

ಹೊಂದಿಸುತ್ತಾರೆ. ದೇವದಾಸಿ ಬಿಡುವ ಕನ್ಯೆಯನ್ನು ಹುಲಿಗಿ ಕ್ಷೇತ್ರಕ್ಕೆ ಕರೆತಂದು ಸ್ನಾನ ಮಾಡಿಸುತ್ತಾರೆ. ದೇವರ ಎದುರು ನಾಲ್ಕು ತಂಬಿಗೆಗಳಿಂದ ಕಳಸ ಮಾಡಿ ಕಲಾತ್ಮಕ ರಂಗೋಲಿ ಬಿಡಿಸಿ ಅಲಂಕರಿಸಿದ ಕಳಸಗಳ ಮಧ್ಯ ಇವಳನ್ನು ಕೂಡಿಸುತ್ತಾರೆ. ಪ್ರತಿಯೊಂದು ಕಳಸವನ್ನು ಎಲೆ ಅಡಿಕೆ ಬಾಳೆಹಣ್ಣು ಬೆಲ್ಲದ ಅಚ್ಚುಗಳಿಂದ ಅಲಂಕರಿಸಿರುತ್ತಾರೆ. ಸಂಕೇತಿಕವಾಗಿ ಐದನೆಯ ಕುಂಭವಾಗಿ ಇವಳನ್ನು ಪರಿಗಣಿಸುತ್ತಾರೆ. ನಂತರ ಹೊಸ ನೂಲನ್ನು ಒಂದು ಕುಂಭದಿಂದ ಪ್ರಾರಂಭಿಸಿ ಒಂದು ವಿಶಿಷ್ಟ ರೀತಿಯಲ್ಲಿ ಎಲ್ಲಾ ಕುಂಭಗಳಿಗೂ ಅವುಗಳ ಕಂಠಕ್ಕೆ, ಕೈಗೆ ನೀಡುತ್ತಾರೆ ಇದು ಸಾಂಕೇತಿಕವಾಗಿ ದೇವರು ತಮಗೆ ಹರಕೆಯಾಗಿ ನೀಡುವ ವ್ಯಕ್ತಿಯಲ್ಲಿಯ ಮಾನವತ್ವವನ್ನು ಹೀರಿ ದೈವತ್ವದ ವಸ್ತುವಾಗಿ ಪರಿವರ್ತಿಸುತ್ತಾನೆ. ಎಂಬ ನಂಬಿಕೆ ಅವರಲ್ಲಿದೆ. ಹೀಗೆ ಕ್ರಮವಾಗಿ ದೇವದಾಸಿಯಾಗುವವಳು ಸೇರಿದಂತೆ ಪ್ರತಿಯೊಂದು ಕಂಭವನ್ನು ಪೂಜಾರಿಯೊಂದಿಗೆ ಪೂಜೆ ಮಾಡಿ ನೈವೇದ್ಯ ಮಾಡಿ ನಂತರ ದೇವರ ಮುಂದೆ ಆರತಕ್ಷತೆ ಅರಿಶಿಣ ಕುಂಕುಮಗಳ ನಡುವೆ ತಾಳಿಯನ್ನೂ ತಟ್ಟೆಯಲ್ಲಿಟ್ಟು ಆಕೆ ದೇರೊಂದಿಗೆ ಮದುವೆಯಾದುದರ ಸಂಕೇತವಾಗಿ ಪೂಜಾರಿಯು ದೇವರ ಹೆಸರಿನಲ್ಲಿ ತಾಳಿಯನ್ನು ಆಕೆಯ ಕೊರಳಿಗೆ ಕಟ್ಟುವನು.

ಹಿರಿಯ ದೇವದಾಸಿಯರು ಚೌಡಿಕೆ ತಂಬೂರಿ ಜಾಗಟೆಗಳ ಹಿನ್ನೆಲೆಯ ಸಂಗೀತದೊಂದಿಗೆ ಎಲ್ಲಮ್ಮನನ್ನು ಪ್ರಷಂಶಿಸುವ ಹಾಡುಗಳನ್ನು ಹಾಡುತ್ತಾರೆ. ಸ್ತುತಿಗೀತೆಗಳನ್ನು ಹಾಡುತ್ತಾ ನಾಲ್ಕು ಕಳಸಗಳ ಮೂಲಕ ಹಾದು ಹೋಗಿರುವ ದಾರವನ್ನು ನಾಲ್ಕು ಜನ ದೇವದಾಸಿಯರು ಎತ್ತಿಕೊಂಡು ನಾಲ್ಕು ಬಾರಿ ಮಡಚಿ ನಂತರ ಅದಕ್ಕೆ ಅರಿಶಿಣ ಹಚ್ಚುವರು ನಂತರ ಉಳಿದ ದೇವದಾಸಿಯರು ತಾಯಿ ಎಲ್ಲಮ್ಮ ಉದೋ, ಉಧೋ ಎಂದು ಒಟ್ಟಾಗಿ ಹಾಡುತ್ತಿರುವಾಗಲೇ ಮತ್ತೆ ಹುಲುಗೆಮ್ಮ ನನ್ನಾಲ್ಕು ಉಧೋ ಉಧೋ... ಎಂದು ಆ ದಾರವನ್ನು ಹುಡುಗಿಯ ಕತ್ತಿಗೆ ಕಟ್ಟುತ್ತಾರೆ. ಸಾಂಪ್ರದಾಯಿಕ ಮದುವೆಯಲ್ಲಿ ಅಕ್ಷತೆ ಹಾಕುವಂತೆ ಹಿರಿಯ ಜೋಗತಿಯರು ವಿಧಿವತ್ತಾಗಿ ಮಂಗಳಾಕ್ಷತೆ ಹಾಕುತ್ತಾರೆ. ಅಲ್ಲಿ ನೆರೆದ ಹಿರಿಯರು ಸಂಬಂಧಿಕರು ಸ್ನೇಹಿತರು ಮಂಗಳಾಕ್ಷತೆ ಹಾಕಿ ಉಡುಗೊರೆ ನೀಡಿ ಮಂಗಳಾರತಿ ಮಾಡಿ ಎಲ್ಲರೂ ಊಟದಲ್ಲಿ ಭಾಗಿಯಾಗಿ ಹೊರಟು ಹೋಗುತ್ತಾರೆ. ನಂತರ ಐದು ಜನ ಜೋಗತಿಯರು ಕೂಡಿ ಕಣಕದ (ಗೋಧಿ ಹಿಟ್ಟಿನ) ದೀಪ ಮಾಡಿ ಎಣ್ಣೆಬತ್ತಿ ಹಾಕಿ ಹೊತ್ತಿಸುತ್ತಾರೆ ಆ ಮೇಲೆ ಕಣಕದಾರತಿ ಬತ್ತಿ ಎಲ್ಲವನ್ನು ಒತ್ತಾಯ ಪೂರ್ವಕವಾಗಿ ನುಂಗಿಸುತ್ತಾರೆ. ಇದು ಎಲ್ಲಕ್ಕಿಂತಲೂ ಹಿಂಸೆಯ ಕ್ರಮ ಎಂದು ದೇವದಾಸಿಯೊಬ್ಬಳು ತಿಳಿಸಿದಳು.

೩.೩. ಸಾಮಾಜಿಕ ಸಮಸ್ಯೆಗಳು

ಭಾರತದಲ್ಲಿ ಅನೇಕ ರೀತಿಯ ಧರ್ಮಗಳು ಇವೆ. ಆ ಧರ್ಮಗಳಿಗೆ ಅನುಗುಣವಾಗಿ ಜಾತಿಗಳು ಕಂಡು ಬರುತ್ತವೆ. ಈ ಜಾತಿಯಲ್ಲಿ ಅನೇಕ ಪದ್ದತಿ ಆಚರಣೆಗಳು ಸಂಪ್ರದಾಯಗಳು ಮೂಢ

ನಂಬಿಕೆಗಳು ನಮ್ಮ ಸಾಮಾಜದಲ್ಲಿ ನಮಗೆ ಅರಿವು ಇಲ್ಲದೆ ನಾವು ಆಚರಣೆಗಳನ್ನೂ ಮಾಡುತ್ತಾ ಬಂದಿದ್ದೇವೆ. ಈ ಆಚರಣೆಯಿಂದ ಸಮಾಜದಲ್ಲಿ ಕೆಳವರ್ಗ(ಕೆಳಜಾತಿ)ಯವರಿಗೆ ಅತ್ಯಂತ ಕೆಟ್ಟ ಪರಿಣಾಮ ಬೀರಿದವರು ಮೇಲ್ಜಾತಿಯವರು. ಆಧುನಿಕ ಸಮಾಜದ ದೇವದಾಸಿಯರ ಬದುಕಿನೂದಕ್ಕೂ ಸಮಸ್ಯೆಗಳನ್ನು ಎದುರಿಸಿಕೊಂಡು ಅನಿಷ್ಟ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ.

೩.೩.೧.ವಸತಿ ಸಮಸ್ಯೆ

ಭಾರತವು ಹಳ್ಳಿಗಳಿಂದ ಕೂಡಿದ ರಾಷ್ಟವಾಗಿದೆ. ಪ್ರತಿಯೊಂದು ಹಳ್ಳಿಗಳಲ್ಲಿ ಅವರದೇಯಾದ ಸಮಸ್ಯೆಗಳು ಕಂಡುಬರುತ್ತವೆ ಅದರಲ್ಲಿ ವಸತಿ ಸಮಸ್ಯೆ ಅತ್ಯಂತ ಕಠಿಣವಾದ ಸಮಸ್ಯೆಯಾಗಿ ಕಂಡು ಬರುತ್ತದೆ. ಅಧ್ಯಯನಕ್ಕೆ ಆಯ್ದುಕೊಂಡ ತಾಲ್ಲೂಕಿನಲ್ಲಿ ಪ್ರತಿಯೊಂದು ಹಳ್ಳಿಯಲ್ಲಿ ಕನಿಷ್ಟ ೧೦ ರಿಂದ ೨೦ ಜನ ದೇವದಾಸಿಯರು ಕಂಡುಬರುತ್ತಾರೆ. ಅವುಗಳಲ್ಲಿ ಕೆಳಜಾತಿಯವರು ಅತ್ಯಂತ ಹೆಚ್ಚು ಜನಸಂಖ್ಯೆಯವರು. ಇವರಿಗೆ ಯಾವುದೇ ರೀತಿಯ ಮೂಲಭೂತ ಸೌಲಭ್ಯಗಳು ದೊರೆಯದೆ. ಅದೇ ವಿಭಕ್ತಿ ಕುಟುಂಬದಲ್ಲಿ ಜೀವನ ನಡೆಸಿಕೊಂಡು ಹೋಗುವುದು ಕಂಡು ಬರುವುದು. ಪ್ರತಿ ದೇವದಾಸಿಯು ತಮ್ಮ ಅಂತರಂಗದ ಅಳಲನ್ನು ತೊಡಿಕೊಂಡಾಗ ಸಮಾಜದಲ್ಲಿ ಅವರಿಗೆ ಅವಚ್ಯ ಶಬ್ದಗಳಿಂದ ಮಾತನಾಡುವುದು, ಅಗೌರದಿಂದ ಕಾಣುವುದು, ಅವರ ಮಕ್ಕಳಿಗೆ ಕೆಟ್ಟ ಕೆಟ್ಟ ಪದಗಳಿಂದ ಭೈಯುವುದು ಕಾಣಬಹುದು. ಗ್ರಾಮ ಪಂಚಾಯಿತಿಯಲ್ಲಿ ಜಾಗ, ಮನೆ, ವಿದ್ಯುತ್, ನಲ್ಲಿ ಹೀಗೆ ಅನೇಕ ಸೌಲಭ್ಯವನ್ನು ಕಲ್ಪಿಸಿಕೊಡದೇ ಅವರಿಗೆ ಸಮಾಜಕ್ಕೆ ಮುಖಾ ಮುಖಿಯಾಗಿರದೆ ಒಬ್ಬಂಟಿಯಾಗಿ ಬದುಕುವ ಇವರನ್ನು ಸಮಾಜದಲ್ಲಿ(ಲೇಸಿ) ಎಂಬ ಅಣೆ ಪಟ್ಟಿಯನ್ನು ಹೊತ್ತುಕೊಂಡು ಬದುಕುವುದನ್ನು ಕಾಣುತ್ತೇವೆ.

ಕೊಷ್ಟಕ–೩.೧ ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲೆ ಹೆಚ್ ಬಿ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ದೇವದಾಸಿಯರ ಕುಟುಂಬವಾರು ಮನೆಗಳ ಮಾದರಿ

ಕ್ರಸಂ.	ನೆಲೆಗಳು	ಪಂಚಾಯತ್	ಕುಟುಂಬಗಳು	ಮನೆಗಳ ಮಾದರಿ						
				ಗುಡಿಸಲು	ಟಿನ್	ಮಾಳಿಗೆ	ಆರ್‌ಸಿಸಿ	ಹೆಂಚಿನ	ಜನತಾ	ಬಾಡಿಗೆ
೧	ಮರಿಯಮ್ಮನಹಳ್ಳಿ	ಮರಿಯಮ್ಮನಹಳ್ಳಿ	೧೦	೨	೬	–	೧	–	೧	–
೨	ರಾಮನಗರ	ಕಡ್ಲಬಾಳು	೧೦	೪	೨	–	೧	–	೩	–
೩	ಚಿಲುಗೊಡು	ಬಾಚಿಗೊಂಡನಹಳ್ಳಿ	೧೦	೧	೫	–	೨	–	೨	–
೪	ಬನ್ನಿಗೋಳ್	ಬನ್ನಿಗೋಳ್	೧೦	೨	೩	–	೪	–	೧	–
೫	ಹಂಪಾಪಟ್ಟಣ	ಹಂಪಾಪಟ್ಟಣ	೧೦	೨	೬	–		–	೨	–
	ಒಟ್ಟು		೫೦	೧೧	೨೨	–	೮	–	೯	–

ಕೊಷ್ಟಕ-೩.೧ ರಲ್ಲಿ ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲೆಯ ಹೆಚ್ ಬಿ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವು ದೇವದಾಸಿ ಕುಟುಂಬದವರ ಮನೆಗಳ ವಿವರವನ್ನು ತಿಳಿಸಲಾಗಿದೆ. ಐದು ಗ್ರಾಮಗಳಲ್ಲಿ ಸಮೀಕ್ಷೆ ನಡೆಸಿ ಪ್ರತಿ ಗ್ರಾಮದಲ್ಲಿ ೧೦ ದೇವದಾಸಿ ಕುಟುಂಬಗಳನ್ನು ಆಯ್ಕೆಮಾಡಿಕೊಂಡು ಅವರ ಮನೆಗಳ ಮಾದರಿಗಳನ್ನು ಈ ರೀತಿಯಾಗಿ ತಿಳಿಯಲಾಗಿದೆ. ಮರಿಯಮ್ಮನಹಳ್ಳಿಯಲ್ಲಿ ಆಯ್ಕೆಮಾಡಿಕೊಂಡ ೧೦ ಕುಟುಂಬಗಳಲ್ಲಿ ೨ ಕುಟುಂಬಗಳು ಗುಡಿಸಲು ಮನೆ, ೬ ಟಿನ್ ಮನೆ, ೧ ಮಾಳಿಗೆ ಮನೆ, ೧ ಜನತಾ ಮನೆ ಹೊಂದಿದ್ದಾರೆ. ರಾಮನಗರ ಗ್ರಾಮದಲ್ಲಿ ೧೦ ದೇವದಾಸಿಯರ ಮನೆಗಳಲ್ಲಿ ೪ ಗುಡಿಸಿಲು ಮನೆಗಳು, ೨ ಟಿನ್ ಮನೆಗಳು, ೧ ಆರ್ ಸಿ ಸಿ ಮನೆ, ೩ ಜನತಾಮನೆಗಳಿವೆ. ಚಿಲುಗೊಡು ಗ್ರಾಮದಲ್ಲಿ ೧ ಗುಡಿಸಿಲು ಮನೆ, ೫ ಟಿನ್ ಮನೆ, ೨ ಆರ್ ಸಿ ಸಿ ಮನೆ, ೨ ಜನತಾ ಮನೆಗಳಿವೆ. ಬನ್ನಿಗೋಳ್ ಗ್ರಾಮದಲ್ಲಿ ೨ ಗುಡಿಸಿಲಿ ಮನೆ, ೩ ಟಿನ್ ಮನೆ, ೪ ಆರ್ ಸಿ ಸಿ ಮನೆ, ೧ ಜನತಾ ಮನೆಗಳಿವೆ. ಅದರಂತೆಯೇ ಹಂಪಾ ಪಟ್ಟಣ ಗ್ರಾಮದಲ್ಲಿ ೨ ಗುಡಿಸಿಲು ಮನೆ, ೬ ಟಿನ್ ಮನೆ, ೨ ಜನತಾ ಮನೆಗಳಿವೆ. ಒಟ್ಟಾರೆ ಸಮೀಕ್ಷೆಗೊಳಪಡಿಸಿದ ೫ ಗ್ರಾಮಗಳಲ್ಲಿ ಪ್ರತಿ ಗ್ರಾಮದಲ್ಲಿನ ೧೦ ದೇವದಾಸಿಯರ ಕುಟುಂಬಗಳ ಇಟ್ಟು ೫೦ ಮನೆಗಳಲ್ಲಿ ೧೧ ಗುಡಿಸಿಲು ಮನೆಗಳು, ೨೨ ಟಿನ್ ಮನೆಗಳು, ೮ ಆರ್ ಸಿ ಸಿ ಮನೆಗಳು, ೯ ಜನತಾ ಮನೆಗಳಿವೆ. ಬುಹುತೇಕ ದೇವದಾಸಿಯರ ಕುಟುಂಬಗಳು ಟಿನ್ ಮನೆಗಳಲ್ಲಿ ವಾಸಿಸುತ್ತಿರುವುದು ಅಧ್ಯಯನದಿಂದ ಕಂಡುಬರುತ್ತದೆ.

ಕೃಷಿ ಕೂಲಿ

ಪ್ರತಿಯೊಂದು ಹಳ್ಳಿಯಲ್ಲಿರುವ ಜನರು ಕೃಷಿಯನ್ನ ಅವಲಂಬಿತವಾಗಿರುತ್ತಾರೆ. ಆಗಿನ ವ್ಯವಸ್ಥೆಯಲ್ಲಿ ಸಾಟಿ ಪದ್ಧತಿ ಇತ್ತು ಕಾಲ ಕಳೆದಂತೆ ಇದು ಬದಲಾವಣೆಯಾಗಿ ಕಂಡುಬರುತ್ತದೆ. ಆ ದೃಷ್ಟಿಯಿಂದ ಅನೇಕ ಜನ ಸಮುದಾಯಗಳಿಗೆ ಅವರಿಗೆ ನಿರ್ದಿಷ್ಟ ಭೂಮಿ ಇಲ್ಲದೆ ಬೇರೆಯವರ ಕೃಷಿ ಭೂಮಿಯಲ್ಲಿ ಕೆಲಸಕ್ಕೆ ಹೋಗುವ ಪದ್ದತಿ ಜಾರಿಗೆ ಬಂದಿತು. ನಂತರದ ದಿನಮಾನದಲ್ಲಿ ತಮ್ಮ ಕೃಷಿ ಕೆಲಸಕ್ಕೆ ಬರುವ ಕೆಳ ಜಾತಿಯ ಸ್ತ್ರೀಯರನ್ನು ಕಂಡು ಯಾವುದೋ ದೇವರ ಹೆಸರಿನಲ್ಲಿ ಮನೆಯಲ್ಲಿ ದೇವದಾಸಿಯಾಗಿ ಅಥವಾ ವಂಶ ಉದ್ದಾರಕ್ಕಾಗಿ ಈ ಪದ್ದತಿಯನ್ನು ಬಿಡುವ ಮತ್ತು ಆಚರಣೆ ಮಾಡುವ ಪದ್ದತಿಯನ್ನು ಬೆಳಸಿದರು. ಆದ್ದರಿಂದ ತಮ್ಮ ಕೃಷಿ ಕೆಲಸ ಮತ್ತು ನಮ್ಮನ್ನು ದೇಹ ಸುಖವನ್ನು ಅನುಭವಿಸುವುದಕ್ಕಾಗಿ ಈ ಪದ್ದತಿಯನ್ನು ಜಾರಿಗೆ ತಂದಿದ್ದಾರೆ. ಎಂದು ತಿಳಿಸಿದ್ದಾರೆ.(ಮಾಹಿತಿ: ಬನ್ನಿಗೊಳದ ಗೀತಾ, ಅಂಬಿಕ) ಮತ್ತೆ ಅವರ ಕೃಷಿ ಕೆಲಸ ಮುಗಿದ ಮೇಲೆ ಅವರನ್ನು ಸಂತೃಪ್ತಿಗೊಳಿಸುವುದು ಇಲ್ಲದಿದ್ದರೆ ಕೂಲಿ ಕೆಲಸಕ್ಕೆ ಕರೆದುಕೊಂಡು ಹೋಗುವುದಿಲ್ಲ ಎಂದು ತಿಳಿಸುವುದು ಇದರಿಂದ ನಮಗೆ ದೈನಂದಿನ ಆಹಾರದ, ಇತರೆ ಖರ್ಚು ವೆಚ್ಚಗಳಿಗೆ ಹಣ ಇಲ್ಲವಾಗುತ್ತದೆ ಎನ್ನುವ ಭಯದಿಂದ ದೇವದಾಸಿಯರು ನೋವುಗಳನ್ನು ಅನುಭವಿಸಿಕೊಂಡು ಬರುತ್ತಿದ್ದಾರೆ.

ಸಾಮಾಜದಲ್ಲಿ ಪ್ರತಿಯೊಂದು ಪದ್ಧತಿ ಆಚರಣೆಗಳಿಗೆ ತನ್ನದೇಯಾದ ವೈಶಿಷ್ಯತೆಯಿದೆ. ಕೆಲವು ಕಾರ್ಯಗಳಿಗೆ ದೇವದಾಸಿಯನ್ನು ಕರೆದುಕೊಂಡು ಹೋಗಬೇಕು ಮದುವೆ ಸಮಾರಂಭದಲ್ಲಿ ತಾಳಿಯನ್ನು ದೇವದಾಸಿಯಿಂದಲೇ ಪೋಣಿಸಿಕೊಂಡು ಬರಬೇಕು ಎಂದು ಹೇಳುತ್ತಾರೆ.

ರಾಜಕೀಯ ಸಮಸ್ಯೆ

ರಾಜಕೀಯ ವಿಷಯವನ್ನು ವಿಶ್ಲೇಷಣೆಯಲ್ಲಿ ತೊಡಗಿಸಿದಾಗ ಮೀಸಲಾತಿ ಅತಿಮುಖ್ಯವಾಗಿದ್ದು. ಈ ಮೀಸಲಾತಿ ಪ್ರತಿ ಹಳ್ಳಿಯಲ್ಲಿ ತನ್ನ ಕಾರ್ಯವೃತ್ತಿಯನ್ನು ನಿರ್ವಹಿಸುತ್ತಾ ಬಂದಿದೆ. ದೇವದಾಸಿಯರ ಜೀವನದಲ್ಲಿ ಅತ್ಯಂತ ಮಹತ್ವ ಪಡೆದುಕೊಡಿದೆ. ಒಬ್ಬ ದೇವದಾಸಿ ಊರಿನ ಪ್ರಮುಖವಾದ ಮಹಿಳೆ ಎಸ್‌ಸಿ, ಎಸ್‌ಟಿ ಮಹಿಳೆಯರು ಅತಿ ಹೆಚ್ಚು ಕಂಡು ಬರುತ್ತಾರೆ. ಮೀಸಲಾತಿ ಈ ವರ್ಗಕ್ಕೆ ಸಿಮೀತವಾಗಿದೆ. ಆದ್ದರಿಂದ ಮೇಲ್ಜಾತಿಯವರು ತಮ್ಮ ಮೂಲಕ ಅಡಳಿತವನ್ನು ಪ್ರಾರಂಭಿಸುತ್ತಾರೆ. ದೇವದಾಸಿ ಊರಿನ ದನಿಕನೊಂದಿಗೆ ಸಂಬಂಧವನ್ನಿಟ್ಟುಕೊಂಡರೆ ಮಾತ್ರ ಸಮಾಜದಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕವಾಗಿ ಹೆಚ್ಚಿನ ಗೌರವ ಇರುತ್ತದೆ. ಇಲ್ಲದಿದ್ದರೆ ಈ ಕ್ಷೇತ್ರಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳು ಕಂಡುಕೊಳ್ಳಲಿಕ್ಕೆ ಆಗುವುದಿಲ್ಲ. ಸರ್ಕಾರ ನೀಡಿದ ಮೀಸಲಾತಿಯಿಂದಾಗಿ ಕೆಲವೊಂದು ಗ್ರಾಮಗಳಲ್ಲಿನ ಕೆಲವು ದೇವದಾಸಿಯರು ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆದ್ದಿದ್ದಾರೆ ಆದರೆ ಆಡಳಿತ ಮಾತ್ರ ಅವಳನ್ನು ಆಳುವ ಮೇಲ್ಜಾತಿಯ ಪುರಷನದ್ದೇ ಆಗಿರುತ್ತದೆ ಇದು ಕ್ಷೇತ್ರಕಾರ್ಯದಲ್ಲಿ ಕಂಡುಕೊಂಡ ಸತ್ಯವಾಗಿದೆ.

ಅಡಿಟಿಪ್ಪಣಿ

೧. ಕೊಟ್ಲಮ್ಮ, ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ(ಕೂಡ್ಲಿಗಿ ಪಟ್ಟಣದ ಬೇಡಬುಡಕಟ್ಟು ದೆವದಾಸಿ ಸಮುದಾಯವನ್ನು ಅನುಲಕ್ಷಿಸಿ) ಪಿಎಚ್ ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೮, ಪುಟ-೧೩.

೨. ಜೋಗನ್ ಶಂಕರ, ದೇವದಾಸಿ ಸಂಪ್ರದಾಯ, ವಿಮೋಚನ ಪ್ರಕಾಶನ, ಅಥಣಿ, ೧೯೯೩, ಪು-೮೨.

೩. ಸಿದ್ರಾಮ ಕಾರಣಿಕ, ದೇವದಾಸಿ ಮತ್ತು ಬೆತ್ತಲೆ ಸೇವೆ, ಲಡಾಯಿ ಪ್ರಕಾಶನ, ಗದಗ, ೨೦೧೩, ಪುಟ-೪೦.

೪. ಅದೇ ಪುಟ-೪೨-೪೩

೫. ಶೈಲಜಾ ಹಿರೇಮಠ, ಮಹಿಳಾ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦, ಪುಟ-೧೨೬-೧೨೭.

ಅಧ್ಯಾಯ: ನಾಲ್ಕು
ದೇವದಾಸಿ ಆರ್ಥಿಕ ಜೀವನ

ಅಧ್ಯಾಯ: ನಾಲ್ಕು
ದೇವದಾಸಿಯರ ಆರ್ಥಿಕ ಜೀವನ

೪.೧. ಪ್ರಸ್ತಾವನೆ

ಮಾನವನು ಶಿಲಾಯುಗದಿಂದ ಇಂದಿನ ಆಧುನಿಕ ಬದುಕಿನವರೆಗೂ ನಡೆದು ಬಂದ ದಾರಿಯನ್ನ ಅವಲೋಕಿಸಿದಾಗ ಕಾಲ ಕಾಲಕ್ಕೆ ಈತನಲ್ಲಾಗುವ ಬದಲಾವಣೆ, ವೈಜ್ಞಾನಿಕ, ಅನ್ವೇಷಣೆಗಳು. ಇವುಗಳೊಂದಿಗೆ ಸಾಮಾಜಿಕ, ಸಾಂಸ್ಕೃತಿಕ, ಮತ್ತು ಆರ್ಥಿಕವಾಗಿ ಮಾನವ ಮುಂದುವರೆದ ಹಿಂದುಳಿದ ಹತ್ತು ಹಲವು ಮುಖಗಳು ಗೋಚರಿಸುತ್ತದೆ. ಸಮುದಾಯದ ಜೀವನ ಮೌಲ್ಯವನ್ನ ನಿರ್ಧರಿಸುವಲ್ಲಿ ಆರ್ಥಿಕ ಸ್ಥಿತಿಗತಿಗಳನ್ನ ಅವಲಂಬಿಸಿರುತ್ತದೆ. ಮಾನವ ಈ ಮೌಲ್ಯಗಳನ್ನ ಕಾಪಾಡಿಕೋಳ್ಳುವುದಕ್ಕಾಗಿ ಅನೇಕ ರೀತಿಯ ಉತ್ಪಾದನೆ, ವೆಚ್ಚ ಮತ್ತು ಉಳಿತಾಯಗಳನ್ನ ಗಮನದಲ್ಲಿಟ್ಟುಕೊಂಡು. ತನಗೆ ದೋರೆಯುವಂತಹ ಅವಶ್ಯಕತೆಯನ್ನು ಈಡೇರಿಸುಕೋಳ್ಳುವುದಕ್ಕಾಗಿ ಒಂದು ನಿಶ್ಚಲವಾದ ಸ್ಥಳದಲ್ಲಿ ನೆಲೆ ನಿಲ್ಲಲು ಕಾರಣೀಕೃತನಾದನು.

ದೇವದಾಸಿಯರ ಆರ್ಥಿಕ ಜೀವನವನ್ನು ಗಮನಿಸಿದರೆ ಹಿಂದಿನ ಕಾಲದಲ್ಲಿ ದೇವಾಲಯದಲ್ಲಿ ದೇವರಿಗೆ ಪೂಜೆಗೆ ಬೇಕಾದ ವಸ್ತುಗಳನ್ನು ಕೋಡುವ, ಪ್ರಸಾದವನ್ನು ಸ್ವೀಕರಿಸುವ, ದೇವಾಲಯವನ್ನು ಸ್ವಚ್ಚಗೊಳಿಸುವ ಸಲುವಾಗಿ ದೇವದಾಸಿಯರನ್ನು ನೇಮಕಮಾಡಲಾಗುತ್ತಿತ್ತು. ದೇವಾಲಯಕ್ಕೆ ಬರುತ್ತಿದ್ದ ದವಸ ದಾನ್ಯಗಳನ್ನ ಪಡೆಯುತ್ತಿದ್ದರು. ಇದನ್ನೆ ನಂಬಿ ತಮ್ಮ ಜೀವನ ನಡೆಸಿಕೊಂಡು ಬರುತ್ತಿದ್ದರು. ಕಾಲ ಕಳೆದಂತೆ ದೇವದಾಸಿಯರು ಆರ್ಥಿಕ ಸ್ವಾವಲಂಬಿಗಳಾದರು ಕಾರಣ ದೇವಾಲಯಕ್ಕೆ ಬರುತ್ತಿದ್ದ ಆದಾಯದಲ್ಲಿ ೪/೧ ಭಾಗವನ್ನಾಗಿ ದೇವದಾಸಿಯರಿಗೆ ನೀಡುತ್ತಿದ್ದರು. ತದನಂತರ ದೇವಾಲಯದ ಪೂಜಾರಿಯೊಂದಿಗೆ ದೇಹ ಸಂಬಂಧ ಹೋಂದಿ ಇದರಿಂದ ಹುಟ್ಟಿದ ಮಕ್ಕಳ ಸಂಖ್ಯೆ ಬೆಳೆಯುತ್ತಾ ಹೋಯಿತು. ಮಕ್ಕಳನ್ನೊಳಗೊಂಡ ದೇವದಾಸಿಯರ ಕುಟುಂಬ ಜೀವನ ನಿರ್ವಾಹಣೆ ಅನಿವಾರ್ಯವಾಯಿತು. ಇದು ಆರ್ಥಿಕ ಜೀವನದಲ್ಲಿ ಉತ್ಪಾದನೆ, ವೆಚ್ಚ, ಮತ್ತು ಉಳಿತಾಯಕ್ಕೆ

ಕಾರಣವಾಯಿತು. ಇದು ದೇವದಾಸಿಯರಿಗೆ ಶಾಶ್ವತವಾಗಿ ಉಳಿಯಲಿಲ್ಲ. ದೇಹ ಸುಖವನ್ನ ಪಡೆದುಕೊಂಡು ಅವರನ್ನ ಕೈ ಬಿಟ್ಟಿರುವುದು ದುರ್ದೈವವೆ ಸರಿ. ಪ್ರಸ್ತುತ ದಿನಮಾನಗಳಲ್ಲಿ ದೇವದಾಸಿಯರು ಅನೇಕ ರೀತಿಯ ಸಣ್ಣ ಪುಟ್ಟ ಆರ್ಥಿಕ ಚಟುವಟಿಕೆಯಲ್ಲಿ ತಮ್ಮನ್ನು ತಾವು ತೋಡಗಿಸಿಕೋಂಡಿದ್ದಾರೆ. ಬಳ್ಳಾರಿ ಜಿಲ್ಲೆಯ ಹಗರಿಬೋಮ್ಮನಹಳ್ಳಿ ತಾಲೂಕಿನ ದೇವದಾಸಿಯರು ಕೃಷಿ ಕೂಲಿ, ಸಣ್ಣ ವ್ಯಾಪಾರ, ಹೈನುಗಾರಿಕೆ ಮತ್ತು ಪಶುಪಾಲನೆ ಮಾಡುತ್ತ ಜೀವನ ನಡೆಸುತ್ತಿದ್ದಾರೆ. ಸರ್ಕಾರದಿಂದ ದೇವದಾಸಿಯರಿಗೆ ಅನೇಕ ಯೋಜನೆಗಳನ್ನ ಹಾಕಿಕೊಂಡಿದ್ದು ಅವುಗಳನ್ನು ಪಡೆದುಕೋಳ್ಳುವಲ್ಲಿ ವಿಫಲರಾಗಿದ್ದಾರೆ. ಊರಿನ ಶ್ರಿಮಂತರ ಮನೆಯಲ್ಲಿ ಕೂಲಿಂಕಾರರಾಗಿ ಜೀವನ ನಡೆಸಿಕೊಂಡು ಬಂದಿದ್ದಾರೆ.

ಈಗ ಪರಿಸ್ಥಿತಿ ಬದಲಾಗಿದ್ದು, ವಿದ್ಯಾವಂತರಾದ ವಿವಿಧ ಸಮುದಾಯದವರು ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇದರಿಂದ ಅವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿ ಬದಲಾಗಿದೆ. ಇತರರಂತೆ ಉತ್ತಮ ಜೀವನ ನಡೆಸುವುದನ್ನು ನಾವು ಕಾಣಬಹುದು. ಆದರೂ ಸಹ ಇನ್ನೂ ಕೆಲವು ಕೆಳಜಾತಿಯವರು ಅನಕ್ಷರತೆಯಿಂದ ಈ ಅನಿಷ್ಟ ಪದ್ದತಿಯಲ್ಲಿ ಸಿಲುಕಿ ಜೀವನ ಪೂರ್ತಿ ನರಳುತ್ತಿದ್ದಾರೆ. ಕೆಲವೂಬ್ಬರು ರಾಜಕೀಯ ಕ್ಷೇತ್ರದಲ್ಲಿ ಅವಕಾಶಗಳನ್ನು ಪಡೆದಿರುವುದು ಕಂಡುಬರುತ್ತದೆ. ಸಮುದಾಯದ ಉತ್ತಮ ಬೆಳವಣಿಗೆಗೆ ಕಾರಣ ಆದಾಗ್ಯೂ ಇವೆಲ್ಲ ಕೇವಲ ಬೆಳವಣಿಗೆಯನ್ನು ಜನರಿಗೆ ದಕ್ಕುವಂತಹ ಅವಕಾಶವಾಗಿದೆ. ಈ ಪದ್ದತಿಯಲ್ಲಿ ಮನೆತನಗಳಿಗೆ ಆಧುನಿಕ ಜೀವನ ಶೈಲಿ ಅಳವಡಿಸಿಕೊಂಡಿದ್ದರು ಸಮಾಜದಲ್ಲಿ ಅಸ್ಪೃಶ್ಯರಂತೆ ಜೀವನವು ಸಾಗಿಸುತ್ತಿರುವುದು ನಾವು ಕಾಣಬಹುದಾಗಿದೆ. ಪ್ರಸ್ತುತ ದಿನಗಳಲ್ಲಿ ಕೆಲ ದೇವದಾಸಿಯರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವುದರ ಮೂಲಕ ಸಾಧಾರಣ(ಶೇ ೨ರಷ್ಟು) ರೀತಿಯಲ್ಲಿ ಬದಲಾವಣೆ ಹೊಂದಿರುವುದು ಕ್ಷೇತ್ರ ಕಾರ್ಯದಿಂದ ಕಂಡು ಬರುತ್ತದೆ. ಬಹುತೇಕ ದೇವದಾಸಿಯರು ಇಂದು ತಮ್ಮ ಜೀವನಕ್ಕೆ ಅನುಸರಿಸುತ್ತಿರುವ ವೃತ್ತಿಗಳನ್ನು ಈ ಕೆಳಗಿನಂತೆ ಒಂದೊಂದಾಗಿ ನೋಡಬಹುದು.

೪.೧. ಪಶುಪಾಲನೆ

ದೇವದಾದಸಿಯರು ಹಿಂದೆ ದೇವಾಲಯಕ್ಕೆ ಸೀಮಿತವಾಗಿದ್ದರು ನಂತರದ ದಿನಮಾನಗಳಲ್ಲಿ ಕೃಷಿಯಲ್ಲಿ ತೊಡಗಿಸಿಕೊಂಡರು. ಆರ್ಥಿಕವಾಗಿ ಸಲ್ಪಮಟ್ಟಿಗೆ ಬದಲಾವಣೆ ಕಾಣುವ ದೃಷ್ಟಿಯಿಂದ ಪಶುಪಾಲನೆಯಲ್ಲೂ ತಮ್ಮನ್ನು ತಾವು ತೊಡಗಿಸಿಕೊಳ್ಳವುದರಲ್ಲಿ ಪ್ರಯತ್ನಿಸುತ್ತಾ ಬಂದಿದ್ದಾರೆ. ಇಂದಿನ ದಿನಮಾನಗಳಲ್ಲಿ ಬಹುಸಂಖ್ಯೆ ದೇವದಾಸಿ ಕುಟುಂಬಗಳು ಹೈನುಗಾರಿಕೆಯಿಂದ ಜೀವನ ಸಾಗಿಸುತ್ತಿದ್ದಾರೆ. ಆದರೆ ದೇವದಾಸಿಯರು ೧೫ರಿಂದ೩೫ ವರ್ಷದವರೆಗೆ ಯಾವುದೇ ರೀತಿಯ ಕೃಷಿ ಚಟುವಟಿಕೆಯಲ್ಲಿ ತೊಡಗದೇ ಆಚರಣೆ ಪದ್ದತಿ ಸಂಪ್ರದಾಯಗಳು ಪಾಲಿಸುತ್ತಾಬರುತ್ತಾರೆ. ನಂತರ ತಮ್ಮ ಕುಟುಂಬಕ್ಕೆ ಯಾವುದೇ ಒಬ್ಬ ವ್ಯಕ್ತಿಯ ಆಧಾರವಿಲ್ಲದಿದ್ದಾಗ ಇಂತಹ ಪಶುಪಾಲನೆಯಲ್ಲಿ ತೊಡಗಿಸಿಕೊಂಡು

ತಮ್ಮ ಕುಟುಂಬಗಳನ್ನು ನಿರ್ವಹಿಸಿಕೊಂಡು ಹೋಗುತ್ತಾರೆ. ಹಾಲು, ಮೊಸರು, ಮಜ್ಜಿಗೆ, ಬೆಣ್ಣೆಯಂತಹ ಉತ್ಪನ್ನಗಳನ್ನು ಮಾರುವುದರ ಜೊತೆಗೆ ಆರ್ಥಿಕ ಸ್ವಾವಲಂಬನೆಯ ಕಡೆಗೆ ಸಾಗುತ್ತಿದ್ದಾರೆ. ಕೆಲವರು ಕುರಿ ಸಾಗಾಣಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇನ್ನು ಕೆಲವರು ಕೋಳಿ, ಹಸುಗಳನ್ನು ಸಾಕಿ ಅವುಗಳನ್ನು ಮಾರಾಟ ಮಾಡುವುದರಿಂದ ಸ್ವಲ್ಪ ಮಟ್ಟಿನ ಆದಾಯಗಳಿಸುವುದು ಕಂಡು ಬರುತ್ತಿದೆ.

ಕೋಷ್ಟಕ–೪.೧ ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲಾ ಹೆಚ್‌ಬಿ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಕುಟುಂಬವಾರು ಪಶುಸಂಪತ್ತು

ಕ್ರಸಂ.	ನೆಲೆಗಳು	ಪಂಚಾಯತ್	ಕುಟುಂಬಗಳು	ಪಶುಸಂಪತ್ತು					
				ಎತ್ತು	ಆಕಳು	ಎಮ್ಮೆ	ಕುರಿ	ಮೇಕೆ	ಕೋಳಿ
೧	ಮರಿಯಮ್ಮನಹಳ್ಳಿ	ಮರಿಯಮ್ಮನಹಳ್ಳಿ	೧೦	೨	–	–	೫೯	–	೫೩
೨	ರಾಮನಗರ	ಕಡ್ಲಬಾಳು	೧೦	–	–	–	೬	–	೨೩
೩	ಚಿಲುಗೊಡು	ಬಾಚಿಗೊಂಡನಹಳ್ಳಿ	೧೦	೨	–	–	೨೩	–	೪೨
೪	ಬನ್ನಿಗೋಳ್	ಬನ್ನಿಗೋಳ್	೧೦	೨	೨	–	೪೫	–	೧೫
೫	ಹಂಪಾಪಟ್ಟಣ	ಹಂಪಾಪಟ್ಟಣ	೧೦	೨	–	–	೧೯	–	೭೪
	ಒಟ್ಟು		೫೦	೮	೨	–	೧೫೨	–	೨೦೭

ಕೋಷ್ಟಕ–೪.೧ ರಲ್ಲಿ ದೇವದಾಸಿಯರ ಕುಟುಂಬಗಳಲ್ಲಿ ಕಂಡುಬರುವ ಕೃಷಿಯೇತರ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ತಮ್ಮ ಆದಾಯ ವೆಚ್ಚ, ಉಳಿತಾಯಕ್ಕೆ ಬುನಾದಿ ಹಾಕುತ್ತಿದ್ದಾರೆ. ಶೇಕಡವಾರು ನೋಡಿದಾಗ ೨% ರಷ್ಟು ಎತ್ತುಗಳನ್ನು ೧% ರಷ್ಟು ಆಕಳುಗಳನ್ನು ೪೧% ರಷ್ಟು ಕುರಿಗಳನ್ನು ೫೭% ಕೋಳಿಗಳನ್ನು ಸಾಕಿ ತಮ್ಮ ಆದಾಯವನ್ನು ಇತ್ತೀಚಿನ ದಿನಮಾನಗಳಲ್ಲಿ ತೊಡಗಿಸಿಕೊಂಡಿದ್ದಾರೆ.

೪.೨. ಕೃಷಿ

ದೇವದಾಸಿಯರು ಪಶುಪಾಲನೆ ಮತ್ತು ಕೃಷಿ ಕೂಲಿಯನ್ನು ಪ್ರಮುಖ ಜೀವನಾಧಾರ ವೃತ್ತಿಯನ್ನಾಗಿ ಹೊಂದಿದ್ದಾರೆ. ಪ್ರಸ್ತುತ ದಿನಗಳಲ್ಲಿ ಕೃಷಿಗೆ ಹೆಚ್ಚು ಮಹತ್ವವನ್ನು ನೀಡಿದ್ದಾರೆ. ಸ್ವಲ್ಪ ಭೂಮಿ ಹೊಂದಿರುವ ಕೆಲವರು ಈಗಿನ ಸರ್ಕಾರ ಸೌಲಭ್ಯದಿಂದ ಗಂಗಾ ಕಲ್ಯಾಣ ಯೋಜನೆಯಂತೆ ನೀರಾವರಿ ಸೌಕರ್ಯ ಪಡೆದು ಕೃಷಿಯಲ್ಲಿ ಸುಧಾರಿತ ಕ್ರಮಗಳನ್ನು ಅನುಸರಿಸಿ. ಬೆಳೆದ ದವಸ ಧಾನ್ಯಗಳಲ್ಲಿ ತಮಗೆ ಬೇಕಾದಷ್ಟು ಉಳಿಸಿ, ಮಿಕ್ಕಿದನ್ನು ಮಾರಾಟ ಮಾಡಿ ಬಂದ ಹಣದಿಂದ ಜೀವನ ನಡೆಸುತ್ತಿದ್ದಾರೆ. ಇವರು ಬೇರೆಯವರ ಭೂಮಿಯಲ್ಲಿ ದಿನನಿತ್ಯದ ಕೂಲಿಗೆ ದುಡಿಯುವುದು ಕಂಡು ಬರುತ್ತದೆ. ಇವರಿಗೆ ಸರ್ಕಾರದಿಂದ ೨% ರಷ್ಟು ಮಾತ್ರ ಭೂಮಿ ಸಿಕ್ಕಿದೆ.

ಕೋಷ್ಟಕ-೪.೨ ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲಾ ಹೆಚ್‌ಬಿ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಭೂಹಿಡುವಳಿ ಹಾಗೂ ಭೂಶ್ರೇಣಿ									
ಕ್ರಸಂ.	ನೆಲೆಗಳು	ಪಂಚಾಯತ್	ಕುಟುಂಬಗಳು	ಭೂ ಹಿಡುವಳಿ (ಎಕರೆಗಳಲ್ಲಿ)			ಭೂ ಹಿಡುವಳಿ ಶ್ರೇಣಿಗಳು (ಎಕರೆಗಳಲ್ಲಿ)		
				ಒಣಭೂಮಿ	ನೀರಾವರಿ	ಒಟ್ಟು	೨.೫೧–೫ ಖ	೦.೫–೨.೫೦ ಇ	ಭೂರಹಿತ ಎಫ್
೧	ಮರಿಯಮ್ಮನಹಳ್ಳಿ	ಮರಿಯಮ್ಮನಹಳ್ಳಿ	೧೦	೨	–	೨	–	೧	೯
೨	ರಾಮನಗರ	ಕಡ್ಲಬಾಳು	೧೦	–	–	–	–	–	೧೦
೩	ಚಿಲುಗೊಡು	ಬಾಚಿಗೊಂಡನಹಳ್ಳಿ	೧೦	೮	–	೮	೨	೧	೭
೪	ಬನ್ನಿಗೋಳ್	ಬನ್ನಿಗೋಳ್	೧೦	೭	೫	೧೨	೩	೧	೬
೫	ಹಂಪಾಪಟ್ಟಣ	ಹಂಪಾಪಟ್ಟಣ	೧೦	–	–	–	–	–	೧೦
	ಒಟ್ಟು		೫೦	೧೭	೫	೨೨	೫	೩	೪೨

ಕೋಷ್ಟಕ-೪.೨ ರಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕಿನಲ್ಲಿರುವ ದೇವದಾಸಿಯರಿಗೆ ತಮ್ಮ ಸ್ವಂತ ಹಾಗೂ ಪೂರ್ವಜರಿಂದ ಮತ್ತು ಸರ್ಕಾರದಿಂದ ಬಂದ ಹಾಗೂ ನೀಡಿದ ಭೂಮಿಯ ವಿಶ್ಲೇಷಣೆ ಈ ಕೋಷ್ಟಕದಲ್ಲಿ ತಿಳಿಸಲಾಗಿದೆ.

ಮರಿಯಮ್ಮನಹಳ್ಳಿಯಲ್ಲಿ ೧೦ ಕುಟುಂಬಗಳಿಗೆ ಒಣಭೂಮಿ ೨ ಎಕರೆ (ಕುಟುಂಬ) ಕಲ್ಲಬಾಳು(ರಾಮನಗರ) ೧೦ ಕುಟುಂಬಗಳಿಗೆ ಯಾವುದೇ ಭೂಮಿ ಇಲ್ಲ. ಚೀಲುಗೊಡು ೧೦ ಕುಟುಂಬಗಳಿಗೆ ಒಣಭೂಮಿ ೮ ಎಕರೆ ಬನ್ನಿಗೋಳ ೧೦ ಕುಟುಂಬಗಳಿಗೆ ಒಣಭೂಮಿ ೭ ಎಕರೆ ನೀರಾವರಿ ೫ ಎಕರೆ. ಹಂಪಾಪಟ್ಟಣ ೧೦ ಕುಟುಂಬಗಳಿಗೆ ಯಾವುದೇ ಭೂಮಿ ಇಲ್ಲ.

ಶೇಕಡವಾರು ನೋಡಿದಾಗ ಒಣಭೂಮಿ ೭೭%ರಷ್ಟು ನೀರಾವರಿ ೨೩% ರಷ್ಟಿದೆ. ಉಳಿದ ಕುಟುಂಬಗಳಿಗೆ ಯಾವುದೇ ರೀತಿಯ ಭೂಮಿ ಇಲ್ಲವಾಗಿದೆ. ಅವರು ತಿಂಗಳ ಮಾಶಾಸನ ಅವಲಬಿಸಿಕೊಂಡು ಜೀವನ ನಡೆಸಿಕೊಂಡು ಹೋಗುತ್ತಿದ್ದಾರೆ.


೪.೩. ಶಿಕ್ಷಣ ವ್ಯವಸ್ಥೆ

ಪ್ರಾಚೀನ ಭಾರತದಲ್ಲಿ ಶಿಕ್ಷಣ ಸಮಾಜದ ಒಂದು ವರ್ಗಕ್ಕೆ ಸೀಮಿತವಾಗಿತ್ತು. ಬಹುಪಾಲು ಜನಕ್ಕೆ ಅದು ಅಪರಿಚಿತವೇ ಆಗಿತ್ತು. ಬ್ರಿಟಿಷರ ಕಾಲದಲ್ಲಿ ಶಿಕ್ಷಣವನ್ನು ಲೌಕಿಕಗೊಳಿಸಿ ಸಾರ್ವತ್ರಿಕಗೊಳಿಸಲಾಯಿತು. ಹಿಂದಿನ ಗುರುಕುಲ ಪದ್ಧತಿ ಅಪ್ರತ್ಯಕ್ಷವಾಗಿ ಜನತೆಗೆ ಸಂಸ್ಕಾರವನ್ನು ಕೊಡುವಂತಿದ್ದರೂ ಅದರ ವ್ಯಾಪ್ತಿ ತುಂಬಾ ಸೀಮಿತವಾಗಿತ್ತು. ಅದರ ಪ್ರಭಾವ ಇಡೀ ಸಮಾಜದ ಮೇಲೆ ಸಾಕಷ್ಟು ಪರಿಣಾಮ ಬೀರಲಿಲ್ಲ. ಬ್ರಿಟಿಷರು ಆ ಶಿಕ್ಷಣ ಪದ್ಧತಿಯೂ ತಮ್ಮ ಅಧಿಕಾರಕ್ಕೆ ಮುಳುದಾದೀತೆಂದು ಶಂಕಿಸಿ ತಮ್ಮದೇ ರೀತಿಯ ಲೌಕಿಕ ಶಿಕ್ಷಣವನ್ನು ತಂದರು. ಇದರಲ್ಲಿ ಮಾನವನ ಸರ್ವಾಂಗೀಣ ವಿಕಸನಕ್ಕಿಂತ ಅಡಳಿತಕ್ಕೆ ಅಗತ್ಯವಾದ ಓದು ಬರಹ ಬಲ್ಲವರನ್ನು ತಯಾರಿಸುವುದೇ ಮುಖ್ಯ ಉದ್ದೇಶವಾಗಿತ್ತು. ಮೇಲಾಗಿ ಈ ಲೌಕಿಕ ಶಿಕ್ಷಣದ ಮೂಲಕ ಜನತೆಯಲ್ಲಿನ ಭಾರತೀಯತೆಯ ಪ್ರೇಮವನ್ನು ತೊಡೆದು ಹಾಕುವುದೇ ಉದ್ದೇಶವಾಗಿತ್ತು. ಮೇಕಾಲೆ ಎಂಬ ಬ್ರಿಟಿಷ್ ಅಧಿಕಾರಿ ಈ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾನೆ. ಭಾರತೀಯರಿಗೆ ತಮ್ಮ ನಾಡು ನುಡಿ, ಸಂಸ್ಕೃತಿ, ಪಾರಂಪರೆಗಳ ಬಗ್ಗೆ ಇರುವ ಅಭಿಮಾನವನ್ನು ನಾಶಮಾಡಿದಲ್ಲದೆ. ಅವರನ್ನು ಪೂರಾ ಸ್ವಾಧೀನಕ್ಕೆ ತೆಗೆದುಕೊಳ್ಳುವುದು ಅಸಾಧ್ಯ. ಆದ್ದರಿಂದ ಅವರ ಶಿಕ್ಷಣ ಪದ್ಧತಿ ನ್ಯಾಯ ಪದ್ದತಿ(ಪಂಚಾಯಿತ್) ಧರ್ಮನಿಷ್ಟೆಗಳನ್ನೂ ತೊಡೆದು ಹಾಕಬೇಕು. ಅದಕ್ಕಾಗಿ ಲೌಕಿಕ ಶಿಕ್ಷಣವನ್ನು ಜಾರಿಗೆ ತರಬೇಕು ಎಂದು ಆತ ನುಡಿದಿದ್ದ. ಆ ಟಿಪ್ಪಣಿ ಪ್ರಖ್ಯಾತವಾದದು ಅದರ ಪರಿಣಾಮ ಇಂದಿಗೂ ಹೋಗಿಲ್ಲ ರಕ್ತಕ್ಕೆ ಸೇರಿದ ವಿಷದ ಸೊಂಕಿನಂತೆ ಇನ್ನು ತನ್ನ ಪ್ರಭಾವವನ್ನು ತೊರುತ್ತಲೆ ಇದೆ.

೧೨ನೇ ಶತಮಾನದಿಂದ ದೇವದಾಸಿ ಎಂದರೆ ಸೂಳೆ ತನ್ನ ಸೌಂದರ್ಯವನ್ನು ಬೇರೆಯವರಿಗೆ ಅರ್ಪಿಸುವ ಒಂದು ವೃತ್ತಿಯಾಗಿ ಕಂಡು ಬರುತ್ತಿತ್ತು. ಆದ್ದರಿಂದ ಜನಿಸಿದ ಮಕ್ಕಳ ಸಂಖ್ಯೆ ದೊಡ್ಡ

ಕುಟುಂಬವಾಗಿ ಪರಿಗಣಿಸಿ ಸಮಾಜದಲ್ಲಿ ದುಡಿಯುವ ವರ್ಗ ಹೆಚ್ಚಾಗಿ. ಅವರಿಗೆ ಯಾವುದೇ ರೀತಿಯ ಆರ್ಥಿಕ ಮೂಲವಿಲ್ಲದೆ ಇಂತಹ ಮಕ್ಕಳನ್ನು ಜೀತ ಪದ್ಧತಿಗೆ ಮೇಲ್ಜಾತಿಯವರ ಮನೆಯಲ್ಲಿ ಕೆಲಸಕ್ಕೆ ಸೇರಿಸುವುದು ಹೆಚ್ಚಾಯಿತು. ಇಂತಹ ದೇವದಾಸಿ ಮಕ್ಕಳನ್ನು ಪುಕ್ಕಟೆಯಾಗಿ ದುಡಿಸಿಕೊಂಡು ತಮ್ಮ ಆದಾಯದಲ್ಲಿ ಪ್ರಗತಿ ಕಾಣುತ್ತಿರುವ ಎಷ್ಟೋ ಕುಟುಂಬಗಳನ್ನು ನಾವು ನೋಡಬಹುದು. ಬಹುತೇಕ ದೇವದಾಸಿ ಮಕ್ಕಳು ಶಿಕ್ಷಣವನ್ನ ಪಡೆಯುವಲ್ಲಿ ವಿಫಲರಾಗಿದ್ದಾರೆ. ಬಂದಿರುವ ಆದಾಯದಿಂದ ಹೊಟ್ಟೆ ತುಂಬಿಸಿಕೊಳ್ಳುವುದೆ ಕಷ್ಟದ ಕೆಲಸವಾಗಿದೆ. ಆದ್ದರಿಂದ ಇವರ ಜೀವನದಲ್ಲಿ ಶಿಕ್ಷಣ ಎನ್ನುವಂತದ್ದು ಕನಸಿನ ಮಾತಗಿತ್ತು.

ಕೋಷ್ಟಕ–೪.೩ ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲಾ ಹೆಚ್‌ಬಿ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಲಿಂಗವಾರು ಶೈಕ್ಷಣಿಕ ಹಂತಗಳು



	ಪ್ರಾಥಮಿಕ	ಮಾಧ್ಯಮಿಕ	ಪ್ರೌಢಶಾಲೆ	ಡಿಪ್ಲೋಮಾ	ಪದವಿ ಪೂರ್ವ	ಪದವಿ	ಸ್ನಾತಕೋತ್ತರ	ಇತರೆ
ಗಂಡು		೨	೧೫	೧	೧೦	೨	೧	೪
ಹೆಣ್ಣು	೧	೨	೧೦		೭	೩		೧
ಒಟ್ಟು	೧	೪	೨೫	೧	೧೭	೫	೧	೫

ಕೋಷ್ಟಕ–೪.೩ ರಲ್ಲಿ ದೇವದಾಸಿಯರ ಮಕ್ಕಳ ಶಿಕ್ಷಣ ಗಮನಿಸುತ್ತಾ ಹೋದಾಗ ಪ್ರಾಥಮಿಕ ಹಂತದಲ್ಲಿ ೧% ರಷ್ಟು ಮಾಧ್ಯಮಿಕ ಹಂತದಲ್ಲಿ ೪ ರಷ್ಟು ಜನ ಪ್ರೌಢ ಹಂತದಲ್ಲಿ ೨೫ ರಷ್ಟು ಜನ ಡಿಪ್ಲೋಮ ೧ ಪದವಿ ಪೂರ್ವ ೧೭ ರಷ್ಟು ಜನ ಪದವಿ ೫ ರಷ್ಟು ಜನ ಸ್ನಾತಕೋತ್ತರ ೧ ಇತರೆ ೫ ರಷ್ಟು ಜನ ಶಿಕ್ಷಣವನ್ನು ಪಡೆಯುತ್ತಿದ್ದು. ಇದರಿಂದ ಇತ್ತೀಚಿನ ದಿನಮಾನ ರಾಷ್ಟ್ರೀಯ ಉಚಿತ ಮತ್ತು ಕಡ್ಡಾಯ ಶಿಕ್ಷಣ ಸಂಪೂರ್ಣವಾಗಿ ಪಡೆದುಕೊಳ್ಳುವಲ್ಲಿ. ಯಶಸ್ವಿ ಯಾಗುತ್ತಿದ ಇದು ಕೇವಲ ಪ್ರೌಢ ಹಂತಕ್ಕೆ ಕೆಲವೂಂದು ಕುಟುಂಬದ ಮಕ್ಕಳ ಅಂತ್ಯ ಹಾಡುತ್ತಿದ್ದಾರೆ. ಇನ್ನು ಕೆಲವರು ಶಿಕ್ಷಣದಿಂದ ಸಮಾಜದಲ್ಲಿರುವ ಇಂತಹ ಅನಿಷ್ಟ ಪದ್ದತಿಯನ್ನು ಅಡ್ಡೆಗಟ್ಟುವಲ್ಲಿ ತಮ್ಮನ್ನು ತಾವು ತೋಡಗಿಕೊಳ್ಳತ್ತದೆ.

ಪ್ರತಿ ಕುಟುಂಬದಲ್ಲಿ ಪ್ರತಿಯೊಬ್ಬರು ಅಕ್ಷರ ಜ್ಞಾನವಂತರಾಗಿದ್ದಾರೆ ಕೃಷಿ, ಕೂಲಿ, ವಲಸೆ ತಮ್ಮ ಸ್ವಂತ ಬದುಕಿನ ಭಾವನೆಯನ್ನು ಹುಡುಕುತ್ತಾ ಹೋರಾಡುವರು ಇದ್ದಾರೆ.

೧.ಶೇಕಡವಾರು ನೋಡಿದಾಗ ಅತಿ ಹೆಚ್ಚು ಶಿಕ್ಷಣವನ್ನು ಪ್ರೌಢ ಹಂತದಲ್ಲಿ ಪಡೆದುಕೊಳ್ಳುತ್ತಾರೆ. ೪೨% ರಷ್ಟು ಅತಿ ಕಡಿಮೆಸಂಖ್ಯೆ ಉನ್ನತ ಶಿಕ್ಷಣ ಪಡೆದುಕೊಳ್ಳುತ್ತಿದ್ದಾರೆ. ೨% ರಷ್ಟು ಪಡೆದುಕೊಳ್ಳುತ್ತಾರೆ. ಇನ್ನೂ ಕೆಲವರು ಅನಕ್ಷರತೆಯಿಂದ ಕೊಡಿದ್ದು ಅವರು ಕೃಷಿ ಕೂಲಿಯನ್ನು ನಂಬಿ ಜೀವನ ನಡೆಸುತಿದ್ದಾರೆ. ಮತ್ತೆ ಕೆಲವರು ನಿರುದ್ಯೋಗಿಗಳಾಗಿ ಜೀವನ ನೆಡೆಸುತ್ತಿದ್ದಾರೆ.

೧೮ ಮತ್ತು ೨೦ ನೇ ಶತಮಾನದಲ್ಲಿ ಶಿಕ್ಷಣಕ್ಕೆ ಪ್ರಭಾವ ಹೆಚ್ಚಿನದಾಗಿ ಬೆಳಕಿಗೆ ಬಂತು. ಆವಾಗ ಪ್ರತಿಯೊಂದು ಕುಟುಂಬದ ಮಕ್ಕಳು ಶಿಕ್ಷಣ ಕಲಿಯಲಿಕ್ಕೆ ಪ್ರಾರಂಭಮಾಡಿದರು. ಮಾನವ ಸಮಾಜದಲ್ಲಿ ತನ್ನದೆಯಾದ ರೀತಿ ನೀತಿಗಳನ್ನು ತಮಗೆ ಬೇಕಾದ ರೀತಿಯಲ್ಲಿ ಕಟ್ಟಿಕೊಂಡು. ಕೆಳ ವರ್ಗದ ಜನರು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹೀಗೆ ಮಾನವನ ಮೂಲಭೂತ ಹಕ್ಕುಗಳಿಗೆ ಕಡಿವಾಣ ಹಾಕಿ. ತಮ್ಮದೇ ಸಮಾಜಕ್ಕೆ ಹೊಂದಾಣಿಕೆಯಾಗುವ ರೀತಿಯಲ್ಲಿ ದುಡಿಸಿಕೊಳ್ಳುವ ಮೇಲವರ್ಗಗಳು ಇಂತಹ ಪದ್ಧತಿಗಳನ್ನೂ ಇಂದಿನ ಆಧುನಿಕ ಸಮಾಜಕ್ಕೆ ತಮ್ಮ ಕೊಡುಗೆಗಳೆಂದು ಹೆಮ್ಮೆಯಿಂದ ಬೀಗುತ್ತಿದ್ದಾರೆ. ನಮ್ಮ ಸಂವಿಧಾನದಲ್ಲಿ ಎಲ್ಲಾರಿಗೂ ಸಮಬಾಳು ಎಂಬ ಘೋಷಣೆ ಪುಸ್ತಕದಲ್ಲಿನ ಘೋಷವಾಕ್ಯವಾಗಿದೆ. ಏಕೆಂದರೆ ಪ್ರಚಲಿತದಲ್ಲಿರುವ ಎಲ್ಲಾ ಸಂವಿಧಾನದಲ್ಲಿ ಪ್ರತಿಯೊಂದು ವರ್ಗಗಳ ಕಲ್ಯಾಣಕ್ಕಾಗಿ ಮೀಸಲಾತಿ ಅನುಗುಣವಾಗಿ ಅಭಿವೃದ್ದಿಗೆ ಸಹಾಯಕವಾಗುವ ಕಲ್ಪನೆಯನ್ನು ಕಟ್ಟಿಕೊಟ್ಟಿದ್ದಾರೆ. ಆದರೆ ೭೦ ವರ್ಷಗಳಾದರೂ ಮೇಲ್ಜಾತಿಯವರ ಆಡಳಿತದ ಪದ್ದತಿಯಲ್ಲಿ ಮಾತ್ರ ಕಿಂಚ್ಚಿತ್ತು ಬದಲಾವಣೆಗಳನ್ನು ನಾವು ಕಾಣುತ್ತಿಲ್ಲ.

ದೇವದಾಸಿ ಪದ್ದತಿ ಕೆಳವರ್ಗದಲ್ಲಿ ಮಾತ್ರ ಕಂಡುಬರಲು ಕಾರಣ ಅವರಿಗೆ ಯಾವುದೇ ಸಾಮಾಜಿಕ ಹಾಗೂ ಆರ್ಥಿಕ ಭದ್ರತೆ ಇಲ್ಲದಿರುವುದು, ಇವರ ಈ ಸ್ಥಿತಿಯನ್ನು ಬಳಸಿಕೊಂಡ ಸಮಾಜದ ಪಟ್ಟಭದ್ರ ಹಿತಾಸಕ್ತಿಗಳು ಅವರ ಮೇಲೆ ಅನೇಕ ಧಾರ್ಮಿಕ ಕಟ್ಟುಪಾಡುಗಳನ್ನು ಹೇರುವ ಮೂಲಕ ದಾಸರನ್ನಾಗಿ ಮಾಡಿಕೊಂಡಿದ್ದಾರೆ. ಕೆಳ ವರ್ಗದ ಮನೆತನಗಳಲ್ಲಿ ಯಾರು ಸುಂದರವಾಗಿ


ಮತ್ತು ದುಡಿಮೆಯಲ್ಲಿ ಬಲಾಡ್ಯತೆಯನ್ನು ಹೊಂದಿರುತ್ತಾರೆಯೋ ಅಂತಹ ಮಹಿಳೆಯನ್ನು ದೇವದಾಸಿಯಾಗಿ ಅನುಭವಿಸಲಿಕ್ಕೆ ಮೇಲ್ಜಾತಿಯವರು ದೇವರ ಹೆಸರಿನಲ್ಲಿ ದೇವರಿಗೆ ಪ್ರಸಾದ ರೀತಿಯಲ್ಲಿ ಮನೆಯ ಮಗಳನ್ನೂ ಬಸವಿಯಾಗಿ ಬಿಡಬೇಕು ಇಲ್ಲದಿದ್ದರೆ ದೇವರು ಯಾವುದೋ ರೂಪದಲ್ಲಿ ಬಂದು ಕಠಿಣವಾದ ಶಿಕ್ಷೆಗೆ ನಿಮ್ಮನ್ನು ಒಳಪಡಿಸುತ್ತಾನೆ. ಎಂದು ನಂಬಿಸಿ ಮೋಸ ಮಾಡುವುದು ಉಂಟು.

ಕೆಳ ಜಾತಿಯವರು ಆರ್ಥಿಕವಾಗಿ ಬಲಾಡ್ಯವಿಲ್ಲದ ಕಾರಣ ಅವರುಗಳು ಮೇಲಿನಂತೆ ಮನೆಯಲ್ಲಿ ಒಬ್ಬಳು ದೇವದಾಸಿ(ಬಸವಿ) ಎಂದು ಹೇಳಿ ಬಿಡುವುದು ವಾಡಿಕೆ. ಸುಂದರವಾದ ಮಹಿಳೆಯನ್ನ ದೈಹಿಕವಾಗಿ ಅನುಭವಿಸಿಕೊಂಡು ಅವರಿಗೆ ಅಗೋ ಹೀಗೋ ಅಲ್ಪ ಸ್ವಲ್ಪ ಮೊತ್ತದ ಹಣವನ್ನು ಇಲ್ಲವೆ ಕ್ಷಣದ ಸುಖವನ್ನು ಅನುಭವಿಸುವುದಕ್ಕಾಗಿ ಇಲ್ಲಸಲ್ಲದ ಆಸ್ವಾಸನೆಯನ್ನು ನೀಡಿ ತಮ್ಮ ಆಸೆ ತೀರಿಸಿಕೊಂಡು ಹೋಗುವುದು ಕಂಡುಬರುವುದುಂಟು. ಈ ಸಮಾಜದಲ್ಲಿ ಇಂತಹ ಸ್ಥಿತಿಯಲ್ಲಿ ಬದುಕುತ್ತಿರುವ ದೇವದಾಸಿಯರ ಯಾವುದೇ ಆರ್ಥಿಕ ಮೂಲವನ್ನು ನೋಡಿದರೂ ಜೀವನಕ್ಕೆ ಭದ್ರತೆಯನ್ನು ಒದಗಿಸುವಂತ ಯಾವ ವೃತ್ತಿಯೂ ಕಂಡುಬರುವುದಿಲ್ಲ.

ಕೋಷ್ಟಕ–೪.೪ ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲಾ ಹೆಚ್‌ಬಿ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮವಾರು ದೇವದಾಸಿಯರ ವಯೋಗುಂಪು ಮತ್ತು ಮಾಶಾಸನ ಫಲಾನುಭವಿಗಳ ಪ್ರಮಾಣ

ಕ್ರ.ಸಂ.	ನೆಲೆಗಳು	ಕುಟುಂಬಗಳು	ವಯೋಗುಂಪು			ಮಾಶಾಸನ ಪಡೆಯುತ್ತಿರುವವರು
			೩೫–೪೫	೪೬–೫೫	೫೬–೬೫	
೧	ಮರಿಯಮ್ಮನಹಳ್ಳಿ	೧೦	೩	೩	೪	೬
೨	ರಾಮನಗರ	೧೦		೩	೭	೯
೩	ಚಿಲುಗೊಡು	೧೦	೨	೪	೪	೮
೪	ಬನ್ನಿಗೋಳ್	೧೦	೧	೩	೬	೮
೫	ಹಂಪಾಪಟ್ಟಣ	೧೦	೨	೨	೬	೬
ಒಟ್ಟು		೫೦	೮	೧೫	೨೭	೩೭

ವೃತ್ತ ಚಿತ್ರ ಸಮೀಕ್ಷೆಗೊಳಪಟ್ಟ ಬಳ್ಳಾರಿ ಜಿಲ್ಲಾ ಹೆಚ್‌ಬಿ ಹಳ್ಳಿ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಗ್ರಾಮವಾರು ದೇವದಾಸಿಯರ ವಯೋಗುಂಪು ಮತ್ತು ಮಾಶಾಸನ ಫಲಾನುಭವಿಗಳ ಪ್ರಮಾಣ



ಕೋಷ್ಟಕ-೪.೪ ಮತ್ತು ವೃತ್ತ ಚಿತ್ರರಲ್ಲಿ ದೇವದಾಸಿ ವಯೋಗುಂಪು ಮತ್ತು ಮಾಶಾಸನ ಫಲಾನುಭವಿಗಳ ಪ್ರಮಾಣ ತಿಳಿದುಕೊಂಡಾಗ. ೩೫-೪೫ ವಯೋಗುಂಪುನಲ್ಲಿ ಎಂಟು ಜನ ಕಂಡು ಬಂದಿದ್ದು. ೪೫-೫೫ ವಯೋಗುಂಪು ೧೫ ಜನ, ೫೬-೬೫ ವಯೋಗುಂಪುಗಳಲ್ಲಿ ೨೭ ಜನ ಒಟಾರೆಯಾಗಿ ೫೦ ಜನ ದೇವದಾಸಿಯರನ್ನು ಸಮೀಕ್ಷೆಗೆ ಒಳಪಡಿಸಿದಾಗ ಇವರಲ್ಲಿ ೩೭ ಜನ ಮಾತ್ರ ಸರ್ಕಾರದ ತಿಂಗಳ ಮಾಸಾಶನ ಪಡೆಯುತ್ತಿದ್ದಾರೆ. ಉಳಿದ ೧೩ ಜನ ಸಮಾಜದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳವಲ್ಲಿ ವಿಫಲರಾಗಿದ್ದು, ಮತ್ತೆ ಆರ್ಥಿಕವಾಗಿ ಹಿಂದುಳಿದು ಕೇವಲ ಯಜಮಾನನ ಕೃಷಿ ಕೂಲಿಯನ್ನೇ ಅವಲಂಬಿಸಿಕೊಂಡು ಜೀವನ ನಡೆಸಿಕೊಂಡು ಹೋಗುತ್ತಿರುವುದು ಕಂಡು ಬರುತ್ತದೆ.

ದೇವದಾಸಿಯರ ವಯೋಗುಂಪನ್ನು ಶೇಕಡವಾರು ವಿಂಗಡಣೆ ಮಾಡಿದಾಗ ೨೫ ರಿಂದ ೪೫ ವಯೋಗುಂಪಿನ ದೇವದಾಸಿ ಮಹಿಳೆಯ ಶೇಕಡ ೩೦ ರಷ್ಟು ಇದೆ. ೫೬ ರಿಂದ ೬೦ ವಯೋಗುಂಪಿನ ದೇವದಾಸಿ ಮಹಿಳೆಯರ ಶೇಕಡ ೫೪ ರಷ್ಟು ಇರುವುದ್ದನ್ನು ವೃತ್ತಿ ಕೋಷ್ಟಕದಲ್ಲಿ ತಿಳಿಸಲಾಗಿದೆ.



ಅಧ್ಯಾಯ: ಐದು

ದೇವದಾಸಿಯರ ಅಭಿವೃದ್ಧಿಗೆ ಕೈಗೊಂಡ ಯೋಜನೆಗಳು

೫.೧. ಸರ್ಕಾರದ ಯೋಜನೆಗಳು

೫.೨. ಸರ್ಕಾರೇತರರ ಯೋಜನೆಗಳು

೫.೩. ದೇವದಾಸಿಯರ ಬದುಕಿನ ಸ್ಥಿತ್ಯಂತರಗಳು

ಅಧ್ಯಾಯ: ಐದು
ಸರ್ಕಾರದ ಯೋಜನೆಗಳು

೫.೧. ಪ್ರಸ್ತಾವನೆ

ಯಾವುದೋ ಒಂದು ಕಾಲದಲ್ಲಿ ಸಾಮಾಜಿಕವಾಗಿ ಹೇರಲ್ಪಟ್ಟ ದೇವದಾಸಿ ಪದ್ಧತಿಗೆ ಅಂದಿನಿಂದ ಇಂದಿನವರೆಗೆ ಅನೇಕ ತಳ ಸಮುದಾಯಗಳ ಮಹಿಳೆಯರು ಬಲಿಯಾಗುತ್ತಿದ್ದಾರೆ. ಒಂದು ಕಾಲದಲ್ಲಿ ದೇವಾಲಯಕ್ಕೆ ಸಿಮಿತವಾಗಿದ್ದ ದೆವದಾಸಿಯರಿಗೆ ಉತ್ತಮ ಗೌರವ ಸ್ಥಾನಮಾನವಿದ್ದವು. ತದನಂತರ ಅವರನ್ನು ಕೇವಲ ಭೋಗದ ವಸ್ತುವಿನಂತೆ ಬಳಸಿಕೋಳ್ಳುವುದು ಪ್ರಾರಂಭವಾಯಿತು. ಇದರಿಂದಾಗಿ ದೇವದಾಸಿಯರು ಆರ್ಥಿಕ, ಸಾಮಾಜಿಕ, ಕೌಟುಂಬಿಕ ಭದ್ರತೆ ಇಲ್ಲದೆ ಪ್ರಾಣಿಗಳಂತೆ ಬದುಕುವ ಸ್ಥಿತಿ ಒದಗಿದೆ. ದೇವದಾಸಿಯರ ಇಂತಹ ಹೀನಾಯ ಸ್ಥಿತಿಯನ್ನು ಗಮನಿಸಿದ. ಸರ್ಕಾರ ಪದ್ದತಿಯಿಂದ ಹೋರತರಲು ಮತ್ತು ಅವರ ಜೀವನವನ್ನು ಸುಸ್ಥಿರಗೊಳಿಸಲು ಅನೇಕ ಯೋಜನೆಗಳನ್ನು ಜಾರಿಗೆ ತಂದಿದೆ. ಅವುಗಳೆಂದರೆ,

೫.೧ ದೇವದಾಸಿಯರಿಗೆ ಇರುವ ಸರ್ಕಾರದ ಯೋಜನೆಗಳು

- ದೇವದಾಸಿಯರಿಗೆ ಸರ್ಕಾರವು ತಿಂಗಳ ಮಾಶಾಸನ ೧೫೦೦ ರೂ ಗಳಂತೆ ನೀಡುತ್ತಿದೆ.
- ದೇವದಾಸಿಗೆ ಸರ್ಕಾರವು ಪುನರ್‌ವಸತಿ ನಿಗಮದಡಿಯಲ್ಲಿ ವಸತಿ ಯೋಜನೆಯನ್ನು ನೀಡುತ್ತಿದೆ.
- ದೇವದಾಸಿಯರಿಗೆ ಸರ್ಕಾರವು ಕೃಷಿ ಭೂಮಿಯನ್ನು ಆಯಾ ಪ್ರದೇಶಕ್ಕೆ ಅನುಗುಣವಾಗಿ ಹಂಚಿಕೆ ಮಾಡಲಾಗುತ್ತಿದೆ.
- ದೇವದಾಸಿಯರಿಗೆ ಗ್ರಾಮ ಪಂಚಾಯಿತ್‌ಯಿಂದ ಪ್ರತ್ಯೇಕವಾಗಿ ಸ್ವಂತ ಉದ್ಯೋಗ ಸೃಷ್ಟಿಸುತ್ತದೆ, ಅದರ ಜೊತೆಗೆ ಉದ್ಯೋಗ ಸಾಮಾಗ್ರಿಗಳನ್ನು ನೀಡಲಾಗುತ್ತಿದೆ. ಉದಾ: ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆ ಮತ್ತು ಹೋಲಿಗೆ ಯಂತ್ರ ಇತ್ಯಾದಿಗಳು.

• ದೇವದಾಸಿಯರಿಗೆ ಸರ್ಕಾರವು ತರಬೇತಿ ಮತ್ತು ಉದ್ಯೋಗಗಳನ್ನ ನೀಡುವುದರ ಜೊತೆಗೆ ಅವರ ಅಭಿವೃದ್ಧಿಗೆ ಹೊಸ ಯೋಜನೆಗಳನ್ನು ಜಾರಿಗೆ ತರುತ್ತಿದೆ.

• ದೇವದಾಸಿ ಪದ್ಧತಿ ನಿರ್ಮೂಲನೆಗೆ ಸರ್ಕಾರ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳು ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡು ಬಂದಿದೆ.

೫.೨. ಸರ್ಕಾರೇಯತರ ಯೋಜನೆಗಳು

ದೇವದಾಸಿ ಮಹಿಳೆಯರ ಮತ್ತು ಅವರ ಮಕ್ಕಳ ಕಲ್ಯಾಣಕ್ಕಾಗಿ ಸರ್ಕಾರ ಕೈಗೊಂಡಿರುವ ಯೋಜನೆಗಳಲ್ಲದೆ ಅನೇಕ ಸರ್ಕಾರೇತರ ಸಂಸ್ಥೆಗಳೂ ಸಹ ಇವರ ಅಭಿವೃದ್ಧಿಗೆ ಶ್ರಮಿಸುತ್ತಿವೆ. ಅವುಗಳಲ್ಲಿ ಮುಖ್ಯವಾಗಿ ಮಹಿಳಾ ಸ್ವ ಸಾಹಾಯ ಗುಂಪುಗಳು.

೫.೨.೧. ಸ್ವ ಸಹಾಯ ಗುಂಪುಗಳು

ಸ್ವ ಸಹಾಯ ಗುಂಪುಗಳು ಸಾಮಾಜಿಕ, ಆರ್ಥಿಕ ಸ್ಥಿತಿ ಉತ್ತಮಪಡಿಸಿಕೊಳ್ಳಲು ಸಹಕಾರಿಯಾಗಿದೆ. ಸ್ವಸಹಾಯ ಗುಂಪುಗಳು ಹಳ್ಳಿಗಳಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕಂಡುಬರುತ್ತಿವೆ. ಇದರ ಜೊತೆಗೆ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಸಂಘಗಳು ದೇವದಾಸಿಯರಿಗೆ ಸಾಲವನ್ನು ನೀಡಿ ಪ್ರತಿವಾರ ೫೦ ರೂ. ರಂತೆ ಕಟ್ಟಿಸಿಕೊಳ್ಳುವಂತಹ ಕೌಶಲ್ಯ ಕಂಡುಬರುತ್ತದೆ. ಈ ಎಲ್ಲ ಯೋಜನೆಗಳಿಂದ ದೇವದಾಸಿಯರು ಆರ್ಥಿಕವಾಗಿ ಸ್ವಲ್ಪಮಟ್ಟಿನ ಸುಧಾರಣೆಯಾಗುತ್ತಿದ್ದಾರೆ.

೫.೨.೨. ಸರ್ಕಾರಿ ಹುದ್ದೆಗಳು

ದೇವದಾಸಿ ಮಕ್ಕಳು ವಿದ್ಯಾವಂತ ಯುವಕರು ಸರ್ಕಾರಿ ಮತ್ತು ಖಾಸಗಿ ವಲಯಗಳಲ್ಲಿ ಇತ್ತೀಚಿನ ದಿನಗಳಲ್ಲಿ ನೌಕರಿ ಪಡೆಯಲು ಯಶಸ್ವಿಯಾಗಿದ್ದಾರೆ. ಶಾಲೆ, ಬ್ಯಾಂಕ್, ಇತ್ಯಾದಿ ಸರ್ಕಾರಿ ಕಛೇರಿಗಳಲ್ಲಿ ಉದ್ಯೋಗ ಪಡೆದುಕೊಂಡಿದ್ದಾರೆ. ಆದರೆ ಬಹು ಸಂಖ್ಯಾತರು ಬಡತನ ಬವಣೆಯಿಂದ ಬಳಲುತ್ತಿದ್ದು. ತಮ್ಮ ಮಕ್ಕಳನ್ನು ಶಾಲೆ ಬಿಡಿಸಿ ವಿವಿಧ ಕೆಲಸಗಳಿಗೆ ಕಳಿಸಿ ಬಾಲ ಕಾರ್ಮಿಕರ ಸೃಷ್ಟಿಗೂ ಕಾರಣರಾಗಿದ್ದಾರೆ. ಇದರ ಜೊತೆಗೆ ಕೆಲವು ದೇವದಾಸಿಯರು ಗಂಡು ಸಂತಾನವಿಲ್ಲದ ಕಾರಣ ತಮ್ಮ ಹೆಣ್ಣುಮಕ್ಕಳನ್ನು ಮತ್ತೇ ದೇವದಾಸಿಯರನ್ನಾಗಿ ಬಿಡಲು ಹಣಿಯಾಗಿದ್ದಾರೆ. ಉನ್ನತ ಶಿಕ್ಷಣ ಪಡೆದ ಹಲವು ನಿರುದ್ಯೋಗಿ ಯುವಕ-ಯುವತಿಯರು ಸಹ ಇದ್ದಾರೆ.

೫.೨.೩ ದೇವದಾಸಿ ಮಹಿಳೆಯರ ಬದುಕಿನ ಸ್ಥಿತ್ಯಂತರಗಳು

ದೇವದಾಸಿಯರು ದೇವಾಲಯದಲ್ಲಿ ನೆಡೆಯುವ ಪೂಜೆ ಕಾರ್ಯಕ್ಕೆ ಬೇಕಾದ ವಸ್ತುಗಳನ್ನು ನೀಡಿ ನೈವೇದ್ಯ ಪಡೆದುಕೊಳ್ಳುವಳಾಗಿದ್ದಳು. ಪ್ರತಿವರ್ಷ ಆ ಗ್ರಾಮದ ಕೃಷಿಕರು ಬೆಳೆ ಬಂದಾಗ ರಾಶಿ ಸಮಯದಲ್ಲಿ ದೇವರ ದಾಸಿ ಎಂದು ಅಲ್ಪ-ಸಲ್ಪ ಕಾಳು(ಧಾನ್ಯ)ಗಳನ್ನು ಇವರಿಗೆ ನೀಡುತ್ತಿದ್ದರು. "ದೇವಾಲಯದಲ್ಲಿ ಸಿಗುವ ನೈವೇದ್ಯ ಮತ್ತು ರೈತರು ಕೊಡುವ ರಾಶಿ(ಧಾನ್ಯ)ಗಳನ್ನು ಸ್ವೀಕರಿಸಿಕೊಂಡು

ಜೀವನ ನಡೆಸುವುದು ಪದ್ಧತಿಯಾಗಿತ್ತು. ಕಾಲಾನಂತರದಲ್ಲಿ ದೇವಾಲಯದಲ್ಲಿರುವ ಪೂಜಾರಿಯೂ ಆಕೆಯನ್ನು ವರಿಸಿಕೊಂಡು ಆಕೆಯೊಂದಿಗೆ ದೇಹ ಸಂಬಂಧವನ್ನು ಇಟ್ಟುಕೊಂಡು. ಮಕ್ಕಳು ಸಂಸಾರ ಎಂದು ಜೀವನ ಪ್ರಾರಂಭ ಮಾಡತೊಡಗಿದರು. ಇದು ಪ್ರಾರಂಭದಲ್ಲಿ ದೇವಾಲಯದ ಪೂಜಾರಿ ಮತ್ತು ದಾಸಿಗೆ ಮಾತ್ರ ಸೀಮಿತವಾಗಿತ್ತು. ಕುಟುಂಬ ಪ್ರಾರಂಭವಾದಾಗ ಅನೇಕ ಸಮಸ್ಯೆಗಳು, ಅಂದರೆ ಕೊಡುವುದು, ಕೊಳ್ಳುವುದು, ಉಳಿತಾಯ ಮತ್ತು ವೆಚ್ಚಗಳು ಪ್ರಾರಂಭವಾದಾಗ ಮನಸ್ತಾಪವಾಗತೊಡಗಿತ್ತು. ಏಕಂದರೆ ಪೂಜಾರಿಗೆ ಮೊದಲು ಕುಟುಂಬ, ಸಂಸಾರ ಇತ್ತು. ಹಾಗಾಗಿ ಇಂತಹ ಕಾರ್ಯದಲ್ಲಿ ತೊಡಗದೇ ಆಕೆಯೊಂದಿಗೆ ದೇಹಸುಖಕ್ಕಾಗಿ ಮಾತ್ರ ಆಕೆಯನ್ನು ಅನುಭವಿಸುವುದು ವಾಡಿಕೆಯಾಗಿತ್ತು. ಮೊದಲು ಕಲೆಗೆ ಪ್ರಾಶಸ್ತ್ಯವನ್ನು ನೀಡುತ್ತಿದ್ದರು. ಆದರೆ ಅದು ಬರು ಬರುತ್ತಾ ಸಂಗೀತ, ನೃತ್ಯದ ಗುರುಗಳು ಅವಳನ್ನು ಅನುಭವಸುವುದು ಪ್ರಾರಂಭವಾಯಿತು. ಇದು ಒಂದು ಕ್ಷೇತ್ರದಲ್ಲಲ್ಲದೆ ಅನೇಕ ಕ್ಷೇತ್ರದಲ್ಲಿ ಮುಂದುವರೆಯುತ್ತಾ ಬರುತ್ತದೆ"೧ ಈ ಆಧುನಿಕ ಜೀವನ ಶೈಲಿಯ ಪತಿಕಾರ್ಯದ ಅನುಭವದ ಪ್ರಕಾರ ದೇವದಾಸಿಯರು ಊರಿನ ವ್ಯಕ್ತಿ ಅಥವಾ ಶ್ರೀಮಂತ ಚಾರ್ತರ್ಯದಿಂದ ಇರುವ ವ್ಯಕ್ತಿಗಳ ಮಾತನ್ನು ಮೀರಿ ದೇವದಾಸಿರು ಯಾವುದೇ ಕಾರ್ಯ ಕೈಗೊಳ್ಳವಂತ್ತಿಲ್ಲ. ದೇವದಾಸಿಯರನ್ನು(ಸೂಳೆ) ಎಂದು ಪರಿಗಣಿಸಿ ತಾವು ತಮ್ಮ ತಮ್ಮಲ್ಲಿ ಪೈಪೂಟಿ ಮಾಡಿ ಆಕೆಯ ದೇಹ ಸುಖ ಅನುಭವಿಸುವುದು ಉಂಟು. ಈ ಇತ್ತೀಚಿನ ದಿನಮಾನಗಳಲ್ಲಿ ಶಿಕ್ಷಣದ ಪ್ರಬಾವದಿಂದ ಈ ಅನಿಷ್ಟ ಪದ್ಧತಿ ಕಡಿಮೆಯಾಗುತ್ತಿದೆ. ಎಲ್ಲ ಹಳ್ಳಿಗಳಲ್ಲಿ ತಿಳುವಳಿಕೆದಾರರು ಹೆಚ್ಚಾಗಿದ್ದು ಇದು ಯಾವುದೇ ಅಭಿವೃದ್ಧಿಗೆ ಪೂರಕವಾದ ನಿಯಮವಲ್ಲ ಸಮಾಜದಲ್ಲಿ ಕೆಟ್ಟ ಸಂಪ್ರದಾಯಗಳು ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಯಾವ ಕ್ಷೇತ್ರದಲ್ಲೂ ಸಹ ಈ ಪದ್ಧತಿಯಿಂದ ಮುಂದೆ(ಬೆಳವಣಿಗೆ) ಬರಲಿಕ್ಕೆ ಸಾಧ್ಯವಾಗದೆಂದು ತಿಳಿದು ಬರುತ್ತದೆ. ಈ ಪದ್ಧತಿ ನಿರ್ಮೂಲನೆಯಾಗಬೇಕೆಂದು ಎಲ್ಲರೂ ಕೈ ಜೋಡಿಸುತ್ತಿರುವುದು. ಇದು ಸಂಪ್ರದಾಯ ಇದನ್ನು ಬಿಡಬಾರದು ಮುಂದುವರಿಸಿಕೊಂಡು ಒಂದೊಂದು ಕುಟುಂಬಗಳು ಈ ಆಧುನಿಕ ಪ್ರಪಂಚದಲ್ಲಿ ಬರುತ್ತದೆ. ಇದು ಅಜ್ಞಾನ ಮತ್ತು ಮೌಢ್ಯತೆಯಿಂದ ಇಂತಹ ಪದ್ಧತಿಗಳು ಉಳಿದುಕೊಂಡು ಬರುತ್ತಿವೆ.

ದೇವದಾಸಿಯರು ಇತ್ತೀಚಿನ ದಿನಗಳಲ್ಲಿ ಸಮಾಜದ ಅಂಕು-ಡೊಂಕುಗಳನ್ನು ತಿದ್ದುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇದು ಸಮಾಜ ಪರಿವರ್ತನೆಯ ಹಾದಿಯಲ್ಲಿ ಮುನ್ನಡೆಯುತ್ತದೆ ಎಂದು ತಿಳಿದುಬರುತ್ತದೆ. ಸರ್ಕಾರವು ಈ ಪದ್ಧತಿಯ ನಿರ್ಮೂಲನೆಗೆ ಅನೇಕ ಯೋಜನೆಗಳನ್ನು ಜಾರಿಗೊಳಿಸಿದೆ ಹಲವಾರು ಸ್ವಯಂ ಸೇವಾ ಸಂಘಗಳು ಸಹ ದೇವದಾಸಿ ಪದ್ಧತಿಯ ನಿರ್ಮೂಲನಾ ಕಾರ್ಯದಲ್ಲಿ ತೊಡಗಿವೆ.

ಪ್ರಸ್ತುತ ದಿನಗಳಲ್ಲಿ ದೇವದಾಸಿ ಪದ್ದತಿಗೆ ಒಳಪಟ್ಟಿರುವವರು ಆ ಅನಿಷ್ಟ ಪದ್ಧತಿಯಿಂದ ಹೊರ ಬಂದು ಸರ್ಕಾರದ ಸ್ವಯಂ ಸೇವಾ ಸಂಘಗಳ ಸಹಕಾರ ಪಡೆದು ಸ್ವತಂತ್ರವಾಗಿ ಬದುಕುತ್ತಿದ್ದಾರೆ. ತಮ್ಮ ಮಕ್ಕಳನ್ನು ಈ ಪದ್ಧತಿಯಿಂದ ದೂರ ಉಳಿಯುವಂತೆ ಮಾಡುತ್ತಿದ್ದಾರೆ.

೫.೪. ದೇವದಾಸಿ ಮಹಿಳೆಯರ ಸ್ಥಿತಿಗತಿ

ದೇವದಾಸಿಯರ ವಯಸ್ಸು, ಸೌಂದರ್ಯ, ಮನೆತನದ ಹಿನ್ನೆಲೆಯ ಆಧಾರದ ಮೇಲೆ ಸುತ್ತ-ಮುತ್ತ ವಾತಾವರಣದಲ್ಲಿ, ಬೆಲೆ ಮತ್ತು ಬೇಡಿಕೆ ಇದೆ. ಅವರ ರೂಪ, ಯೌವನ, ರಕ್ತ ಮಾಂಸ, ತುಂಬಿಕೊಂಡಿರುವಷ್ಟು ದಿನ ಅವರು ಮತ್ತು ಕುಟುಂಬ ಆರ್ಥಿಕವಾಗಿ, ಸಾಮಾಜಿಕವಾಗಿ, ಚನ್ನಾಗಿಯೇ ಇರುತ್ತದೆ. ಆದರೆ ಮುಪ್ಪಾದ ದೇವದಾಸಿಯರನ್ನು ಯಾರು ಕೇಳಲಾರದಂತಹ ಸ್ಥಿತಿಯು ಇದೆ. ಕೊನೆಯ ದಿನಗಳಲ್ಲಿ ಒಂದು ಒತ್ತಿನ ಊಟಕ್ಕೂ ಗತಿಯಿಲ್ಲದೆ ಮಕ್ಕಳ ಅಶ್ರಯ ಇಲ್ಲದೇ ಗುಡಿಯಲ್ಲಿ ಆಶ್ರಮದಲ್ಲಿ ಜೀವನದ ಕೊನೆಯ ದಿನಗಳನ್ನ ನೋಡುತ್ತಾರೆ. ಅದಕ್ಕಾಗಿ ಪ್ರಸ್ತುತ ಸರ್ಕಾರ ನೀಡುತ್ತಿರುವ ತಿಂಗಳ ಮಾಸಾಶನ ೧೫೦೦ ರೂಗಳು ಬರುತ್ತದೆ. ಅದು ಜೀವನ ನಿರ್ವಹಣೆಗೆ ಸಾಲುತ್ತಿಲ್ಲ. ಆ ದೃಷ್ಟಿಯಿಂದ ಘನ ಸರ್ಕಾರವು ಈ ದೇವದಾಸಿಯರಿಗೆ ತಿಂಗಳಿಗೆ ೫೦೦೦ ರೂ ಗಳನ್ನು ನೀಡಬೇಕು ಎಂದು ತಮ್ಮ ತೊದಲು ನುಡಿಯಿಂದ ನುಡಿಯುತ್ತಾರೆ. ಸರ್ಕಾರ ಅವರಿಗೆ ಮನೆ ಮತ್ತು ಜಮೀನುಗಳನ್ನು ನೀಡಿ ಜೀವನ ಭದ್ರತೆಯನ್ನು ಒದಗಿಸಬೇಕಾಗಿದೆ. ಇತ್ತೀಚಿನ ದಿನಗಳಲ್ಲಿ ಇನ್ನು ಕೇಲವರು ಸಂಘ, ಸಂಸ್ಥೆ, ಸಂಸ್ಕೃತಿಯ ಹೆಸರಿನಲ್ಲಿ ಸಮಾಜ ಸುಧಾರಣೆ, ರಾಜಕಾರಣ ಮನೋರಂಜನೆ ವ್ಯವಹಾರ ವಾಣಿಜ್ಯಗಳ ಹೆಸರಿನಲ್ಲಿ ಹಾಡು ಹಗಲೆ ಸೂಳೆಗಾರಿಕೆ ನಡೆಯುತ್ತದೆ. ಆಗ ರಾತ್ರಿ ನಡೆದರೆ ಈಗ ಹಗಲು, ಆಗ ಮುಚ್ಚಿ ನಡೆದರೆ ಈಗ ಬಿಚ್ಚಿ ನಡೆಯುತ್ತಿದೆ. ಈ ನರಕಕ್ಕೂ ನೂರು ದಾರಿಯೆಂಬತೆ ಕೆಲವರು ಬಯಸಿ ದೇವದಾಸಿಯಾದರೆ ಇನ್ನೂ ಕೆಲವರು ಕುಟುಂಬ ನಿರ್ವಹಣೆಗಾಗಿ ದೇವದಾಸಿಯಾಗಿದ್ದಾರೆ. ಈ ಸಮಾಜದಿಂದ ಇನ್ನು ಸಂಪೂರ್ಣವಾಗಿ ತೋಡೆದು ಹಾಕುವಲ್ಲಿ ಸರ್ಕಾರ ಮತ್ತು ಸಮಾಜ ಯಶಸ್ವಿಯಾಗಿಲ್ಲ.

೫.೫ ದೇವದಾಸಿಯರ ಹೊಸ ಬಗೆಯ ಶೋಷಣೆ

ವೇದ ಉಪನಿಷತ್ತು ಕಾಲದಿಂದ ಇಲ್ಲಿಯತನಕ ದೇವದಾಸಿ ಮಹಿಳೆಯರನ್ನು ಆಧಿಕಾರಿಗಳು, ಬಂಡವಾಳಶಾಹಿಗಳು, ರಾಜಕೀಯ ವ್ಯಕ್ತಿಗಳಿಂದ ಬೇರೆ ಬೇರೆ ಬಗೆಯಲ್ಲಿ ಶೋಷಣೆಗೆ ಬಲಿಯಾಗುತ್ತಿರುವುದನ್ನು ಕಾಣುತ್ತೇವೆ. ಆದರೆ ಇಂದೂ ಈ ಸಮಾಜದಲ್ಲಿ ದೇವದಾಸಿಯರನ್ನು ಹಿಂದೆ ದೇವರ ಹೆಸರಿನಲ್ಲಿ ಬಳಸಿಕೊಂಡರೆ. ಈಗ ರಾಜಕೀಯ ಶಕ್ತಿಗಳಿಂದ ವ್ಯಾಪಾರದ ಹೆಸರಿನಲ್ಲಿ ಮಾರಾಟ ನಡೆಯುತ್ತಿದೆ. ದೇವದಾಸಿ ಮಹಿಳೆಯರ ಶೋಷಣೆಯ ವಿವಿಧ ಬಗೆಗಳೆಂದರೆ,

೧. ಕೆಸಲ ಕೊಡಿಸುವುದಾಗಿ ಹೇಳುವುದು.

೨. ನಿನ್ನ ಮಕ್ಕಳ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ನೀಡಿಸುತ್ತೆವೆ ಎನ್ನುವುದು.

೩. ವಸತಿ ಯೋಜನೆಗೆ ನಿಮ್ಮನ್ನು ಆಯ್ಕೆ ಮಾಡುವುದಾಗಿ ಆಮಿಷ ಒಡ್ಡುವುದು.

೪. ರಾಜಕೀಯ ಅವಕಾಶ ನೀಡುವುದಾಗಿ ಹೇಳುವುದು.

೫. ವರ ರಾಜ್ಯಕ್ಕೆ ವಲಸೆ ಕಳಿಸುವುದಾಗಿ ಸುಳ್ಳು ಭರವಸೆ ನೀಡುವುದು.

೬. ಹಣವನ್ನು ನಿಡುವುದಾಗಿ ಹೇಳುವುದು.

೭. ಸರ್ಕಾರದ ಭೂಮಿಯನ್ನು ನಿಡುವುದಾಗಿ ಹೇಳುವುದು.

೫.೬. ದೇವದಾಸಿಯರ ಅಂತರಂಗದ ನುಡಿ

ದೇವದಾಸಿ ಪದ್ದತಿ ಎಂಬುದು ಸಮಾಜದ ಒಂದು ಹಣ್ಣು ಇದ್ದಂತೆ. ಈ ಪದ್ದತಿಗೆ ಬಲಿಯಾದ ಎಷ್ಟೋ ಮಹಿಳೆಯರು ತಮ್ಮ ಜೀವನದಲ್ಲಿ ಅನೇಕ ನೋವುಗಳನ್ನು ಅನುಭವಿಸಿ ತಮ್ಮ ಮಕ್ಕಳಿಗೆ ಉತ್ತಮ ಭವಿಷ್ಯ ಕೊಡದೆ ಮತ್ತೆ ಅಧೇ ಪದ್ದತಿಗೆ ಅವರನ್ನು ಒಳಗುಮಾಡುತ್ತಿರುವ ಸ್ಥಿತಿಯು ದಯಾನೀಯವಾದುದು. ಅಧ್ಯಯನದ ಸಂದರ್ಭದಲ್ಲಿ ದೇವದಾಸಿ ಪದ್ದತಿಗೆ ಒಳಪಟ್ಟ ಮಹಿಳೆಯರನ್ನು ಮತ್ತು ಅವರ ಮಕ್ಕಳನ್ನು ಸಂದರ್ಶನ ಮಾಡಿದಾಗ ಅವರು ಹೇಳಿಕೊಂಡ ತಮ್ಮ ಅಂತರಂಗದ ನೂವನ್ನು ಈ ಕೆಳಗಿನಂತೆ ತಿಳಿಸ ಬಯಸುತ್ತೇನೆ,

ಪೂಜಾರ್ ಹನುಮವ್ವ (ಆದಿ ಕರ್ನಾಟಕ, ವಯಸ್ಸು-೬೦)

ಬನ್ನಿಗೋಳ ಗ್ರಾಮದ ಪರಿಶಿಷ್ಟ ಜಾತಿಯ ದೇವದಾಸಿಯಾದ ಪೂಜಾರ ಹನುಮವ್ವನ ಹೇಳಿದ ತನ್ನ ಜೀವನದ ನೋವು ಇಡೀ ದೇವದಾಸಿ ಪದ್ದತಿಯ ಸಮಸ್ಯೆಯ ಬಗ್ಗೆ ತಿಳಿಸುತ್ತದೆ. ಸ್ರವತಹ ಹನುಮವ್ವ ಹೇಳಿದ ಮಾತುಗಳನ್ನು ಅವಳದೇ ದಾಟಿಯಲ್ಲಿ ತಿಳಿಸುತ್ತಿದ್ದೇನೆ. ನಾನು ಹುಟ್ಟಿ ಬೆಳೆದಿದ್ದು ನನ್ನ ತಾಯಿ ತವರು ಮನೆ ಮೋರಗೆರೆಯಲ್ಲಿ. ನನ್ನ ತಂದೆ ತಾಯಿಯನ್ನು ಯಾರು ನೋಡಿಕೊಳ್ಳಲಿಲ್ಲ ನನ್ನನ್ನು ತಿಳಿದೋ ತಿಳಿಯದೋ ದೇವದಾಸಿ ಮಾಡಿದ್ರೋ ಗೊತ್ತಿಲ್ಲ. ಆದರೆ ನನ್ನನ್ನ ಬಹಳ ಪ್ರೀತಿಯಿಂದ ಗಂಡು ಮಗುವಂತೆ ಬೆಳೆಸಿದರು. ಬಾಲ್ಯದಲ್ಲಿಯೇ ಬಲವಂತದಿಂದ ತಂದೆ ತಾಯಿಯರ ಒತ್ತಡದಿಂದ ದೇವದಾಸಿಯಾಗಿ ಬಲಿಯಾದೆ. ಆಗ ನಮ್ಮಲ್ಲಿ ದೇವದಾಸಿ ಬಿಡುವುದು ಮನೆತನದ ಘನತೆ ಗೌರವ ಕಾಪಾಡುವ ಪದ್ದತಿಯಾಗಿತ್ತು. ಆ ಸಂಧರ್ಭದಲ್ಲಿ ಯಾರೂ ಅಡ್ಡಿ ಆತಂಕಗಳನ್ನು ಮಾಡಲಿಲ್ಲ ನನಗೆ ತುಂಬಾ ಚೆನ್ನಾಗಿ ನೆನಪು. ನನಗೆ ಕೇವಲ ೧೨ ರಿಂದ ೧೪ನೇ ವರ್ಷವಾದಾಗ ದೇವದಾಸಿಯಾಗಿ ಬಿಡಲು ತಿರ್ಮಾನಿಸಿದರು. ನನ್ನ ಮನೆತನವನ್ನು ಮುಂದುವರೆಸಿಕೊಂಡು ಹೋಗುವ ದೆಸೆಯಿಂದ ಈ ಕಾರ್ಯಕೈಗೊಂಡರು. ಅಂದು ನನಗೆ ಹೊಸ ಬಟ್ಟೆ, ಬಳೆ ತಂದರು ಆಗ ನಾನು ಕೇಳಿದೆ ಏಕೆ ಈ ಬಟ್ಟೆ ಎಂದಾಗ ನಾಳೆ ನಿನ್ನ ದೇವದಾಸಿಯಾಗಿ ಬಿಡುತ್ತೇವೆ. ಎಂದರು ಆಗ ದೇವದಾಸಿ ಬಗ್ಗೆ ಏನು ಗೋತ್ತಿರಲಿಲ್ಲ ಹೊಸ ಬಟ್ಟೆ ನೋಡಿ ತುಂಬಾ ಸಂತೋಷವಾಯಿತು ಏಕೆಂದರೆ ನಾನು ಅದುವರೆಗೂ ಹೊಸ ಬಟ್ಟೆ ತೊಟ್ಟಿರಲಿಲ್ಲ.

ದೇವದಾಸಿ ಬಿಡುವ ಪದ್ದತಿ ಮೂರು ತರಹಗಳಲ್ಲಿವೆ. ಮುತ್ತು ಕಟ್ಟುವುದು, ಹೂವಿನ ಮುದ್ರೆ ಹಾಗೂ ಕೆಂಡದ ಮುದ್ರೆ ಹಾಕಲಾಯಿತು. ಪ್ರಾರಂಭದಲ್ಲಿ ಎಲ್ಲರೂ ನನಗೆ ತುಂಬಾ ಪ್ರೀತಿಯಿಂದ ಮಾತಾನಾಡಿಸುವುದು, ಊಟಕ್ಕೆ ಏನಾದರೂ ಕೇಳಿದರೆ ಕೊಡುವುದು. ದಿನಗಳು ಕಳೆದವು ಒಂದು ದಿನ ನನ್ನ ತಂದೆ ತಾಯಿಗಳು ನನ್ನ ನೋಡಿ ಈ ದಿನ ನಮ್ಮ ಮನೆಗೆ ಊರಿನ ಶ್ರೀಮಂತ ಬರುತ್ತಾನೆ.

ಆಗ ನೀನು ಆತನೊಂದಿಗೆ ದೇಹ ಸಂಬಂಧವನ್ನು ಬೆಳಸಿಕೊಳ್ಳಬೇಕು ಎಂದಾಗ ನನಗೆ ಸಹಿಸಲಾಗದ ನೋವು, ಆ ನೋವು ಈಗಲೂ ಸಹ ನನ್ನನ್ನ ಕಾಡುತ್ತದೆ. ಅಲ್ಲಿಂದ ನನ್ನ ಜೀವನದಲ್ಲಿ ಹೊಸ ಅಧ್ಯಾಯ ಪ್ರಾರಂಭವಾಯಿತು. ಕೃಷಿ ಕೂಲಿಗೆ ಹೋದಾಗ ನನ್ನನು ಎಲ್ಲರೂ ಆತನ ಸೂಳೆ ಎಂದು ಹೇಳುತ್ತಿದ್ದರು. ಈ ಮಾತನ್ನು ಕೇಳಿ ನನಗೆ ತುಂಬ ಸಂಕಟವಾಗುತ್ತಿತ್ತು. ಒಟ್ಟು ನನಗೆ ೬ ಜನ ಗಂಡು ಮಕ್ಕಳು ನನ್ನ ತಂದೆ ತಾಯಿಗೆ ಹೆಣ್ಣು ಒಂದೇ ಇರುವುದನ್ನು ನೋಡಿ ನನ್ನನ್ನು ದೇವದಾಸಿಯಾಗಿ ಮಾಡಿದರು. ಆದರೆ ದೇವರು ನನಗೆ ಹೆಣ್ಣನ್ನು ಕೊಡಲಿಲ್ಲ. ಮನೆ ಮಂದಿ ಸಮುದಾಯದ ಜನತೆಯಲ್ಲಿ ಸಮಾನತೆ ಸಿಗುತ್ತಿದೆಯಾದರೂ ಸಮುದಾಯಗಳಲ್ಲಿ ಜಾತಿಯಿಂದ ಮತ್ತು ದೇವದಾಸಿ ಎಂಬ ಕಾರಣದಿಂದ ಕೀಳಾಗಿ ನೋಡುತ್ತಾರೆ. ಇಂತಹ ಅನೇಕ ಸಮಸ್ಯೆಗಳಿಂದ ಅಲ್ಲಿಂದ ಇಲ್ಲಿಯವರೆಗೂ ನನ್ನ ಮತ್ತು ಮಕ್ಕಳ ಜೀವನವನ್ನೂ ಕಾಪಾಡಿಕೊಂಡು ಬಂದಿದ್ದೇನೆ. ಆದರೆ ನನ್ನ ತಂದೆ ತಾಯಿಗಳನ್ನೂ ನಮ್ಮ ಅಣ್ಣ ತಮ್ಮಂದಿರುಗಳು ಹೇಗೆ ನೋಡಿಕೊಳ್ಳಲಿಲ್ಲವೋ ಹಾಗೆ ಮಕ್ಕಳು ನನ್ನನ್ನು ನೋಡಿಕೊಳ್ಳವುದು ಬಿಟ್ಟು ಮದುವೆಯಾದ ಮೇಲೆ ಅವರವರ ಕುಟುಂಬಗಳನ್ನು ನೋಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇದರಿಂದ ಕೊನೆಯ ಇಬ್ಬರು ಮಕ್ಕಳಿಗೆ ಮದುವೆ ಮಾಡಿಲ್ಲ. ಹಾಗಾಗಿ ಅವರು ನನ್ನ ಜೊತೆ ಇದ್ದಾರೆ. ಆದರೂ ಸಹಾ ನನ್ನ ಮಾತಿಗೆ ಯಾವುದೇ ಬೆಲೆ ಇಲ್ಲದಂತಾಗಿದೆ. ಈ ಜೀವನವು ಯಾವ ಹೆಣ್ಣಿಗೂ ಬರಬಾರದು ಎನಿಸಿದೆ.

೪೦ ವರ್ಷಗಳ ಕಾಲ ಯಾವುದೇ ರೀತಿಯ ಸಮಸ್ಯೆಗಳು ಕಾಣುತ್ತಿರಲಿಲ್ಲ. ನಂತರದ ದಿನಗಳಲ್ಲಿ ತಲೆ ನೋವು, ಕಾಲು ನೋವು ಬರುವುದು ಕಂಡುಬಂತು ಕೆಲಸ ಸ್ವಲ್ಪ ಕಡಿಮೆಯಾಗಿ ಮಾಡಲು ಪ್ರಾರಂಭಿಸಿದೆ. ಆಗ ಯಾವುದೇ ಕೃಷಿ ಕೆಲಸಕ್ಕೆ ಕರೆದುಕೊಂಡು ಹೋಗಲು ಮುಂದೆ ಬರಲಿಲ್ಲ. ಅಲ್ಲಿಂದ ನನಗೆ ಮನೆಯಲ್ಲಿ ಅಕ್ಕಿ, ಗೋಧಿ, ಜೋಳ, ಇತ್ಯಾದಿ ಕಾಳು ಕಡ್ಡಿಗಳನ್ನು ತರಲಿಕ್ಕೆ ಆಗಲಿಲ್ಲ ಇಂಥಹ ಸ್ಥಿತಿಯಲ್ಲಿ ಒಬ್ಬ ಯಜಮಾನನ ಮನೆಯಲ್ಲಿ ನನ್ನ ಹಿರಿಯ ಮಗ ಸಂಬಳ ದುಡಿಯುತ್ತಿದ್ದು. ಇತ್ತಿಚೀನ ಜೀವನ ತುಂಬಾ ಕಷ್ಟವಾಗಿದೆ.

ಸಮಾಜದಲ್ಲಿ ಒಳ್ಳೆಯವರಿಗೆ ಬೇಗ ಸಾವು ಬರುತ್ತದೆ. ಆದರೆ ನಾನು ಏನು ತಪ್ಪು ಮಾಡಿದ್ದೇನೋ, ಗೊತ್ತಿಲ್ಲ ನನಗೆ ಸಾವು ಬರವಲ್ಲದು, ನನ್ನ ಜೀವನ ಸರ್ಕಾರದಿಂದ ತಿಂಗಳಿಗೆ ಬರುವ ೧೫೦೦ ರೂಗಳಿಂದ ನಡೆಯುತ್ತಿದೆ. ಅದು ಬಂದಾಗ ಮಕ್ಕಳು ಎಲ್ಲರೂ ಯಾವುದೋ ಕಾರಣಗಳನ್ನು ಹೇಳಿ ತೆಗೆದುಕೊಂಡು ಹೋಗುತ್ತಾರೆ. ಆದರೆ ತಮ್ಮ ಹೆಂಡತಿಯರಿಗೆ ತಮ್ಮ ತಾಯಿಗೆ ಊಟ ಹಾಕ್ರಿ ಎಂದು ಯಾವತ್ತೂ ಹೇಳಿ ಹೋಗಲ್ಲ ಗೊತ್ತ, ನಾನು ಯಾವುದೇ ರೀತಿಯ ಹಣವನ್ನೂ ಹೊಂದಿಸಿಕೊಂಡಿಲ್ಲ. ಹಾಗೆ ಮಾಡದಿದ್ದರೆ ಎಲ್ಲರೂ ಚನ್ನಾಗಿ ನೋಡಿಕೊಳ್ಳುತ್ತಿದ್ದರು.

'ಖಂಡ ಇರುವವರೆಗೆ ಮಿಂಡ' ಎಂಬ ಗಾದೆ ಮಾತು ಸುಳ್ಳಲ್ಲ. ಅವಳು ಬೇಡ ಅವಳ ದೇಹ ಮಾತ್ರ ಬೇಕು ಎನ್ನುವರು, ಗರ್ಭಿಣಿಯಾದರೆ ನನಗೂ ಅವಳಿಗೂ ಸಂಬಂಧವಿಲ್ಲ ಎನ್ನುವರು.

ಅನಾರೋಗ್ಯದಿಂದ ನರಳುತ್ತಿರುವಾಗ ಅವಳಿಗೂ ನನಗೂ ಯಾವುದೇ ಸಂಬಂಧವಿಲ್ಲ ಎನ್ನುತ್ತಾರೆ. ಈ ರೀತಿಯಾಗಿ ದೇವದಾಸಿಯರ ಜೀವನವನ್ನೂ ವಿಂಗಡನೆ ಮಾಡುತ್ತಾರೆ. ಇಂತಹ ಜೀವನ ಬೇಕಾ? ತಂದೆ ತಾಯಿ ಮಾಡಿದ ತಪ್ಪಿಗಾಗಿ ನಾವು ನಮ್ಮ ಮಕ್ಕಳು ಎಷ್ಟು ನರಕಯಾತನೆ ಅನುಭವಿಸುತ್ತಿದ್ದೇವೆ. ದೇವದಾಸಿ ಮಕ್ಕಳನ್ನ ನೀವು ಏಕೆ ನಿಮ್ಮ ತಾಯಿಯನ್ನ ನೋಡಿಕೊಳ್ಳಲ್ಲವೆಂದು ಕೇಳಿದಾಗ ಅವರು ಹೇಳಿದ. ಉತ್ತರ ಸಮಾಜದಲ್ಲಿ ಆಕೆಯ ಜೊತೆ ಇದ್ದಾಗ ನಮ್ಮನ್ನು ಸೂಳೆಯ ಮಕ್ಕಳು ಎನ್ನುತ್ತಾರೆ. ಅದಕ್ಕಾಗಿ ನಾವು ಬೇರೆಯಾಗಿ ಜೀವನವನ್ನು ಮುಂದುವರೆಸುತ್ತೇವೆ. ಇದರ ಜೊತೆಗೆ ಸಮಾಜದ ಅನೇಕ ಎಲ್ಲಾ ಸೌಲಭ್ಯದಿಂದ ವಂಚಿತರಾಗಿ ಸಮಾಜಕ್ಕೆ ಪಾಪದ ಮಕ್ಕಳಾಗಿ ಪರಿವರ್ತನೆಯಾಗಿದ್ದೇವೆ.

ಯಂಕಮ್ಮ (ನಾಯಕ ಸಮುದಾಯ, ವಯಸ್ಸು-೫೫)

ಚಿಲುಗೊಂಡು ಗ್ರಾಮದ ದೇವದಾಸಿ ಮಹಿಳೆಯ ಯಂಕಮ್ಮ ಹೇಳಿದ ಮಾತು ಈ ರೀತಿಯಾಗಿದೆ, ನನ್ನ ಹೆಸರು ಯಂಕಮ್ಮ ನಮ್ಮ ತಾಯಿ ಹೆಸರು ಪಕ್ಕೀರಮ್ಮ, ನಮ್ಮ ತಾಯಿಗೆ ಮೂರು ಜನ ಹೆಣ್ಣು ಮಕ್ಕಳು. ಗಂಡು ಇಲ್ಲದ ಕಾರಣ ನಮ್ಮ ತಾಯಿಗೆ ನಮ್ಮನ್ನು ಸಾಕೋದು ಬಲು ಕಷ್ಟಕರ ವಿಷಯವಾಗಿತ್ತು. ನಿಮ್ಮ ಮಗಳನ್ನು ದೇವದಾಸಿಯಾಗಿ ಬಿಡು ಅವಳಿಂದ ಜನಿಸಿದ ಗಂಡು ಮಕ್ಕಳು ತಮ್ಮ ಕುಟುಂಬ ನಿರ್ವಹಣೆಗೆ ಮಾಡುತ್ತಾರೆ. ಎಂದು ಊರಿನ ಜನ ಹೇಳಿ ನನ್ನನ್ನು ದೇವದಾಸಿಯಾಗಿ ಮಾಡಿದರು. ಈ ಪದ್ದತಿಯಿಂದ ಪ್ರಾರಂಭದ ಜೀವನ ತುಂಬ ಚೆನ್ನಾಗಿತ್ತು. ಎಲ್ಲಾ ಕೆಲಸ ಕಾರ್ಯಗಳು ಸುಲಭವಾಗಿ ನಡೆದುಕೊಂಡು ಬರುತ್ತಿದ್ದವು. ಊರಿನ ಜನರ ಸಂಮುಖದಲ್ಲಿ ದೇವದಾಸಿ ಮುದ್ರೆ ಹಾಕಿತ್ತು. ಅವರು ನನ್ನ ಮನೆಗೆ ಬಂದು ತನ್ನ ಆಸೆ ಆಕಾಂಕ್ಷೆಗಳನ್ನೂ ಪೂರೈಸಿಕೊಂಡು ಕಾಳು ಕಡ್ಡಿಗಳನ್ನು ನೀಡುತ್ತಿದ್ದರು. ಇದು ಮೊದ ಮೊದಲು ಚನ್ನಾಗಿ ಕಂಡು ಬಂತು. ನನಗೆ ನನ್ನ ಆಸೆ ಆಕಾಂಕ್ಷೆಗಳಿಗೆ ಬೆಲೆ ಇಲ್ಲದೆ ಅವರ ಆಸೆಯನ್ನು ತೀರಿಸುವ ಒಂದು ಗೊಂಬೆಯಾಗಿ ನಿಂತಿದೆ. ಒಂದು ದಿನ ನನ್ನ ಬೇರೆ ವ್ಯಕ್ತಿ ನೀವು ನನ್ನ ಜೊತೆ ದೈಹಿಕ ಸಂಪರ್ಕದಿಂದ ಕೂಡಿದರೆ ಚೆನ್ನಾಗಿ ನೋಡಿಕೋಳ್ಳುತ್ತೇನೆ. ಆಗ ಜೀವನದಲ್ಲಿ ನನಗೆ ೩ ಜನ ಮಕ್ಕಳು ಮೊದಲನೆಯ ಮಗಳು ಯಾವುದೋ ಕಾಯಿಲೆಯಿಂದ ತೀರಿಕೊಂಡಳು. ನಂತರ ಜೀವನದಲ್ಲಿ ಹೊಸ ಅಧ್ಯಯನವೇ ಪ್ರಾರಂಭವಾಗಿ ಬಿಟ್ಟಿತು.

ತಾಯಿ ಸಂಪೂರ್ಣ ಮನೆಯಲ್ಲಿ ಕುಳಿತಳು, ಮನೆಯಲ್ಲಿ ಇರದೆ ಬೇರೆ ಯವರ ಕೃಷಿ ಕೂಲಿಯನ್ನೂ ಪ್ರಾರಂಭಿಸಿದೆ. ತಮ್ಮ ಸುಖವನ್ನು ಪಡೆದುಕೊಳ್ಳಲು ಬಂದರು. ಮುಂದೆ ನನಗೆ ಮತ್ತೆ ೩ ಜನ ಮಕ್ಕಳು, ಒಟ್ಟು ೬ ಜನರಲ್ಲಿ ೧ ಹೆಣ್ಣು ಮಗಳು ತೀರಿಕೊಂಡಳು. ೪ ಜನ ಗಂಡು ೧ ಹೆಣ್ಣು ಆಗ ನನಗೆ ೩೫ ರಿಂದ ೪೦ ವರ್ಷಗಳು ಆಗ ಮಕ್ಕಳು ಸಣ್ಣ ವಯಸ್ಸಿನವರು. ಮತ್ತೆ ಮನೆಗೆ ಬರುತ್ತಿದ್ದ ಕೆಲವರಲ್ಲಿ ನನ್ನ ಜೊತೆ ಯಾವುದೇ ಸಂಬಂಧವಿಲ್ಲದಾಗೆ ನೆಡೆದುಕೊಳ್ಳುತ್ತಿದ್ದರು. ಮನೆಯಲ್ಲಿ ವಿಪರೀತ ಬಡತನ ಕೂಲಿಯೇ ನನಗೆ ಗತಿ ಯಾರಿನಲ್ಲಿ ಇರುವ ಶ್ರೀಮಂತರ ಮನೆ ಕೂಲಿ ಕೆಲಸಕ್ಕೆ ಒಂದು

ಅನಾರೋಗ್ಯದಿಂದ ನರಳುತ್ತಿರುವಾಗ ಅವಳಿಗೂ ನನಗೂ ಯಾವುದೇ ಸಂಬಂಧವಿಲ್ಲ ಎನ್ನುತ್ತಾರೆ. ಈ ರೀತಿಯಾಗಿ ದೇವದಾಸಿಯರ ಜೀವನವನ್ನೂ ವಿಂಗಡನೆ ಮಾಡುತ್ತಾರೆ. ಇಂತಹ ಜೀವನ ಬೇಕಾ? ತಂದೆ ತಾಯಿ ಮಾಡಿದ ತಪ್ಪಿಗಾಗಿ ನಾವು ನಮ್ಮ ಮಕ್ಕಳು ಎಷ್ಟು ನರಕಯಾತನೆ ಅನುಭವಿಸುತ್ತಿದ್ದೇವೆ. ದೇವದಾಸಿ ಮಕ್ಕಳನ್ನ ನೀವು ಏಕೆ ನಿಮ್ಮ ತಾಯಿಯನ್ನ ನೋಡಿಕೊಳ್ಳಲ್ಲವೆಂದು ಕೇಳಿದಾಗ ಅವರು ಹೇಳಿದ. ಉತ್ತರ ಸಮಾಜದಲ್ಲಿ ಆಕೆಯ ಜೊತೆ ಇದ್ದಾಗ ನಮ್ಮನ್ನು ಸೂಳೆಯ ಮಕ್ಕಳು ಎನ್ನುತ್ತಾರೆ. ಅದಕ್ಕಾಗಿ ನಾವು ಬೇರೆಯಾಗಿ ಜೀವನವನ್ನು ಮುಂದುವರೆಸುತ್ತೇವೆ. ಇದರ ಜೊತೆಗೆ ಸಮಾಜದ ಅನೇಕ ಎಲ್ಲಾ ಸೌಲಭ್ಯದಿಂದ ವಂಚಿತರಾಗಿ ಸಮಾಜಕ್ಕೆ ಪಾಪದ ಮಕ್ಕಳಾಗಿ ಪರಿವರ್ತನೆಯಾಗಿದ್ದೇವೆ.

ಯಂಕಮ್ಮ (ನಾಯಕ ಸಮುದಾಯ, ವಯಸ್ಸು-೫೫)

ಚಿಲುಗೊಂಡು ಗ್ರಾಮದ ದೇವದಾಸಿ ಮಹಿಳೆಯ ಯಂಕಮ್ಮ ಹೇಳಿದ ಮಾತು ಈ ರೀತಿಯಾಗಿದೆ, ನನ್ನ ಹೆಸರು ಯಂಕಮ್ಮ ನಮ್ಮ ತಾಯಿ ಹೆಸರು ಪಕ್ಕೀರಮ್ಮ, ನಮ್ಮ ತಾಯಿಗೆ ಮೂರು ಜನ ಹೆಣ್ಣು ಮಕ್ಕಳು. ಗಂಡು ಇಲ್ಲದ ಕಾರಣ ನಮ್ಮ ತಾಯಿಗೆ ನಮ್ಮನ್ನು ಸಾಕೋದು ಬಲು ಕಷ್ಟಕರ ವಿಷಯವಾಗಿತ್ತು. ನಿಮ್ಮ ಮಗಳನ್ನು ದೇವದಾಸಿಯಾಗಿ ಬಿಡು ಅವಳಿಂದ ಜನಿಸಿದ ಗಂಡು ಮಕ್ಕಳು ತಮ್ಮ ಕುಟುಂಬ ನಿರ್ವಹಣೆಗೆ ಮಾಡುತ್ತಾರೆ. ಎಂದು ಊರಿನ ಜನ ಹೇಳಿ ನನ್ನನ್ನು ದೇವದಾಸಿಯಾಗಿ ಮಾಡಿದರು. ಈ ಪದ್ದತಿಯಿಂದ ಪ್ರಾರಂಭದ ಜೀವನ ತುಂಬ ಚೆನ್ನಾಗಿತ್ತು. ಎಲ್ಲಾ ಕೆಲಸ ಕಾರ್ಯಗಳು ಸುಲಭವಾಗಿ ನಡೆದುಕೊಂಡು ಬರುತ್ತಿದ್ದವು. ಊರಿನ ಜನರ ಸಂಮುಖದಲ್ಲಿ ದೇವದಾಸಿ ಮುದ್ರೆ ಹಾಕಿತ್ತು. ಅವರು ನನ್ನ ಮನೆಗೆ ಬಂದು ತನ್ನ ಆಸೆ ಆಕಾಂಕ್ಷೆಗಳನ್ನೂ ಪೂರೈಸಿಕೊಂಡು ಕಾಳು ಕಡ್ಡಿಗಳನ್ನು ನೀಡುತ್ತಿದ್ದರು. ಇದು ಮೊದ ಮೊದಲು ಚನ್ನಾಗಿ ಕಂಡು ಬಂತು. ನನಗೆ ನನ್ನ ಆಸೆ ಆಕಾಂಕ್ಷೆಗಳಿಗೆ ಬೆಲೆ ಇಲ್ಲದೆ ಅವರ ಆಸೆಯನ್ನು ತೀರಿಸುವ ಒಂದು ಗೊಂಬೆಯಾಗಿ ನಿಂತಿದೆ. ಒಂದು ದಿನ ನನ್ನ ಬೇರೆ ವ್ಯಕ್ತಿ ನೀವು ನನ್ನ ಜೊತೆ ದೈಹಿಕ ಸಂಪರ್ಕದಿಂದ ಕೂಡಿದರೆ ಚೆನ್ನಾಗಿ ನೋಡಿಕೋಳ್ಳುತ್ತೇನೆ. ಆಗ ಜೀವನದಲ್ಲಿ ನನಗೆ ೩ ಜನ ಮಕ್ಕಳು ಮೊದಲನೆಯ ಮಗಳು ಯಾವುದೋ ಕಾಯಿಲೆಯಿಂದ ತೀರಿಕೊಂಡಳು. ನಂತರ ಜೀವನದಲ್ಲಿ ಹೊಸ ಅಧ್ಯಯನವೇ ಪ್ರಾರಂಭವಾಗಿ ಬಿಟ್ಟಿತು.

ತಾಯಿ ಸಂಪೂರ್ಣ ಮನೆಯಲ್ಲಿ ಕುಳಿತಳು, ಮನೆಯಲ್ಲಿ ಇರದೆ ಬೇರೆ ಯವರ ಕೃಷಿ ಕೂಲಿಯನ್ನೂ ಪ್ರಾರಂಭಿಸಿದೆ. ತಮ್ಮ ಸುಖವನ್ನು ಪಡೆದುಕೊಳ್ಳಲು ಬಂದರು. ಮುಂದೆ ನನಗೆ ಮತ್ತೆ ೩ ಜನ ಮಕ್ಕಳು, ಒಟ್ಟು ೬ ಜನರಲ್ಲಿ ೧ ಹೆಣ್ಣು ಮಗಳು ತೀರಿಕೊಂಡಳು. ೪ ಜನ ಗಂಡು ೧ ಹೆಣ್ಣು ಆಗ ನನಗೆ ೩೫ ರಿಂದ ೪೦ ವರ್ಷಗಳು ಆಗ ಮಕ್ಕಳು ಸಣ್ಣ ವಯಸ್ಸಿನವರು. ಮತ್ತೆ ಮನೆಗೆ ಬರುತ್ತಿದ್ದ ಕೆಲವರಲ್ಲಿ ನನ್ನ ಜೊತೆ ಯಾವುದೇ ಸಂಬಂಧವಿಲ್ಲದಾಗೆ ನೆಡೆದುಕೊಳ್ಳುತ್ತಿದ್ದರು. ಮನೆಯಲ್ಲಿ ವಿಪರೀತ ಬಡತನ ಕೂಲಿಯೇ ನನಗೆ ಗತಿ ಯಾರಿನಲ್ಲಿ ಇರುವ ಶ್ರೀಮಂತರ ಮನೆ ಕೂಲಿ ಕೆಲಸಕ್ಕೆ ಒಂದು

ದಿನ ಬಿಡದೆ ಹೋಗುತ್ತಿದೆ. ಮಕ್ಕಳನ್ನು ಕರೆದುಕೊಂಡು ಹೋಗುತ್ತಿದ್ದೆ. ಅನೇಕ ರೀತಿಯ ಸಮಸ್ಯೆಯನ್ನು ಎದುರಿಸುತ್ತಾ ಜೀವನದುದ್ದಕ್ಕೂ ಸೂಳೆ ಎಂಬ ಪಟ್ಟಿಯನ್ನು ಕಟ್ಟಿಕೊಂಡು ಜೀವನ ನಡೆಸಬೇಕಾಯಿತು.

ಒಂದು ದಿನ ಪಂಚಾಯಿತ್ ಚುನಾವಣೆ ಪ್ರಾರಂಭವಾಗಿತ್ತು. ಅದರಲ್ಲಿ ಮಿಸಲಾತಿ ಅನುಗುಣವಾಗಿ ಸ್ಪರ್ಧಿಸುವ ವ್ಯಕ್ತಿಗಳನ್ನೂ ಉಡುಕುತ್ತಿದ್ದರು. ಊರಿನ ಮುಖಂಡರು ಸೇರಿ ಆ ಭಾಗದಲ್ಲಿರುವ ದೇವದಾಸಿಯ ರಾಜಕೀಯಕ್ಕೆ ಕರೆತರಲು ತಿರ್ಮಾನಿಸಿದರು. ಅದಕ್ಕೆ ಎಲ್ಲರೂ ಒಪ್ಪಿಗೆ ಸೂಚಿಸಿದರು. ಅವರು ಸೂಚಿಸಿದಂತೆ ನಾನು ಗೆದ್ದು ಪಂಚಾಯಿತಿಯ ಅಧ್ಯಕ್ಷೆಯಾಗಿದ್ದೆ. ಆಗ ಪಂಚಾಯಿತಿಗೆ ಬರುವ ಸೌಲಭ್ಯದಲ್ಲಿ ೮೦ ರಷ್ಟು ಅವರು ಪಡೆದುಕೊಂಡು. ನನಗೆ ೨೦ ರಷ್ಟು ಸೌಲಭ್ಯವನ್ನ ನೀಡುತ್ತಿದ್ದರು. ಆದರೆ ನಮಗೆ ಆ ೨೦ ರಷ್ಟು ಬರುತ್ತಿದೆಯಲ್ಲವೆಂದು ಸಂತೋಷ ಪಡುತ್ತಿದ್ದೆವು. ಸರ್ಕಾರಿ ಭೂಮಿಯೂ ನೀಡಿದರು ನನ್ನ ಮಕ್ಕಳಿಗೆ ಅವರು ಒಂದು ಒಂದು ಕೆಲಸ ವಯಿಸಿಕೊಟ್ಟರು ನನ್ನ ತಾಯಿಯ ಆಸ್ತಿಯಲ್ಲಿ ಅವರೆ ಗಂಗಕಲ್ಯಾಣ ಯೋಜನೆಯ ಅಡಿಯಲ್ಲಿ ಪಂಪ್‌ಸೆಟ್ ಹಾಕಿಸಿದರು. ಆಗ ಒಬ್ಬ ಮಗನನ್ನು ಕೃಷಿಗೆ ಬೇಕಾದ ಎಲ್ಲ ಸಾಮಾಗ್ರಿಗಳನ್ನು ನೀಡುತ್ತಿದ್ದರು.

ಪ್ರಾರಂಭದ ಜೀವನ ನಿರ್ವಹಣೆ ಕೂಲಿಯನ್ನು ಅವಲಂಬಿಸಿದ ಕೇವಲ ಅಕ್ಕಿ, ಗೋಧಿಗೆ ಕೆಲಸ ಮಾಡಬೇಕಿತ್ತು. ಕಾಲ ಕಳೆದಂತೆ ಜೀವನ ಬದಲಾವಣೆಯಾಯಿತು. ಈಗ ಒಬ್ಬ ಮಗ ಚನ್ನಾಗಿ ಓದಿ ಶಿಕ್ಷಕನಾಗಿದ್ದಾನೆ. ಇನ್ನೊಬ್ಬ ಮಗ ದಲ್ಲಾಳಿ ಅಂಗಡಿಯನ್ನು ನಡೆಸಿಕೊಂಡು ಹೋಗುತ್ತಿದ್ದಾನೆ. ಇಷ್ಟೆಲ್ಲಾ ಬದಲಾವಣೆಯಾದರು ಮಗಳನ್ನು ಮದುವೆ ಮಾಡಬೇಕು ಎಂದುಕೊಂಡಾಗ ಸಂಕಟ ಪ್ರಾರಂಭವಾಯಿತು. ಪ್ರತಿಯೊಬ್ಬರು ಈಕೆ ಸೋಳೆಯ ಮಗಳು ನನಗೆ ಬೇಡ, ನಿನಗೆ ಬೇಡ ಎಂದು ಅನೇಕ (ಸುಮಾರು ೧೯) ವರಗಳು ನೋಡಿದ್ದರು ಒಬ್ಬರೂ ಮದುವೆಯಾಗುವುದಕ್ಕೆ ಮಾಡಲಿಲ್ಲ ಕೊನೆಗೆ ಮಗಳನ್ನು ದೇವದಾಸಿಗೆ ಬಿಡು ಎಂದಾಗ ಮನಸ್ಸಿನಲ್ಲಿ ಏನೋ ನೋವು, ತಳಮಳ, ಮಗಳನ್ನು ದೇವದಾಸಿಯಾಗಿ ಮಾಡುವುದಿಲ್ಲ. ನೋವು ಸಂಕಟ ನನಗೆ ಮಾತ್ರ ಇರಲಿ. ನನ್ನ ಮಗಳಿಗೆ ಬೇಡ ಎಂದು ಹೇಗೋ ಒಂದು ವರ ಬಂತು ಎಷ್ಟೆ ವರದಕ್ಷಿಣೆಯಾಗಲಿ ಕೋಡುತ್ತಾನೆ. ಮದುವೆಯಾಗು ಎಂದು ಬೇಡಿಕೊಂಡಾಗ ಮದುವೆ ಮಾಡಿಕೊಂಡರು. (ವರದಕ್ಷಿಣೆ ೨ ಲಕ್ಷ ೫ ತೊಲೆ ಬಂಗಾರ) ಹೀಗೆ ಜೀವನದಲ್ಲಿ ಇನ್ನು ಅನೇಕ ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದ್ದೇನೆ.

ಹನುಮಕ್ಕ, ಹಂಪಾಪಟ್ಟಣ (ಗಂಗಾಮತ, ವಯಸ್ಸು-೪೮)

ಹಂಪಾಪಟ್ಟಣದ ಹನುಮಕ್ಕ ಅವರು ಹೇಳಿದ ತಮ್ಮ ಜೀವನದ ಕಹಿ ಅನುಭವವೆಂದರೆ, ನನಗೆ ೬ ವರ್ಷ ಇದ್ದಾಗಲೇ ತಾಯಿ ಹುಲಿಗೆಮ್ಮನಿಗೆ ಮುತ್ತು ಕಟ್ಟಿಸಲಾಯಿತು. ತಂದೆ-ತಾಯಿಗೆ ಗಂಡು ಇದ್ದರೂ ಸಹ ಮನೆಯಲ್ಲಿ ಯಾವುದೋ ರೋಗಗಳು, ಸಮಸ್ಯೆಗಳು, ಕಾಡಾಟಗಳು ಕಾಣಿಸಿದ್ದವಂತೆ ಅದಕ್ಕಾಗಿ ಮನೆ ದೇವರು ಹುಲಿಗೆಮ್ಮನಿಗೆ ಹರಕೆ ಹೊತ್ತುಕೊಂಡು, ನನ್ನ ದೇವದಾಸಿಯಾಗಿ ಮಾಡಿದ್ದಾರೆ. ಮೈಮೇಲೆ ಹೊಸ ಬಟ್ಟೆ, ಕೈಯಲ್ಲಿ ಬಳೆ, ತಲೆಯಲ್ಲಿ ಹೊವುಗಳು ತುಂಬಾ ಸಂತೋಷದಿಂದ

ತಾಯಿಯ ಸಾನಿಧ್ಯದಲ್ಲಿ ಎಲ್ಲಾ ನಿಯಮಾನುಸಾರವಾಗಿ ಕಾರ್ಯಗತಗೊಳಿಸಿದರು. ಇಲ್ಲಿಂದ ನನಗೆ ಋತುಮಾತಿಯಾಗುವವರೆಗೂ ಯಾವುದೇ ಸಮಸ್ಯೆಗಳು, ನಿರ್ಭಂಧಗಳು ಕಾಣಲಿಲ್ಲ. ಋತುಮಾತಿಯಾದ ಮೇಲೆ ಊರಿನ ಶ್ರೀಮಂತರು(ಮೇಲ್ಜಾದವರು), ಚಾಣಕ್ಯತನದಿಂದ ಕೂಡಿದ ವ್ಯಕ್ತಿಗಳ ಪೈಟೋಟಿ ನೆಡೆಯುತ್ತಿತ್ತು. ಆಗ ನಾನು ಯಾವುದೇ ಅರಿವು ಇಲ್ಲದೆ ಎಲ್ಲಾರ ಜೊತೆಯಲ್ಲಿ ಮಾತಿನ ಚಕಮಕಿಯಿಂದ ಕೂಡಿರುತ್ತಿದ್ದೆ. ಒಂದು ದಿನ ನನ್ನ ಗೆಳತಿಯೊಬ್ಬಳು ಬಂದು ನೀನು ದೇವದಾಸಿಯಂತೆ, ನಿನ್ನನ್ನು ಯಾರಾದರೂ ಇಷ್ಟ ಪಡಬಹುದಂತೆ, ನೀನು ಯಾರ ಜೊತೆಗಾದರು ನಿನ್ನ ದೇಹ ಸಂಬಂಧವನ್ನು ಇಟ್ಟಕೊಳ್ಳಬಹುದಂತೆ, ಎಂದಾಗ ಮನದಲ್ಲಿ ಭಯದ ವಾತಾವರಣ ಅದೇ ಭಯದಿಂದ ಮನೆಗೆ ಬಂದು ನನ್ನ ಅವ್ವನನ್ನು ಕೇಳಿದೆ. ತಾಯಿ(ಅವ್ವ) ನಾನು ದೇವದಾಸಿನಾ? ಎಂದಾಗ ನಮ್ಮ ತಾಯಿ ಎಲ್ಲಾ ಮಾಹಿತಿಯನ್ನು ವಿವರಿಸಿದಳು. ಆಗ ನನ್ನನ್ನು ನೋಡುವ ಜನರ ದೃಷ್ಟಿ ಬದಲಾಯಿತು. ಮತ್ತೆ ನನ್ನ ದೃಷ್ಟಿಯು ಸಹ ಬದಲಾವಣೆಯಾಗಿತ್ತು. ಯಾರ ಜೊತೆ ಸಂಪರ್ಕವಿಲ್ಲದೆ ನನ್ನ ಮನೆ, ನನ್ನ ಕೆಲಸವೆಂದು ನನ್ನಪಾಡಿಗೆ ನಾನು ಇದ್ದೆ. ಒಂದು ದಿನ ಊರಿನ ಶ್ರೀಮಂತನೊಂದಿಗೆ ಮೊದಲ ರಾತ್ರಿಯಾಯಿತು. ಆಗ ಆತ ಪ್ರಾರಂಭದಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಿದ್ದನು.

ಕಾಲ ಕಳೆದಂತೆ ಗರ್ಭಣಿ ಆದಾಗ ಆ ಶ್ರೀಮಂತ ಆಕೆಗೂ ನನಗೂ ಯಾವುದೇ ಸಂಬಂಧವಿಲ್ಲ ಎಂದು ಕೊಂಡು, ಯಾವುದೇ ಕಾರ್ಯದಲ್ಲಿ ಅಂದರೆ ಹೆರಿಗೆ ಸಮಯದಲ್ಲಿ ಹಣದ ಸಹಾಯ ಮಾಡಲಿಲ್ಲ. ಅದನ್ನೆಲ್ಲ ನನ್ನ ಅಣ್ಣ-ತಮ್ಮದಿಂರು ನೋಡಿಕೊಂಡರು. ಮತ್ತೆ ಮನೆಯಲ್ಲಿ ಅಣ್ಣ-ತಮ್ಮರ ಮದುವೆ ಮಾಡಲಿಕ್ಕೆ ಅಣಿಯಾಯಿತು. ಮದುವೆಯಲ್ಲಿ ಬಂದ ಸಂಬಂಧಿಕರು ಈಕೆ ದೇವದಾಸಿ..... ಈಕೆ ದೇವದಾಸಿ..... ಎಂದು ಗೇಲಿ ಮಾಡಿ ತಮ್ಮ ತಮ್ಮಲ್ಲಿ ಪಿಸು ನಗುತ್ತಿದ್ದರು. ನಿಜವಾದ ಜೀವನ ಪ್ರಾರಂಭವಾಗಿದ್ದೇ ಇಲ್ಲಿಂದ, ಏಕೆಂದರೆ ಮದುವೆ ನಂತರ ಅಣ್ಣ ತಮ್ಮಂದಿರು ನನ್ನನ್ನು ಮನೆಯಿಂದ ಆಚೆಯಾಕಿ ತಮ್ಮ ತಮ್ಮ ಜೀವನ ನೋಡಿಕೊಳ್ಳಲಿಕ್ಕೆ ಪ್ರಾರಂಭಿಸಿದರು. ನಾಗು ಒಂದು ಮಗು ಇಟ್ಟುಕೊಂಡು ದಿನಗೂಲಿ ಪ್ರಾರಂಭಿಸಿದೆ. ಆ ಕಾಲದಲ್ಲಿ ದಿನಕ್ಕೆ ೧೫ ರೂ ಗಳಂತೆ ನೀಡುತ್ತಿದ್ದರು. ಆಗ ಮೊತ್ತಬ್ಬ ವ್ಯಕ್ತಿ ನನ್ನ ಸಮುದಾಯದವನೇ ನನ್ನನ್ನು ನೋಡಿಕೊಳ್ಳಲಿಕ್ಕೆ ಪ್ರಾರಂಭಿಸಿದ. ಆತನಿಗೆ ಜನಿಸಿದ ಮಕ್ಕಳು ಎರಡು ಜನ. ಆತನ ಹೊಲಕ್ಕೆ ದಿನಗೂಲಿಯಾಗಿ ದಿನಾಲೂ ಹೋಗುತ್ತಿದ್ದೆ. ಇದು ಸಹ ಕೇವಲೇ ವರ್ಷದಲ್ಲಿ ಇಬ್ಬರ ಸಂಬಂಧವೂ ಅಂತ್ಯವಾಯಿತು. ಆಗ ಮಕ್ಕಳು ಸಣ್ಣವರು ತುಂಬಾ ಕಷ್ಟಕರ ಜೀವನ ಇತ್ತು. ಮನೆಯಲ್ಲಿರುವ ತಂದೆ-ತಾಯಿ ವಯಸ್ಸಾದವರು. ಅಣ್ಣ-ತಮ್ಮ ಅವರದೇ ಕುಟುಂಬದಲ್ಲಿ ತೊಡಗಿಕೊಂಡಿದ್ದರು. ಆಗ ಕಡು ಬಡತನ, ಕಷ್ಟ ಕಾರ್ಪಣ್ಯಗಳನ್ನು ಎದರಿಸುತ್ತಾ ಜೀವನ ನಡೆಸೊಕೊಂಡು ಬಂದಿದ್ದಾನೆ.

ಮಕ್ಕಳು ವಯಸ್ಸಿಗೆ ಬರುವವರೆಗೂ ಜೀವನ ತುಂಬಾ ಕಷ್ಟಕರವಾಗಿತ್ತು. ಅನೇಕ ಜನ ನನ್ನ ಜೀವನ ನೋಡಿ ಅಯ್ಯೋ ಪಾಪ, ಅಯ್ಯೋ ಯಾವ ಜನ್ಮದಲ್ಲಿ ಪುಣ್ಯ ಮಾಡಿಲ್ಲೋ ಗೊತ್ತಿಲ್ಲ

ಆದರೆ ಈ ಜನ್ಮದಲ್ಲಿ ಪಾಪ ಮಾಡಿದ್ದಾಳೆ ಎಂದುವರೂ ಎಷ್ಟೋ ಜನ ಸಿಗುತ್ತಾರೆ ಈ ಊರಲ್ಲಿ. ಆದರೆ ಜನ ಎಲ್ಲಾ ಕಣ್ಣಿಂದ ನೋಡಿದರೇ ವಿನಹ ಯಾರೂ ಸಹ ಮುಂದೆ ಬಂದು ಸಹಾಯ ಮಾಡಲಿಲ್ಲ, ಏಕೆಂದರೆ ದೇವದಾಸಿ ಎಂಬ ಕಾರಣಕ್ಕಾಗಿ(ಒಬ್ಬರಿಗೆ ಇರಲ್ಲಿಲಾ, ಹಬ್ಬ ಮಾಡಲಿಲ್ಲ ಎಂಬ ಗಾದೆಯಂತೆ ಜನ ನನ್ನ ಆಡಿಕೊಂಡರು) ಎಂದು ಆಡಿಕೊಳ್ಳವರು ಜಾಸ್ತಿ ಜನ ಸಿಗುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ನನ್ನ ಜೀವನ ಸ್ವಲ್ಪಮಟ್ಟಗೆ ಬದಲಾವಣೆಯಾಗಿದೆ. ಏಕೆಂದರೆ ಮಕ್ಕಳು ದುಡಿಯುತ್ತಾರೆ ಮತ್ತು ನನಗೆ ಸರ್ಕಾರದಿಂದ ತಿಂಗಳಿಗೆ ಮಾಶಾಸನ ಬರುತ್ತಿದೆ. ಅದಕ್ಕಾಗಿ ಜೀವನ ಸ್ವಲ್ಪಮಟ್ಟಿಗೆ ಸುಧಾರಿಸಿದೆ.

ಈ ಆಧುನಿಕ ಸಮಾಜದಲ್ಲಿ ಯಾರಾದರೂ ಮತ್ತೆ ದೇವದಾಸಿಯಾನ್ನಾಗಿ ಮಾಡುತ್ತೇವೆ ಎಂದು ತಿಳಿದು ಬಂದರೆ, ಅಂತವರಿಗೆ ನಾನೇ ಹೋಗಿ, ಜೀವನದ ಎಲ್ಲಾ ಕಷ್ಟಗಳು ಮತು ಸಮಾಜ ನೋಡುವ ದೃಷ್ಟಿ ಸವಿಸ್ತರವಾಗಿ ತಿಳಿಸುತ್ತೇನೆ. ಇದು ಸಮಾಜದಲ್ಲಿ ಅತ್ಯಂತ ಅನಿಷ್ಟ ಪದ್ದತಿಯಾಗಿದೆ. ಇದನ್ನು ಸಮಾಜದ ಜನರು ಮತ್ತು ಜನ ಪ್ರತಿನಿಧಿಗಳು ಈ ಪದ್ದತಿಯನ್ನು ಸಂಪೂರ್ಣ ನಿರ್ಮೂಲನೆ ಮಾಡಬೇಕು ಎಂದು ತಿಳಿಸುತ್ತೇನೆ. ದೇವದಾಸಿ ಪದ್ದತಿಯು ಸಮಾಜದಲ್ಲಿರುವ ಮೂಢನಂಬಿಕೆಯಲ್ಲಿ ಅತ್ಯಂತ ಕೆಟ್ಟ ಮೂಢನಂಬಿಕೆಯಾಗಿ ಹೊರ ಬಂದಿದೆ. ಇದನ್ನು ನಿಮ್ಮಂತಹ ಎಲ್ಲಾ ವಿದ್ಯಾವಂತ ಯುವಕರು ಸೇರಿಕೊಂಡು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕು ಎಂದು ತಮ್ಮ ಅಂತರಂಗದ ನುಡಿಯನ್ನು ನುಡಿದಿದ್ದಾರೆ.

೫.೬.೩ ದೇವದಾಸಿ ಮಹಿಳೆಯರ ಕೊನೆಯ ಜೀವನ

ದೇವದಾಸಿಯರ ನಿಜವಾದ ಬದುಕು ಪ್ರಾರಂಭವಾಗುವುದು ಅವಳ ಕೊರಳಿಗೆ ಮುತ್ತು ಕಟ್ಟುವುದರ ಮೂಲಕ ಅಥವಾ ಮುದ್ರೆ ಹಾಕಿದಾಗ. ಗುಡಿಯಲ್ಲಿ ಅಥವಾ ದೇವರ ಹೆಸರಿನಲ್ಲಿ ತಿಳಿದೋ ಅಥವಾ ತಿಳಿಯದೇ ಈ ಅನಿಷ್ಟ ಪದ್ದತಿಯನ್ನು ಊರಿನಲ್ಲಿ ಎಲ್ಲರೂ ಸೇರಿಕೊಂಡು ಅಣೆ ಪಟ್ಟಿಯನ್ನು ಕೊರಳಿಗೆ ನೇತು ಹಾಕುತ್ತಾರೆ. ಇಲ್ಲಿಂದ ಜೀವನ ದೇವರ ಹೆಸರಿನಿಂದ ಮತ್ತು ಊರಿನ ಮಗಳು ದೇವರದಾಸಿ ಎಂದು ಪೂಜೆ, ಕಾರ್ಯಕ್ರಮಗಳಲ್ಲಿ ಪ್ರತಿನಿದ್ಯತೆ, ಸಹಾಯ ಸೌಕರ್ಯ ಮೌಲ್ಯಗಳನ್ನೂ ನೀಡಿ ಬೆಳೆಸುವುದು. ಈ ದೇವರು (ಸಾಹುಕಾರ). ಅಂದರೆ ಯಜಮಾನ ಆ ದಾಸಿಗೆ ಬೇಕಾದ ವಸ್ತುಗಳನ್ನು ನೀಡಿ ಅವಳನ್ನು ಮನವಲಿಸಿಕೊಂಡು ದೇಹ ಸುಖ ಅನುಭವಿಸಿ ಅವಳಿಂದ ಜನಿಸಿದ ಮಕ್ಕಳಿಗೆ ತಂದೆಯಾಗಿ, ಬೇಡವಾದಾಗ ಊರಿನ ಯಜಮಾನ(ಶ್ರೀಮಂತ)ನಾಗಿ ತನ್ನ ದರ್ಪದಿಂದ ಆಡಳಿತ ಮಾಡುತ್ತಾ ಹೋಗುವುದು. ಇದು ದೇವದಾಸಿಗೆ ಮೊದ ಮೊದಲು ಕಷ್ಟವೆನಿಸುವುದಿಲ್ಲ. ಬೇಡವೆಂದವನು ನನ್ನನ್ನು ಇನ್ನೊಬ್ಬ ಬಯಸಿದಂತೆ ಸರಿ ಎಂದುಕೊಂಡು ಸಿಕ್ಕ ಸಿಕ್ಕವರ ಜೊತೆಗೆ ದೇಹ ಸಂಬಂಧವನ್ನು ಇಟ್ಟುಕೊಂಡಿರುತ್ತಾರೆ. ಮನೆತನ ನಿರ್ವಹಣೆಗಾಗಿ ಅನಿವಾರ್ಯವಾಗಿ ಇಂತಹ ಕೆಲಸ ಮಾಡುತ್ತಾ ಬಂದಿರುವುದು. ತಮ್ಮ ಮನೆ ತುಂಬಾ ಮಕ್ಕಳು ಇರಲಿ ಎಂಬ ಆತಿ ಆಸೆಯಿಂದ

ಆ ಯಾವುದೋ ಮಾತಿಗೆ ಅನೇಕ ಮಕ್ಕಳಿಗೆ ತಾಯಿಯಾಗುತ್ತಾ ಅನೈತಿಕ ಸಂಬಂಧವನ್ನು ಇಟ್ಟುಕೊಂಡು. ೧೫ ರಿಂದ ೫೦ ವರ್ಷದವರೆಗೆ ಯಾವುದೇ ಸಮಸ್ಯೆಗಳಿಗೆ ಎದೆ ಹೊಡೆಯದೆ ಜೀವನ ನಿರ್ವಹಣೆ ಮಾಡುತ್ತಾರೆ. ನಂತರ ದಿನಗಳಲ್ಲಿ ಮಕ್ಕಳು ಸಮಾಜದಲ್ಲಿ ಸ್ವಾತಂತ್ರ್ಯವಾಗಿ ಬದುಕಲು ಸಮಾಜ ಬಿಡುವುದಿಲ್ಲ ಅವರಿಗೆ ಸೂಳೆಯ ಮಕ್ಕಳು ಯಾವುದೇ ರೀತಿಯ ಗೌರವ ನೀಡದಿರುವುದು ಇದು ಎಲ್ಲೋ ಮನಸ್ಸಿನಲ್ಲಿ ಆಳವಾಗಿ ಮಕ್ಕಳಲ್ಲಿ ಬೇರುರುತ್ತಾದೆ. ಆದ್ದರಿಂದ ಸಮಾಜದಲ್ಲಿ ತಮ್ಮ ತಾಯಿಯನ್ನು ಅಗೌರವದಿಂದ ವಲ್ಲದ ಮನಸ್ಸಿನಿಂದ ನೋಡಿಕೊಳ್ಳಲು ಮತ್ತು ಒಂದು ದಿನ ಮನೆಯಿಂದ ತಾವೇ ಹೊರ ಹೋಗುತ್ತಾರೆ.

ಕೊನೆಗೆ ೬೦ ವರ್ಷದ ನಂತರ ಇವರಿಗೆ ದೇವಸ್ಥಾನಗಳು, ಸಮುದಾಯ ಭವನ, ಪಟ್ಟಣಗಳಲ್ಲಿನ ಬಸ್ಸು ನಿಲ್ದಾಣಗಳು, ಹುಲಿಗೆಮ್ಮ ದೇವಸ್ಥಾನ, ಯಲ್ಲಮ್ಮ ದೇವಸ್ಥಾನಗಳು ಇವರಿಗೆ ಕೊನೆಯ ಕ್ಷಣಗಳಲ್ಲಿ ಮೂಲ ಸ್ಥಾನವಾಗಿ ಪರಿವರ್ತನೆಯಾಗುತ್ತವೆ.

ದೇವದಾಸಿಯರ ಮಕ್ಕಳ ಅಂತರಾಳದ ಮಾತು

ದೇವದಾಸಿಯರ ಮಕ್ಕಳನ್ನು ಮಾತನಾಡಿಸಿದಾಗ ನಾವು ಪಾಪದ ಮಕ್ಕಳು. ಅಧುನಿಕ ಸಮಾಜದಲ್ಲಿ ಎಲ್ಲ ಸೌಲಭ್ಯವನ್ನು ಪಡೆದುಕೊಂಡು ಉನ್ನತ ಸ್ಥಾನದಲ್ಲಿರಲಿಲ್ಲ. ಸಮಾಜದಲ್ಲಿ ನೀಡುವ ಮೊದಲು ಅದ್ಯೆತೆಯೇ ಸೂಳೆ, ದೇವದಾಸಿ ಮಕ್ಕಳು. ಇಲ್ಲಿಯವರೆಗೂ ನಮಗೆ ನಿರ್ದಿಷ್ಟ ತಂದೆ ಇಲ್ಲದಿರಬಹುದು ಆದರೆ ನಿರ್ದಿಷ್ಟ ಬದುಕು ಇದೆ. ಸಮಾಜದಲ್ಲಿ ಸಂವಿಧಾನ ಬದ್ದವಾಗಿ ಸಿಗಬೇಕಾದ ಎಲ್ಲ ಮೂಲ ಸೌಕರ್ಯಗಳು ಎಲ್ಲರಿಗೂ ಯಾವ ರೀತಿಯಲ್ಲಿ ಸಿಗುತ್ತಾದೆಯೋ ಅದೇ ರೀತಿಯಲ್ಲಿ ನಮಗೆ ಸಿಗುತ್ತದೆ. ಆದರೆ ಹಿಂದುಳಿದ ಜನ ಸಮುದಾಯ ಎಂದು ಶೇ. ೨೧ರಷ್ಟು ಜಾಸ್ತಿ ಸೌಲಭ್ಯಗಳು ಸಿಗುತ್ತದೆ.

ಹೆಸರು ಬದಲಾಯಿಸಿ ಗೌರಮ್ಮ (ನಾಯಕ ಸಮುದಾಯ, ವಯಸ್ಸು –೨೮, ಶಿಕ್ಷಣ–ಬಿ.ಎ., ಬಿ.ಇಡಿ)

ಚಿಲುಗೋಡು ಗ್ರಾಮದ ದೇವದಾಸಿ ಸಾಕಮ್ಮಳ ಮಗಳಾದ ಹೆಸರು ಬದಲಾಯಿಸಿ ಗೌರಮ್ಮ ವಿದ್ಯಾವಂತ ಹೆಣ್ಣುಮಗಳು ಇವರು ತಮ್ಮ ತಾಯಿ ದೇವದಾಸಿ ಪದ್ದತಿಗೆ ಒಳಗಾದ ಸ್ಥಿತಿಯನ್ನು ಮತ್ತು ದೇವದಾಸಿ ಮಗಳು ಎಂಬ ಕಾರಣಕ್ಕೆ ತಾನು ಸಮಾಜದಲ್ಲಿ ನಿತ್ಯ ಅನುಭವಿಸುತ್ತಿರುವ ಸಂಕಟವನ್ನು ಹೇಳಿದ ರೀತಿಯನ್ನು ಈ ಕೆಳಗಿನಂತೆ ತಿಳಿಸುತ್ತಿದ್ದೇನೆ.

ಸಮಾಜದಲ್ಲಿ ಪ್ರತಿಯೊಬ್ಬರಿಗೂ ಅವರದೇಯಾದ ಜಾತಿ, ಧರ್ಮ, ಜನಾಂಗ ಮತ್ತು ಆಚರಣೆ, ಪದ್ದತಿ ಕಂಡು ಬರುತ್ತದೆ. ಮನುಷ್ಯ ಯಾವಗಲೂ ಸಂಘಜೀವಿ ಎಂದು ಕರೆದಿದ್ದಾರೆ. ಆದರೆ ಅದು ಕೇವಲ ಕೆಲವೇ ಜನರಿಗೆ ಸೀಮಿತವಾಗಿದೆ. ಧಾರ್ಮಿಕ ಆಚರಣೆಗಳನ್ನು ಅಂದಿನದಿಂದಲೂ ಇಂದಿನವರೆಗೂ ಅತ್ಯಂತ ಪ್ರಬಲವಾಗಿ ಆಚರಣೆ ಮಾಡುತ್ತಾ ಬಂದಿದ್ದಾರೆ. ಇದರ ಜೊತೆಗೆ ಒಂದೂಂದು ಕೆಟ್ಟ ಪದ್ದತಿಯನ್ನೂ ಅನುಸರಿಸುತ್ತಾ ಬಂದಿದ್ದಾರೆ. ಆ ಅನಿಷ್ಟ ಪದ್ದತಿಯಲ್ಲಿ ದೇವದಾಸಿ

ಪದ್ಧತಿ ಒಂದು. ನನ್ನ ತಾಯಿಗೆ ಅಥವಾ ಅವರ ತಾಯಿ–ತಂದೆಗಳಿಗೆ ಅರಿವು ಇಲ್ಲದೆ ಈ ಅನಿಷ್ಟವನ್ನು ನನ್ನ ತಾಯಿಯ ಮೇಲೆ ಹಾಕಿದ್ದಾರೆ. ಇದರಿಂದ ಜನಸಿದ ನಾವುಗಳು ದೊಡ್ಡ ಕಳಂಕಿತರಾಗಿ ಸಮಾಜದಲ್ಲಿ ಜೀವನ ನೆಡೆಸಬೇಕಾಗಿದೆ. ಏಕೆಂದರೆ ಇದು ನನ್ನ ಒಬ್ಬಳ ನೋವು ಅಲ್ಲ, ಸಮಾಜದಲ್ಲಿ ಈ ಪದ್ಧತಿಯಿಂದ ಜನಿಸಿದ ಎಲ್ಲಾ ಮಕ್ಕಳ ನೋವು, ನಾವು ಎಷ್ಟೇ ಶಿಕ್ಷಣವಂತರಾದರೂ, ಶ್ರೀಮಂತರಾದರೂ ಸಮಾಜದಲ್ಲಿ ಅತ್ಯಂತ ಕಳಪೆ ಮಟ್ಟದಲ್ಲಿ ಜೀವನ ನಡೆಸುತ್ತಿದ್ದೇವೆ. ಆದರೆ ಈ ಸಮಾಜ ನೋಡುವ ದೃಷ್ಟಿಕೋನವೇ ಬೇರೆ. ಜೀವನದ ಪ್ರತಿಯೊಂದು ಕಾರ್ಯದಲ್ಲಿ ನಮ್ಮನ್ನು ವಸ್ತುಗಳಾಗಿ ಉಪಯೋಗಿಸುತ್ತಾರೆ. ಆದರೆ ಯಾರೂ ಸಹ ವ್ಯಕ್ತಿಯಾಗಿ, ಒಬ್ಬ ಸಂಬಂಧಿಯಾಗಿ ಮತ್ತು ಹೆಣ್ಣಾಗಿ ನಮ್ಮನ್ನ ನೋಡುವುದಿಲ್ಲ. ನಮ್ಮ ಅಣ್ಣ–ತಮ್ಮರ ಮದುವೆಯಾಗಿ ೩ ರಿಂದ ೫ ವರ್ಷವಾದರು ಸಹ ನನ್ನ ಮದುವೆಯ ಬಗ್ಗೆ ಯಾರೂ ತಲೆ ಹಾಕುತ್ತಿಲ್ಲ. ಏಕೆಂದರೆ ನಮ್ಮ ಮನೆತನದ ಹಿನ್ನೆಲೆಯಿಂದ ನನ್ನನ್ನು ಸಹ ದೇವದಾಸಿ ಎನ್ನುವ ದೃಷ್ಟಿಯಿಂದ ನೋಡುತ್ತಾರೆಯೇ ವಿನಹ ಯಾರೂ ಮದುವೆ ಯಾಗಲು ಮುಂದೆ ಬರುತ್ತಿಲ್ಲ. ಸಮಾಜದಲ್ಲಿ ಯಾವುದೇ ಕೆಟ್ಟ ಕೆಲಸ ಮಾಡಿಲ್ಲವಾದರೂ ಈ ಶಿಕ್ಷೆ ಅನುಭವಿಸುತ್ತಿದ್ದೇನೆ. ಆ ದೇವರು ನನ್ನ ಪಾಲಿಗೆ ಯಾವಾಗ ಒಳ್ಳೆಯದು ಮಾಡುತ್ತಾನೋ ನೋಡಣ.....

ಈಗಾಗಲೇ ನಮ್ಮ ಮನೆಯ ಸುತ್ತಮುತ್ತಾ ವಾತವರಣ ಬದಲಾವಣೆಯಾಗಿ ಕಂಡು ಬರುತ್ತಿದೆ. ನನ್ನನ್ನು ನನ್ನ ತಾಯಿಯ ಪಟ್ಟಕ್ಕೆ ಕೂರಿಸುವಂತಹ ಕೆಲಸ ಬಹಳ ಜೋರಾಗಿ ನಡೆಯುತ್ತಿದೆ. ಆದರೆ ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ. ನನಗೂ ಒಬ್ಬ ಗಂಡು ಇದ್ದೇ ಇರುತ್ತಾನೆ ಎಂಬ ಭರವಸೆಯಿಂದ ಕುಳಿತ್ತಿದ್ದೇನೆ. ಮತ್ತೆ ಶಿಕ್ಷಣದಿಂದ ಯಾವುದಾರೂ ಸರ್ಕಾರಿ ನೌಕರಿಯನ್ನು ಪಡೆದುಕೊಂಡು ಸ್ವತಂತ್ರ ವಾಗಿ ಬದುಕಬಹುದು ಎಂಬ ನಿರೀಕ್ಷೆಯಲ್ಲಿ ಹಗಲು–ರಾತ್ರಿ ಎನ್ನದೇ ಅಭ್ಯಾಸ ಮಾಡುತ್ತಿದ್ದೇನೆ. ಪ್ರೀತಿಯೆಂದರೆ ನನಗೆ ನಗು ಬರುತ್ತದೆ ಏಕೆಂದರೆ ಪ್ರೀತಿಗೆ ಕಣ್ಣು ಇಲ್ಲ ಅಂತರೇ. ಅದೇ ರೀತಿಯಲ್ಲಿ ಮೊದ ಮೊದಲು ಪ್ರೀತಿ ಪ್ರಾರಂಭವಾಗುತ್ತದೆ. ಅಂಕಪಟ್ಟಿಯನ್ನು ನೋಡಿದಾಗ ಅಥವಾ ಯಾರೊದೋ ಬಾಯಿಯಿಂದ ಈಕೆ ದೇವದಾಸಿ ಮಗಳು ಎಂದೂ ಗೊತ್ತಾಗುತ್ತದೆಯೋ ಅಂದಿನಿಂದ ಪ್ರೀತಿಯಿಲ್ಲ–ಪ್ರೇಮಯಿಲ್ಲ ಎನ್ನವಂತಾಗುತ್ತದೆ ಈ ಜೀವಕ್ಕೆ.

ಯಾರಾದರೂ ವಿದ್ಯವಂತರು, ಮೂಢನಂಬಿಕೆಗಳ ವಿರುದ್ಧ ಹೋರಾಡುವಂತಹ ವ್ಯಕ್ತಿಗಳು ನಮ್ಮನ್ನ ಮದುವೆ ಮಾಡಿಕೊಳ್ಳಲಿಕ್ಕೆ ಮುಂದೆ ಬರಬಹುದು ಎಂಬ ನಿರೀಕ್ಷೆಯಲ್ಲಿ ಕುಂತ್ತಿದ್ದೆನೆ. ಸರ್ಕಾರವು ಇಂತಹ ಅನಿಷ್ಟ ಪದ್ಧತಿಗಳನ್ನು ಬುಡಸಮೇತವಾಗಿ ಕಿತ್ತು ಎಸೆಯಬೇಕು. ಇಂತಹ ಪದ್ಧತಿಯನ್ನು ಪರೋಕ್ಷವಾಗಿ ಪ್ರತ್ಸಾಹಿಸವಂತಹರನ್ನು ಶಿಕ್ಷಿಸಬೇಕು. ಸಮಾಜದಲ್ಲಿರುವ ಎಲ್ಲಾ ಜನರು ಶಿಕ್ಷಣವನ್ನು ಕಡ್ಡಾಯವಾಗಿ ಕಲಿತ್ತಿದ್ದೇಯಾದರೆ ಇಂತಹ ಸಂಪ್ರದಾಯಗಳು ಮಾರೆಮಾಚಲಿಕ್ಕೆ ಸಾಧ್ಯವಾಗುತ್ತದೆ. ಈ ಹಿಂದೆ ಇರುವ ದೇವದಾಸಿಯರಿಗೆ ಸರ್ಕಾರದ ವಸತಿ, ಮಾಶಾಸನ, ಮಕ್ಕಳ ಶಿಕ್ಷಣ, ಉದ್ಯೋಗ ಮತ್ತು ಭೂಮಿಯನ್ನು ನೀಡಿ ಅವರ ಅಭಿವೃದ್ಧಿಗೆ ಶ್ರಮಿಸಬೇಕು.

ನಾವುಗಳು ಶಿಕ್ಷಣವಂತರಾಗಬೇಕು ಎಂದು ಕಲಿಯಲಿಕ್ಕೆ ಹೋಗುತ್ತೇವೆ. ಆದರೆ ನಮ್ಮಲ್ಲಿ ಈಕೆ ಶಿಕ್ಷಣ ಕಲಿಯುತ್ತಾಳೆಯೋ ಅಥವಾ ಅವರ ತಾಯಿಯಾಗೆ ಮತ್ತೊಬ್ಬರ ಜೊತೆ ಸುತ್ತಾಡುತ್ತಾಳೆಯೋ ಗೊತ್ತಿಲ್ಲ ಎಂದು ಮಾತಾನಾಡುವ ಸಮಾಜ ಉಂಟು. ಇದೆಲ್ಲದರ ಮಧ್ಯದಲ್ಲಿ ಜೀವನ ನೆಡೆಸುವುದು ಹೇಗೆ? ಎಂಬ ಪ್ರಶ್ನೆ ಮೂಡುತ್ತದೆ. ಆದರೆ ಈ ಜೀವನ ಅಂತ್ಯವಾಗುವರೆಗೂ ಹೋರಾಟದ ಬದುಕು ನಮ್ಮದು, ಎನ್ನುವ ಹಾಗೆ ಬದುಕಬೇಕಾಗಿದೆ. ಇಂದು ಈ ಸಮಾಜದಲ್ಲಿ. ಪ್ರತಿಯೊಂದು ದೇವದಾಸಿ ಕುಟುಂಬದ ಮಕ್ಕಳು ಶಿಕ್ಷಣವನ್ನು ಸಂಪೂರ್ಣವಾಗಿ ಕಲಿತಿದ್ದೇಯಾದರೆ ಮುಂದಿನ ದಿನಮಾನಗಳಲ್ಲಿ ದೇವದಾಸಿ ಪದ್ಧತಿ ಸಂಪೂರ್ಣವಾಗಿ ನಾಶವಾಗುತ್ತದೆ. ಕೆಳವರ್ಗದ ಮಕ್ಕಳು ಶಿಕ್ಷಣವನ್ನು ಅತ್ಯಂತ ಮೌಲ್ಯಯುತವಾಗಿ ಕಲಿತಿದ್ದೆಯಾದರೆ ಕುಟುಂಬದ ಜೊತೆಗೆ ಸಮುದಾಯವು ಬದಲಾವಣೆಯಾಗಲಿಕ್ಕೆ ಸಾಧ್ಯವಾಗುತ್ತದೆ.

ಅಡಿಟಿಪ್ಪಣಿ

೧. ಕೊತ್ಲಮ್ಮ, ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ(ಕೂಡ್ಲಿಗಿ ಪಟ್ಟಣದ ಬೇಡಬುಡಕಟ್ಟು ದೆವದಾಸಿ ಸಮುದಾಯವನ್ನು ಅನುಲಕ್ಷಿಸಿ) ಪಿಎಚ್ ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ. ೨೦೦೮, ಪುಟ-೯೮.

ಅಧ್ಯಾಯ: ಆರು

ಸಮಾರೋಪ

೬.೧. ಫಲಿತಗಳು

೬.೨. ಪರಿಹಾರಗಳು

ಅಧ್ಯಾಯ: ಆರು

ಸಮಾರೋಪ

ಜಗತ್ತಿನ ವಿವಿಧ ಸಮಾಜಗಳಲ್ಲಿ ದೇವದಾಸಿ ಪದ್ದತಿ ಕಂಡು ಬರುತ್ತದೆ. ಅದು ಪ್ರಾದೇಶಿಕತೆಯ ಪರಿಣಾಮವಾಗಿ ಬೇರೆ ಬೇರೆ ಸ್ವರೂಪದಲ್ಲಿ ಪ್ರಚಲಿತದಲ್ಲಿದೆ. "ಪ್ರಾಚೀನ ಭಾರತದ ದ್ರಾವಿಡ ಸಮಾಜದಲ್ಲಿ ಮಾತೃ ಪ್ರಧಾನ ವ್ಯವಸ್ಥೆ ಇದ್ದು, ಭೂಮಿಯಲ್ಲಿ ಬೆಳೆ ಬೆಳೆಯುವಂತೆ, ಸ್ತ್ರೀಯಲ್ಲಿಯೂ ಫಲಿಸುವ ಶಕ್ತಿಯನ್ನು ಕಂಡುಕೊಂಡು ಆಕೆಯನ್ನು ಮನುಷ್ಯಳಾಗಿ ಗ್ರಹಿಸದೆ ಶಕ್ತಿಯಾಗಿ, ಮಾತೆಯಾಗಿ ಕಂಡು. ಧಾರ್ಮಿಕ ಶ್ರದ್ಧೆ ಹಾಗೂ ಫಲವತ್ತತೆಯ ಹಿನ್ನೆಲೆಯಲ್ಲಿ ಕುಟುಂಬವನ್ನು ರಕ್ಷಿಸಿಕೊಂಡು ಹೋಗಲು ಮನೆಗೆ ಮಾತೃವಿದ್ದ ಹಾಗೆ, ಗ್ರಾಮ ಸಮುದಾಯವನ್ನು ರಕ್ಷಿಸಲು ಗ್ರಾಮದೇವತೆ ಇರುತ್ತಾಳೆ. ಆಕೆಯನ್ನು ಪೂಜಿಸಲು, ಆಕೆಯ ಕೃಪೆಗೆ ಪಾತ್ರರಾಗಲು, ಸಂತೃಪ್ತಿಸಲು, ದೇವಿಯ ಸೇವೆಗಾಗಿ ಪೂಜಾರಿಯ ಈಗ ಅನ್ಯೆತಿಕತೆಯ ಜಾಲದಂತಾಗಿದೆ. ನೆಮಿಸುವುದು 'ಶುದ್ದ' ಆರಾಧನೆಯ ರೂಪದಲ್ಲಿ ಆದ ದೇವದಾಸಿಯರ ಸಂಪ್ರದಾಯವಿತ್ತು. ಆದರೆ ಈಗ ದೇವದಾಸಿಯರ ಬದುಕು ಅಂತ್ಯಂತ ಹೀನಾಯವಾಗಿದೆ. ಆಗ ದೇವಾಲಯದಲ್ಲಿ ಪ್ರಮುಖ ಸ್ಥಾನ ಪಡೆದಿದ್ದ ದೇವದಾಸಿಯರು ಇಂದು ಯಾವುದೇ ದೇವಾಲಯಕ್ಕೆ ಪ್ರವೇಶ ಇಲ್ಲದೆ ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿದೆ. ಇಂದಿಗೂ ದೇವದಾಸಿಯರ ಕುಟುಂಬಗಳು ಸಮಾಜದಲ್ಲಿ ಯಾವುದೇ ಅಭಿವೃದ್ಧಿ ಕಾಣದೆ ಸಂಕಷ್ಟದ ಜೀವನ ನಡೆಸಿಕೊಂಡು ಹೋಗುವುದು ಕಂಡು ಬರುತ್ತದೆ.

ದೇವದಾಸಿ ಸಂಪ್ರದಾಯದ ಸಂಪೂರ್ಣ ನಿವಾರಣೆಗಾಗಿ ಜಾಗೃತಿ ಮೂಡಿಸಿ, ಉದ್ಯೋಗ ಭದ್ರತೆಯ ಭರವಸೆಯನ್ನು ಕಲ್ಪಿಸಿ, ಆರ್ಥಿಕ ಯೋಜನೆಯಲ್ಲಿ ತಮ್ಮನ್ನು ತಾವು ತೋಡಗಿಸಿಕೊಳ್ಳುವಂತಹ ಮನೋಸ್ಥೈರ್ಯ ತುಂಬುವ ಕೆಲಸವನ್ನು ಸರ್ಕಾರ ಮತ್ತು ಸಮಾಜ ಮಾಡಬೇಕು. ಲೈಂಗಿಕ ಶಿಕ್ಷಣವನ್ನು ಯುವ ಪೀಳಿಗೆಗೆ ನೀಡಿ ಲಿಂಗಬೇಧಕ್ಕೆ ಅವಕಾಶವಿಲ್ಲದಂತಹ ಪರಿಸರ ನಿರ್ಮಿಸಬೇಕು. ದುಷ್ಟ ಆಚರಣೆಗಳ ನಿರ್ಮೂಲನೆಗಾಗಿ ಪ್ರಚಾರ, ಪ್ರಸಾರ ಕೈಗೊಂಡು ದೇವದಾಸಿಯಂತಹ ಆಚರಣೆಗಳು ಸಂಪೂರ್ಣವಾಗಿ ನಿರ್ಮೂಲನೆಯಾಗಬೇಕು ಇಂದಿನ ದೇವದಾಸಿಯರಿಗೆ ಪುನರ್‌ವಸತಿ, ಮಾಶಾಸನ ಮತ್ತು ಅವರ ಮಕ್ಕಳಿಗೆ ಶಿಕ್ಷಣ ಕಲ್ಪಿಸುವುದು ಅತ್ಯಂತ ಅವಶ್ಯಕವಾಗಿದೆ. ಈ ಸಂಬಂಧವಾಗಿ

ಸರ್ಕಾರ, ರಾಜಕಾರಣಿಗಳು, ಪೋಲಿಸ್ ಇಲಾಖೆ, ಕಾರ್ಯ ಪ್ರವೃತ್ತರಾಗಬೇಕಾಗಿದೆ. ಯಾವುದೇ ಕಾನೂನಿನ ಯಶಸ್ಸು ಅದರ ಅನುಷ್ಠಾನದಲ್ಲಿ ಅಡಗಿದೆ ಎಂಬುದನ್ನು ಅರಿತು. ಪ್ರಾಮಾಣಿಕ ಪ್ರಯತ್ನದ ಮೂಲಕ ಕಾನೂನುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಈ ಕುರಿತು ವಿಶೇಷ ಕಾಯ್ದೆ ರೂಪಿಸಲು ಕ್ರಮ ಕೈಗೊಂಡಾಗ ಮಾತ್ರ ದೇವದಾಸಿಯರ ಸಂಪ್ರದಾಯವನ್ನು ಸಮಾಜದಿಂದ ನಿರ್ಮೂಲನೆ ಮಾಡುವುದನ್ನು ನಿರೀಕ್ಷಿಸಬಹುದಾಗಿದೆ. ಕರ್ನಾಟಕ ರಾಜ್ಯದಲ್ಲಿ ೫೦ರಷ್ಟು ಪರಿಶಿಷ್ಟ ಬುಡಕಟ್ಟುಗಳಿದ್ದು, ಅತಿ ಹೆಚ್ಚು ಬುಡಕಟ್ಟು ಜನಸಂಖ್ಯೆ ಹೊಂದಿದ ಬಳ್ಳಾರಿ ಜಿಲ್ಲೆಯು ರಾಜ್ಯದಲ್ಲಿಯೇ ಮೊದಲ ಸ್ಥಾನದಲ್ಲಿದೆ. ಇಲ್ಲಿನ ಒಟ್ಟು ಬುಡಕಟ್ಟುಗಳ ಸಂಖ್ಯೆಯಲ್ಲಿ ಶೇ ೯೭ರಷ್ಟು ವಾಲ್ಮೀಕಿ, ಬೇಡ, ಅಥವಾ ನಾಯಕ ಸಮುದಾಯದವರಿದ್ದು. ಈ ಸಮುದಾಯದ ಮಹಿಳೆಯರು ಹಗರಿಬೊಮ್ಮನಹಳ್ಳಿಯಲ್ಲಿ ಅತಿ ಹೆಚ್ಚು ದೇವದಾಸಿಯರು ಇರುವುದು ಕಂಡುಬರುತ್ತಾರೆ. ವಿಜಯನಗರ ಸಾಮ್ರಾಜ್ಯದ ಆಳ್ವಿಕೆಯ ಪ್ರಭಾವವು ಒಂದಾಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ದೇವದಾಸಿ ಪದ್ಧತಿ ಹೆಚ್ಚಾಗಿ ಕಂಡುಬರುವುದು ಕೂಡ್ಲಿಗಿ ತಾಲೂಕಿನಲ್ಲಿ. ಕೂಡ್ಲಿಗಿಯು ಆ ಕಾಲದ ಸೈನಿಕರ 'ತಂಗುದಾಣವಾಗಿದ್ದ ಪರಿಣಾಮ ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ದೇವದಾಸಿಯರು ಕಂಡುಬರುತ್ತಾರೆ. ಇಂದಿಗೂ ಇಲ್ಲಿಯ ಕೆಲ ಬೇಡ ಸಮುದಾಯದ ಕುಟುಂಬಗಳಲ್ಲಿ ದೇವದಾಸಿ ಸಂಪ್ರದಾಯವನ್ನು ಜೀವನೋಪಾಯಕ್ಕಾಗಿ ಆ ಊರಿನ ಶ್ರೀಮಂತರ ಜೊತೆ ತನ್ನ ದೇಹ ಸಂಬಂಧವನ್ನು ಬೆಳೆಸಿಕೊಂಡು ಜೀವನ ನಡೆಸುತ್ತಿದ್ದಾರೆ.

ಈ ಸಮುದಾಯದಲ್ಲಿ ಅನೇಕ ಜನ ದೇವದಾಸಿಯರಿದ್ದು ಇವರು ಕಲಾವಿದರೂ ಆಗಿದ್ದಾರೆ ಮರಿಯಮ್ಮನಹಳ್ಳಿ ಬೇಡ ಸಮುದಾಯದ ಮಹಿಳೆಯರು ರಾಜ್ಯದಲ್ಲಿ ಹೆಸರು ಮಾಡಿದ ಗ್ರಾಮವಾಗಿದ್ದು ಇಲ್ಲಿನ ಮಹಿಳಾ ಕಲಾವಿದರು ಹಲವಾರು ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಉದಾ: ವಾಲ್ಮೀಕಿ(ನಾಗರತ್ನಮ್ಮ) ಸಾಮಾಜಿಕ ಅವಕಾಶಗಳಿಂದ ವಂಚಿತರಾಗಿ ಆರ್ಥಿಕವಾಗಿ ಯಾವುದೇ ಸೌಲಭ್ಯ ಪಡೆಯದೆ ಉತ್ತಮ ಜೀವನಕ್ಕಾಗಿ ಹಪಾಹಪಿಸುತ್ತಿದ್ದಾರೆ. ಇನ್ನು ಕೆಲವರು ಆಧುನಿಕ ಕಾಲದ ಆಗು ಹೋಗುಗಳಿಗೆ ಸ್ಪಂದಿಸುವ ಮನೋಸ್ಥೈರ್ಯ ವಿಲ್ಲದೆ ಆತಂಕಕ್ಕೀಡಾಗಿದ್ದಾರೆ. ಇಂತಹ ಕಲಾವಿದೆಯರಿಗೆ ಸಹೃದಯರು, ಸರ್ಕಾರ ಮತ್ತು ಸಮಾಜ ಪೂರ್ವ ಯೋಜನೆಗಳನ್ನು ಪ್ರೋತ್ಸಾಹಿಸಬೇಕಾದ ಅಗತ್ಯತೆ ಇದೆ.

ದೇವದಾಸಿಯರ ಸಾಮಾಜಿಕ ಆರ್ಥಿಕ, ಶಿಕ್ಷಣ, ರಾಜಕೀಯ ಸ್ಥಿತಿಗಳಿಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆಗಳಿದ್ದು, ಜೀವನೋಪಾಯಕ್ಕಾಗಿ ನಿರಂತರ ಆದಾಯ ಬರುವಂತಹ ಆರ್ಥಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಿ, ಬಡತನದ ರೇಖೆಯಿಂದ ಮೇಲೆತ್ತಲು ಪ್ರಯತ್ನಿಸಬೇಕಾಗಿದೆ.

೬.೧. ಅಧ್ಯಯನದ ಫಲಿತಗಳು

ದೇವದಾಸಿಯರ ಸಂಪ್ರದಾಯಕ್ಕೆ ಒಂದು ದೊಡ್ಡ ಪರಂಪರೆಯೇ ಇದೆ. ಆರಂಭದಲ್ಲಿ ಭಾರತೀಯ ಸಂಪ್ರದಾಯದ ಮೂಲ ನಿವಾಸಿಗಳಾದ ದ್ರಾವಿಡರು ತಮ್ಮ ಮಾತೃ ದೇವತೆಯನ್ನು ತೃಪ್ತಿಪಡಿಸಲು,

ಆಕೆಯ ಕೃಪೆಗಾಗಿ ಪೂಜಿಸಿ, ಆಕೆ ಸಂತೃಪ್ತಳಾದರೆ. ಮಳೆ, ಬೆಳೆ, ಸಮೃದ್ಧವಾಗಿ, ತಾವೆಲ್ಲ ಆರೋಗ್ಯದಿಂದಿರಲು ಸಾಧ್ಯವೆಂದು ನಂಬಿ ಮನೆ-ಮನೆಗೆ ಒಬ್ಬ ಮಾತೃವಿದ್ದಂತೆ, ಗ್ರಾಮಕ್ಕೊಬ್ಬ ದೇವತಿ" ಇದ್ದು ಆಕೆಯನ್ನು ಪೂಜಿಸಲು ಪೂಜಾರಿ ವಂಶಸ್ಥರಿದ್ದು. ಇವತ್ತಿನ ದಿನಮಾನಗಳಲ್ಲಿ ದೇವದಾಸಿ ಸಂಪ್ರಾದಾಯವು ಆರಾಧನೆಯ ರೂಪದಲ್ಲಿತ್ತು.

೧. ಸ್ಥಳೀಯ ಮೇಲ್ವರ್ಗದ ಜನರು ಈ ಪದ್ಧತಿಯನ್ನು ಪರೋಕ್ಷವಾಗಿ ಪ್ರೋತ್ಸಾಹಿಸಿ, ಅವರ ಕಡು ಬಡತನವನ್ನು ಅರಿತು ದೇವದಾಸಿ ಪದ್ಧತಿ ಕೆಟ್ಟ ಪದ್ಧತಿ ಎಂಬ ಅರಿವು ಇವರಿಗೆ ಬಾರದಂತೆ ಮಾಡುವ ತಂತ್ರ ಹಿಂದಿನಿಂದಲೂ ನಡೆದುಕೊಂಡು ಬಂದಿದೆ.

೨. ಇದರಲ್ಲಿ ತೊಡಗಿದ ಎಲ್ಲಾ ಹೆಣ್ಣು ಮಕ್ಕಳು ಕೆಳವರ್ಗಕ್ಕೆ ಸೇರಿದವರಾಗಿದ್ದು. ಇವರ ಅಸಹಾಯ ಕತೆಯನ್ನೇ ಸಮಾಜ ಬಂಡವಾಳವನ್ನಾಗಿಸಿಕೊಂಡಿರುವುದು ಅಧ್ಯಾಯನದಿಂದ ತಿಳಿದುಬರುತ್ತದೆ.

೩. ಕೆಳ ವರ್ಗದ ಮನೆತನದಲ್ಲಿ ಹೆಣ್ಣು ಮಕ್ಕಳು ಜನಿಸಿದಾಗ, ಆ ಮನೆಯಲ್ಲಿ ಯಾರಿಗಾದರು ರೋಗಗಳು ಕಾಣಿಸಿಕೊಂಡರೆ ಆ ಹೆಣ್ಣನ್ನು, ನತದೃಷ್ಟವೆಂದು ಕಂಡುಬಂದ ಅಥವಾ ಕೆಟ್ಟ ನಕ್ಷತ್ರದಲ್ಲಿ ಜನಿಸಿದ ಹೆಣ್ಣು ಮಗು, ಮತ್ತು ಮೈ ಮೇಲೆ ದೇವ್ವ ಅಥವಾ ಚರ್ಮರೋಗ ಖಾಯಿಲೆಯಿಂದ ನರಳುತ್ತಿದ್ದಾರೆ. ಜಿಡ್ಡುಗಟ್ಟಿದ ತಲೆಗೂದಲು, ಮುಂತಾದದ್ದು ಕಂಡು ಬಂದರೆ ಅವರನ್ನು ದೇವದಾಸಿಯಾಗಿ ಬಿಡುವುದು ಇಗಲೂ ಇದೆ.

೪. ಇಂದಿಗೂ ದೇವಾಲಯಗಳಲ್ಲಿ ಮುಚ್ಚು ಮರೆ ಇಲ್ಲದೆ, ದೇವದಾಸಿ ಪದ್ಧತಿಯನ್ನು ಮುಂದುವರೆಸಿಕೊಂಡು ಬರಲಾಗುತ್ತಿದೆ. ಧರ್ಮದ ಹೆಸರಿನಲ್ಲಿನ ಅಂಧಶ್ರದ್ಧೆ ಮತ್ತು ಮೊಸಗಾರಿಗೆ, ಅಜ್ಞಾನ ಮತ್ತು ಜೀವನಕ್ಕೆ ಅನ್ಯಮಾರ್ಗವಿಲ್ಲದೆ ಅನೇಕ ಕುಟುಂಬಗಳು ದೇವದಾಸಿ ಪದ್ಧತಿಗೆ ಮೊರೆ ಹೊಗುವುದು ಕಂಡುಬರುತ್ತದೆ.

೫. ತಂದೆ-ತಾಯಿಗಳು ಮಕ್ಕಳನ್ನು ದೇವದಾಸಿಯರನ್ನಾಗಿ ಮಾಡ ಬಯಸುವುದಕ್ಕೆ, ಅಜ್ಞಾನ, ಮೂಢನಂಬಿಕೆ, ಆರ್ಥಿಕ ದುಸ್ಥಿತಿ, ಸಾಮಾಜಿಕ ಸ್ಥಾನ, ವ್ಯಕ್ತಿ ಮತ್ತು ಜಾತಿಯ ಮನೋಭಾವನೆ ಮುಂತಾದವುಗಳು ಪ್ರಮುಖ ಕಾರಣಗಳಾಗಿ ಕಂಡು ಬರುತ್ತವೆ.

೬. ಇತ್ತೀಚಿನ ದಿನಮಾನಗಳಲ್ಲಿ ಮೇಲ್ವರ್ಗದ ಜನರು (ಶ್ರೀಮಂತರು) ದೇವದಾಸಿಯರನ್ನು ರಾಜಕೀಯ ಕ್ಷೇತ್ರದಲ್ಲೂ ಮುಂದುವರಿಸಿ, ಅಲ್ಪ ಮಟ್ಟಿಗಿ ಅಭಿವೃದ್ಧಿಗೆ ಸಹಾಯ ಮಾಡುತ್ತಿರುವುದು ಸ್ವಲ್ಪ ಸಮಾಧಾನದ ವಿಷಯವಾದರೂ, ಅದರ ಹಿಂದಿನ ಒಳ ರಾಜಕಾರಣ ಬೇರೆಯೇ ಇದೆ ಎಂದು ಅನಿಸುತ್ತಿದೆ.

೭. ದೇವದಾಸಿ ಕುಟುಂಬದಲ್ಲಿ ಹೆಚ್ಚಾಗಿ ಆರ್ಥಿಕ ದುಸ್ಥಿತಿ, ನಿರುದ್ಯೋಗ, ಸಾಲದ ಹೊರೆ ಮುಂತಾದ ಸಮಸ್ಯೆಗಳು ಕಂಡು ಬರುತ್ತಿವೆ.

೮. ದೇವದಾಸಿ ಪದ್ಧತಿಯಿಂದ ಆದಷ್ಟು ಬೇಗ ಮತ್ತು ಸುಲಭವಾಗಿ ಶ್ರೀಮಂತರಾಗಿಡುವ ಜಾಲವೇ ಇದರ ಸುತ್ತ ಇದೆ. ಸಮಾಜದ ಮೇಲ್ಜಾತಿಯವರು ರಾಜಕಾರಣಗಳು, ಗಣ್ಯರು, ಅಧಿಕಾರಿಗಳು, ಮಠಾಧೀಶರುಗಳು ತಾವು ಏನು ಮಾಡುತ್ತಾರೆಯೋ ಎಂಬ ಅರಿವು ಇಲ್ಲದೆ ಪಾತಕಿಗಳಂತೆ ಪಾಲ್ಗೋಳ್ಳುತ್ತಿದ್ದಾರೆ.

೬.೨ ಸಲಹೆಗಳು

೧. ದೇವದಾಸಿಯರಿಗೆ ತಿಂಗಳ ಮಾಸಾಶನ ೫೦೦೦ ರೂ ಗಳನ್ನು ಸರ್ಕಾರವು ನೀಡಿ, ಅವರನ್ನ ಆರ್ಥಿಕವಾಗಿ ಸಬಲರನ್ನಾಗಿಸಬೇಕು.

೨. ಪುನರ್‌ವಸತಿ ಯೋಜನೆ ಅಡಿಯಲ್ಲಿ ಪ್ರತಿಯೊಬ್ಬ ದೇವದಾಸಿಯರಿಗೆ ವಸತಿಯನ್ನು ಕಲ್ಪಿಸಬೇಕು.

೩. ದೇವದಾಸಿಯರಿಗೆ ಆಯಾ ಪ್ರದೇಶಕ್ಕೆ ಅನುಗುಣವಾಗಿ ಸರ್ಕಾರವು ಎರಡರಿಂದ ಐದು ಎಕರೆ ಭೂಮಿಯನ್ನು ಕಲ್ಪಿಸಬೇಕು.

೪. ದೇವದಾಸಿ ಪದ್ದತಿಯನ್ನು ಸರ್ಕಾರ ಮತ್ತು ಸಂಘ ಸಂಸ್ಥೆಗಳು ಸಂಪೂರ್ಣವಾಗಿ ನಿರ್ಮೂಲನೆ ಮಾಡಬೇಕಾಗಿದೆ.

೫. ದೇವದಾಸಿ ಮಹಿಳೆಯರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವಂತಹ ಕೇಲಸವಾಗಬೇಕು.

ಪರಮಾರ್ಶನ ಗ್ರಂಥಗಳು

ಪರಮಾರ್ಶನ ಗ್ರಂಥಗಳು

ಆಚಾರ್ಯ ಪಾ ವೆಂ, ಪಾದರ್ಥ ಚಿಂತಾಮಣಿ, ದತ್ತಾತ್ರೇಯ ಪ್ರಕಾಶನ, ಮಂಗಳೂರು, ೧೯೯೧.

ಅಲ್ಲಗಿರಿರಾಜ್(ಸಂ), ಮುತ್ತು ಒಡೆಯುವ ಬನ್ನಿ, ದೇವದಾಸಿ ಸಂಪನ್ಮೂಲ ಕೇಂದ್ರ ಸಮೂಹ ಕನಕಗಿರಿ, ಕೊಪ್ಪಳ, ೨೦೧೫.

ಕಲಬುರ್ಗಿ ಎಂ ಎಂ(ಸಂ), ಇಮ್ಮಡಿ ಚಿಕ್ಕ ಭೂಪಾಲನ ಸಾಂಗತ್ಯ, ಶ್ರೀ ನಿ ಪ, ಮಹಾಂತಸ್ವಾಮಿಗಳು, ಶ್ರೀಮುರುಗಾಮಠ, ಧಾರವಾಡ, ೧೯೯೭.

ಕೋತಿನ ಎಸ್ ಎಸ್, ರಂಗಕಲಾವಿದೆ ಸೋನುಬಾಯಿ ದೊಡ್ಡಮನಿ, ಶ್ರೀಮತಿ ಸೋಮಬಾಯಿ ದೊಡ್ಡಮನಿ, ಸತ್ಕಾರ ಸಮಿತಿ, ಧಾರವಾಡ, ೧೯೮೦.

ಕೋತ್ಲಮ್ಮ, ಬೇಡ ಬುಡಕಟ್ಟು ಮಹಿಳಾ ದೇವದಾಸಿಯ ಸಾಮಾಜಿಕ ಜೀವನ, ಬುಡಕಟ್ಟು ಅಧ್ಯಾಯನ ವಿಭಾಗ, ಕನ್ನಡ ವಿಶ್ವಾವಿಧ್ಯಾಲಯ, ಹಂಪಿ. ೨೦೦೬.

ಗುರುಮೂರ್ತಿ ಕೆ ಜಿ, ಧರ್ಮ ಮತ್ತು ರಾಜಕೀಯ, ವಿಮೋಚನಾ ಪ್ರಕಾಶನ, ಅಥಣಿ, ೧೯೯೬.

ಗುಡಿಹಳ್ಳಿ ನಾಗರಾಜ, ಕಲಾಗ್ರಾಮ ಮರಿಯಮ್ಮನಹಳ್ಳಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

ಗುಡಿಹಳ್ಳಿ ನಾಗರಾಜ, ರಂಗಸಿರಿ, ಬರಹ ಪಬ್ಲಿಕೇಷನ್ ಹೌಸ್, ಬೆಂಗಳೂರು, ೨೦೧೩.

ಚಂಪಾಬಾಯಿ ಡಿ(ಸಂ) ಹೊನ್ನಮ್ಮನ ಹದಿಬದೆಯ ಧರ್ಮ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೬೯.

ಚಂದ್ರಶೇಖರ ಕಂಬಾರ(ಸಂ) ಕನ್ನಡ ಜಾನಪದ ವಿಶ್ವಕೋಶ, ಸಂಪುಟ–೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೫.

ಚಂದ್ರಶೇಖರ್ ಟಿ ಆರ್, ಮಹಿಳೆ: ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಚಿದಾನಂದ ಮೂರ್ತಿ ಎಂ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೭೫.

ಚಿದಾನಂದ ಮೂರ್ತಿ ಎಂ, ಲಿಂಗಾಯಿತ ಅಧ್ಯನಗಳು, ವಾಗ್ದೇವಿ ಮಸ್ತಕಗಳು, ಮೈಸೂರು, ಎರಡನೇ ಮುದ್ರಾಣ, ೧೯೮೯.

ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦.

ಚೆನ್ನಣ್ಣ ವಾಲೀಕರ್, ಕರ್ನಾಟಕ ದೇವದಾಸಿಯರ ಸಮಾಜೋ-ಧಾರ್ಮಿಕ ಆರ್ಥಿಕ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಸಮಸ್ಯೆಗಳು ಸಮಗ್ರ ಅಧ್ಯಯನ, ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲ್ಬರ್ಗ, ವಿಶ್ವವಿದ್ಯಾಲಯ. ೨೦೦೧.

ಜೋಗನ್ ಶಂಕರ್, ದೇವದಾಸಿ ಸಂಪ್ರದಾಯ, ವಿಮೋಚನ ಪ್ರಕಾಶನ, ಅಥಣಿ. ೧೯೯೩.

ನಾಗೇಗೌಡ ಎಚ್. ಎಲ್,(ಸಂ) ಪ್ರವಾಸಿ ಕಂಡ ಇಂಡಿಯಾ ಸಂಪುಟ-೨ ಪ್ರಸಾರಾಂಗ ಮೈಸೂರು, ವಿಶ್ವವಿದ್ಯಾನಿಲಯ, ಮೈಸೂರು, ೧೯೬೧.

ನಾಯಕ ಹಾ ಮಾ(ಸಂ), ಡಿ.ವಿ.ಜಿ. ಕೃತಿ ಶ್ರೇಣಿ ಸಂಪುಟ-೬, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶಾಲಯ, ಬೆಂಗಳೂರು, ೧೯೯೬.

ಭಾರತಿ ಜೀವಿ, ದೇವದಾಸಿ:ಪ್ರಸಂಗ ದೀಪ್ತಿ, ವಚನ್ ಗ್ರಾಫಿಕ್ಸ್, ಧಾರವಾಡ,೨೦೧೧.

ಬೆಳಗಲಿ ದು ನಿಂ, ದೇವದಾಸಿ, ವಿಮೋಚನಾ ಪ್ರಕಾಶನ, ಅಥಣಿ, ೧೯೯೧.

ಭೀಮಭಟ್ಟ(ಅನು) ಕಲ್ಹಣನ ರಾಜತರಂಗಿಣಿ, ಅಭ್ಯುದಯ ಪ್ರಕಾಶನ, ದಕ್ಷಿಣ ಕನ್ನಡ, ೧೯೯೨.

ಬೋರಲಿಂಗಯ್ಯ ಹಿ ಚಿ, ಒಂದು ಬುಡಕಟ್ಟಿನ ಲೋಕದೃಷ್ಟಿ(ಅಪ್ರಕಟಿತ ಪಿಎಚ್ ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ ಹಂಪಿ. ೨೦೦೦.

ಬೋರಲಿಂಗಯ್ಯ ಹಿ ಚಿ, ಗಿರಿಜನ ನಾಡಿಗೆ ಪಯಣ, ರಾಗಿರೊಟ್ಟಿ ಪ್ರಕಾಶನ, ಬೆಂಗಳೂರು. ೧೯೯೧.

ಮಲ್ಲಪ್ಪ ಬಸಪ್ಪ ಜಮನಾಳ ಮಾಸ್ತರ, ಸಿಂದಗಿ ಗಂಗಾ ವಿಲಾಸ ಪ.ಗು, ಹಳ್ಳಿಕಟ್ಟಿಯದರ ಹಿತಚಿಂತಕ ಪ್ರೆಸ್, ೧೯೨೬.

ಮುನಿಶಾಮಪ್ಪ ಹೋಸೂರು, ನಟುವರ್ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡಮಿ,ಬೆಂಗಳೂರು, ೧೯೯೩.

ಲೀಲಾ ಸಂಪಿಗೆ, ಬುದ್ಧನಿಲ್ಲದ ಅಮ್ರಪಾಲಿ, ಚಾರುಮತಿ ಪ್ರಕಾಶನ, ಬೆಂಗಳೂರು, ೨೦೧೪.

ವರಗಿರಿ ಗಂಗಾಸಾನಿ, ಮೂನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೪೯.

ವೆಂಕಟ ರಂಗೋಕಟ್ಟಿ(ಅನು) ಗ್ಯಾಝೇಟಿಯರು (ಮುಂಬಯಿ ಇಲಾಖೆಗೆ ಸೇರಿದ ಕರ್ನಾಟಕದ ಭಾಗದ್ದು) ಏಷಿಯನ್ ಎಜುಕೇಶನ್ ಸರ್ವೀಸ್, ಹೊಸದೆಹಲಿ, ೧೯೪೮.

ಶಾಂತಾ ಮಠ, ಮಹಿಳಾ ಅಧ್ಯಯನ, ಪ್ರಸರಾಂಗ, ಕನ್ನಡ ವಿಶ್ವಾವಿಧ್ಯಾಲಯ, ಹಂಪಿ. ೨೦೦೮.

ಶೈಲಜಾ ಹೀರೆಮಠ, ಪಾತರದವರು, ಪ್ರಸರಾಂಗ, ಕನ್ನಡ ವಿಶ್ವಾವಿಧ್ಯಾಲಯ, ಹಂಪಿ. ೧೯೯೯.

ಶೈಲಜಾ ಹೀರೆಮಠ, ಸ್ತ್ರೀಕಥನ, ಭುವನ ಪ್ರಕಾಶನ, ಹೊಸಪೇಟೆ, ೨೦೦೩.

ಸಿದ್ರಾಮ ಕಾರಣಿಕ, ದೇವದಾಸಿ ಮತ್ತು ಬೇತ್ತಲೆ ಸೇವೆ, ಲಡಾಯಿ ಪ್ರಕಾಶನ, ಗದಗ್. ೨೦೧೩.

ಎಂ ಫಿಲ್, ಪಿಎಚ್. ಡಿ ಮಹಾಪ್ರಬಂಧಗಳು

ಉಮೇಶ ಬಸಪ್ಪ ಕಾತರಕಿ, ಬಿಸರಳ್ಳಿಯ ದೇವದಾಸಿ ಪದ್ಧತಿ: ಒಂದು ಅಧ್ಯಯನ, ಪಿಎಚ್ ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬.

ಕೃಷ್ಣವೇಣಿ ಆರ್, ಹುಲಿಗೆಮ್ಮ ಜಾನಪದದಲ್ಲಿ ಮಹಿಳಾ ಪ್ರಾತಿನಿಧೀಕರಣ, ಪಿಎಚ್ ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೭.

ಕೊಟ್ರಮ್ಮ, ಬಳ್ಳಾರಿ ಜಿಲ್ಲೆಯ ಬುಡಕಟ್ಟು ದೇವದಾಸಿಯರ ಅಧ್ಯಯನ(ಕೂಡ್ಲಿಗಿ ಪಟ್ಟಣದ ಬುಡಕಟ್ಟು ದೇವದಾಸಿ ಸಮುದಾಯವನ್ನು ಅನುಲಕ್ಷಿಸಿ), ಪಿಎಚ್ ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮.

ಮುತ್ತಿ ವಸಂತಕುಮಾರ, ಬಸ್ರೂರಿನ ದೇವದಾಸಿ ಪದ್ಧತಿ, ಎಂ ಫಿಲ್ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨.

ಪ್ರಸನ್ನಕುಮಾರ್, ಬದಲಾವಣೆಯ ಹಾದಿಯಲ್ಲಿ ದೇವದಾಸಿಯರು: ಒಂದು ಸಮಾಜಶಾಸ್ತ್ರೀಯ ಅಧ್ಯಯನ(ಬೆಳಗಾವಿ ಜಿಲ್ಲೆಯನ್ನು ಅನುಲಕ್ಷಿಸಿ), ಪಿಎಚ್ ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೪.

ಸುಜಾತ ಅಕ್ಕಿ, ಬಳ್ಳಾರಿ ಜಿಲ್ಲೆಯ ರಂಗನಟಿಯರ ಅಧ್ಯಯನ, ಪಿಎಚ್ ಡಿ ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪.

ಪತ್ರಿಕೆಗಳು

ಕನ್ನಡಪ್ರಭ–ದಿನಾಂಕ–೦೩–೦೮–೨೦೧೮ ಪ್ರಾದೇಶಿಕ ೦೫" ಶೋಷಣೆ ಮುಕ್ತ ಸಮಾಜಕ್ಕೆ ದೇವದಾಸಿ ಸಂಘಟಿಸಿ ಅಗತ್ಯ"

ವಿಜಯ ಕರ್ನಾಟಕ– (ನಮ್ಮ ಬಳ್ಳಾರಿ) ದಿನಾಂಕ–೦೪–೦೭–೨೦೧೮ ಪುಟ ಸಂಖ್ಯೆ–೦೧ ದೇವದಾಸಿಯರ ಪನರ್ವಸತಿಗೆ ಆಗ್ರಹಿಸಿ ತಹಸೀಲ್ದಾರ್‌ಗೆ ಮನವಿ

ಪ್ರಜಾವಾಣಿ–(ಬಳ್ಳಾರಿ) ದಿನಾಂಕ–೦೫–೦೮–೨೦೧೮ ಪುಟ ೩ಬಿ ದೇವದಾಸಿ ಮಹಿಳೆಯರ ಬೇಡಿಕೆ 'ಈಡೇರಿಕೆಗೆ ಅಗ್ರಹಿಸಿ ಧರಣಿ'

ಪ್ರಜಾವಾಣಿ–ದಿನಾಂಕ–೦೫–೦೮–೨೦೧೮, ಪುಟ ಅಕಾಡಮಿ, ದೇವದಾಸಿಯರು ಭೂಒಡತಿಂಟಾದಾಗ ಕೆ. ರತ್ನಪ್ರಭಾ (ಅವಲೋಕನ)

ಇಂಗ್ಲೀಷ್ ಗ್ರಂಥಗಳು

1. Altekar. A.S. The Position of Women in Hindu CiviliZation, Matilai Banarsi Das, Benaras, 1956.
2. Abbe .J.A. Dubois and H.K. Beachampes, Hindu Manners Customs amd Coremonies, Clare Dan Press, Oxford, 1928.
3. Basam A.L. The Klander that was India Grave Press, Newyork, 1954.
4. Edser Thurston " Cast and Tribe in Southern Indin " Asion Educaional serices, New Dethi Firs Aes Reprin, 1987
5. Elliont H.M The Histoy of Indian as toldby its Own Historions Trubnero and Co, London, 1875.
6. Sherring M.A. native Races of Indian Hindutnibes, on a Castes Vol -3 Pubications Cosmo, Delhi, 1995.
7. Dance The thndu folio Chemai, Decemben ,27, 1998.
8. Brown C.P. Teluju English Dictionary, Asioan Educational Services New Delhi, Madern First Reprint, 1979.
9. Kiltel F. Kannada English Dicdionory Asian Educaltionl Services New Delhi, 1991.
10. Music, The Hindu Folio, Chemari, 29th No 1998.

ಅನುಬಂಧಗಳು

ಕರ್ನಾಟಕ ದೇವದಾಸಿ (ನಿರ್ಮೂಲನೆ, ನಿಷೇಧ ಮತ್ತು ಪುನರ್ವಸತಿ) ಕಾಯ್ದೆ ೨೦೧೮(ಬಿಲ್ ಕರಡು)

ಕರ್ನಾಟಕ ಸರಕಾರದ ಮುಖ್ಯ ಕಾರ್ಯದರ್ಶಿ ಶ್ರೀಮತ ಕೆ ರತ್ನಪ್ರಭ ರವರಿಗೆ ಸಲ್ಲಿಸಿದ ದಿನಾಂಕ–೧೨–೦೨–೨೦೧೮

ಕಾಯ್ದೆ ಸಾರಾಂಶ

ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಅನ್ವಯವಾಗುವುದು ಮತ್ತು ಸರಕಾರ ಕಾಯ್ದೆ ಅನುಮೋದಿಸಿದ ದಿನದಿಂದ ಆಚರಣೆಗೆ ಬರುವುದು.

ಬಲಾಢ್ಯರ ಶೋಷಣೆಯಿಂದ ವಿಮುಕ್ತಿ

ಬಲಾಡ್ಯರ ಶೋಷಣೆ ಅವರು ಬಲವಂತವಾಗಿ ಶೋಷಣೆ ಮಾಡುತ್ತಿರುವ ಪ್ರಸ್ತುತ ಆಚರಣೆಯಿಂದ ವಿಮುಕ್ತಿಗೊಳಿಸಲು ಜಾಗೃತಿ ಮೂಡಿಸುವ ಹಾಗೂ ಅಂತಹವರನ್ನು ಕಾನೂನಿನ ಚೌಕಟ್ಟಿಗೆ ತರುವ ಮತ್ತು ಶಿಕ್ಷೆಗೊಳಪಡಿಸಲು ಈ ಕಾನೂನು.

ದಾಸಿ ಬಿಡುವ ವಿಧಿವಿಧಾನಗಳ ನಿರ್ಬಂಧ

ದೇವರು, ಜಾತಿ, ಸಂಪ್ರದಾಯ ಮತ್ತು ಧರ್ಮದ ಹೆಸರಿನಲ್ಲಿ ಮಹಿಳೆಯನ್ನು ಪೋಜಿಸಲ್ಪಡುವ ವಿಗ್ರಹ, ಪ್ರತಿಮೆ, ಗಿಡಿ ಅಥವಾ ಪೂಜಾಸ್ಥಳಗಳಿಗೆ ದೇವದಾಸಿ ಸಮರ್ಪಣೆ ಮಾಡುವ ಮುತ್ತುಕಟ್ಟುವ, ಮುದ್ರೆ ಹಾಕುವ, ಹೋ ನಾಲಿಗೆ ಮೇಲಿಟ್ಟು ಸುಡುವ, ಬೆತ್ತಲೆ ಸೇವೆ ಮಾಡುವ, ಜಡಿ ತುಂಬುವ, ಜೋಗವ್ವ ವಿಧಿವಿಧಾನಗಳನ್ನು ನಿರ್ಬಂಧಿಸಲಾಗಿದೆ.

ದೇವದಾಸಿ ಯಾರು?

ಕಾನೂನಿನ ಅನ್ವಯ ದೇವದಾಸಿ ಎಂದರೆ ದೇವದಾಸಿ, ಜೋಗಿನಿ, ರಾಜದಾಸಿ, ಅಲಂಕಾರದಾಸಿ, ರುದ್ರದಾಸಿ, ಗಮಗಸಾನಿ, ಮುತ್ತುಕಟ್ಟಿಕೊಂಡವಳು, ದೇವರ ಸೂಳೆ, ಕಸಬಿ, ಪಾತ್ರದವಳು ಮುಂತಾದ

ಹೆಸರಿನಲ್ಲಿ ಕರೆಸಿಕೊಳ್ಳುವ/ಕರೆಯಲ್ಪಡುವ ಮಹಿಳೆ, ಇಂತಹವರು ಸಾಂಪ್ರದಾಯಿಕವಾಗಿ ಅವರಿಗೆ ಸೂಚಿತ ಕೆಲಸಗಳನ್ನು ಮಾಡಿಕೊಂಡಿರುವವರು.

ದೇವದಾಸಿ ಎಂದು ಗುರುತಿಸಲ್ಪಡಬಹುದಾದ ಚಹರೆಗಳು

ಕೊದಲ ಜಟೆ ಹೊಂದಿರುವ, ಮುತ್ತುಕಟ್ಟಿಕೊಂಡಿರುವ, ಬಿದಿರಿನ ಅಥವಾ ಜಗ ಹೊಂದಿರುವ, ಚೌಡಿಕೆ ಹೊಂದಿರುವ/ನುಡಿಸುವ, ಬಂಡಾರ ಹಚ್ಚುವ ಪದ್ಧತಿ ಆಚರಿಸುತ್ತಿರುವ ಮಹಿಳೆ.

ದೇವದಾಸಿ ಮಕ್ಕಳ ಮತ್ತು ಕುಟುಂಬ

ದೇವದಾಸಿ ಜನ್ಮ ನೀಡಿದ ಎಲ್ಲಾ ಮಕ್ಕಳು ಮತ್ತು ಮೊಮ್ಮಕ್ಕಳು ಸೇರಿದ ಸದಸ್ಯರ ಕುಟುಂಬ

ದೇವಸ್ಥಾನ/ ಗುಡಿ: ಎಂದರೆ ಹಿಂದುಗಳು ಆರಾಧಿಸುವ ಮಂದಿರ, ಗಿಡಿ, ಗದ್ದಗೆ, ಸಮಾಧಿ, ಉತ್ಸವ ಮಂಟಪ ಇತ್ಯಾದಿ ಸ್ಥಳಗಳಲ್ಲಿ ಯಾವುದೇ ರೀತಿಯಲ್ಲಿ ದೇವರ ಹೆಸರಿನಲ್ಲಿ ದಾಸಿ ಬಿಡುವ ಪದ್ದತಿ ಆಚರಿಸುತ್ತಿರುವ ಧಾರ್ಮಿಕ ಪ್ರದೇಶಗಳು.

ಸೂಚಿತ ನಿರ್ದೇಶಕ ತತ್ವಗಳು

೧. ಆತ್ಮ ವಿಮರ್ಶೆ(ತತ್ವ)

ಮಾಡಿಕೊಳ್ಳುವ ಪ್ರಕ್ರಿಯೆಗಳ ಮೂಲಕ ಜನಜಾಗೃತಿ ಉಂಟುಮಾಡುವ ಮೂಲಕ ದಾಸಿ ಬಿಡುವ ಪದ್ದತಿಯಿಂದ ವಂಚನೆಗೆ ಒಳಗಾಗುತ್ತಿರುವ ಮಹಿಳೆಯರನ್ನು ವಿಮೋಚನೆಗೊಳಿಸುವುದು.

೨. ಅಮಾತಕ ನಿರಪರಾಧಿ ಮಹಿಳೆ ಎಂದು ಪರಿಗಣೇಸುವ ತತ್ವ

ತನಗರಿವಿಲ್ಲದೆ ಪದ್ದತಿಗೆ ಒಳಗಾದ ಮಹಿಳೆಯನ್ನುಅಮಾಯಕಳೇಂದು ಪರಿಗಣಿಸಬೇಕು ಹೊರತು ಅಪರಾಧೀ ಎಂದಲ್ಲ.

೩. ಬದುಕಿನ ಬಗ್ಗೆ ನಿರ್ಧಾರ ಮಾಡುವಾಗ ಭಾಗವಹಿಸುವ (ತತ್ವ) ಹಕ್ಕು

ದೇವದಾಸಿ ಮಹಿಳೆ ಮತ್ತು ಅವರ ಮಕ್ಕಳಿಗೆ ಸಂಬಂಧಿಸಿದ ಯಾವುದೇ ಪ್ರಕ್ರಿಯೆ/ವಿಷಯದ ಕುರಿತು ತೆಗೆದುಕೊಳ್ಳುವ ತೀರ್ಮಾನದ ಬಗ್ಗೆ ತಿಳಿದುಕೊಳ್ಳುವ ಮತ್ತು ಭಾಗವಹಿಸುವ ಹಕ್ಕು ಉಳ್ಳವರಾಗಿರುತ್ತಾರೆ.

೪. ದೇವದಾಸಿ ಮಹಿಳೆ ಮತ್ತು ಮಕ್ಕಳ ಹಿತ ಪಾಲನೆ

ಅವರಿಗೆ ಸಂಬಂಧಿಸಿದ ಯಾವುದೇ ನಿರ್ಧಾರ/ತೀರ್ಮಾನ ದೇವದಾಸಿ ಮತ್ತವಳ ಕುಟುಂಬದ ಹಿತ ಕಾಪಾಡುವುದು ಪ್ರಾಥಮಿಕ ಕರ್ತವ್ಯ.

೫. ಗುಣಾತ್ಮಕ ಅಭೀವೃದ್ಧಿ ತತ್ವ

ಸಂಪನ್ಮೂಲ ಕ್ರೋಡಿಕರಣ, ಅಭಿವೃದ್ಧಿ ಮತ್ತಿತರ ಪ್ರಕ್ರಿಯೆಗಳು ದೇವದಾಸಿ ಮಹಿಳೆ ಮತ್ತು ಅವರ ಮಕ್ಕಳ ಶ್ರೇಯೋಭಿವೃದ್ಧಿಗೆ ಪೂರಕವಾಗಿರಬೇಕು ಮತ್ತು ಅವರು ವಂಚನೆಯಿಂದ ಮುಕ್ತಿ ಹೊಂದುವಂತಿರಬೇಕು.

೬. ದೇವದಾಸಿ ಎಂಬಹೇಳನ ಸಲ್ಲದು

ದೇವದಾಸಿ ಎನ್ನುವ ಕಾರಣಕ್ಕೆ ಅವರನ್ನು ಮತ್ತು ಮಕ್ಕಳನ್ನು ಹಿಯಾಳಿಸುವ ಅಥವಾ ಅವಹೇಳನ ಅಥವಾ ನಿಂದನೆ ಮಾಡುವುದು ಕಾಯ್ದೆ ಮೂಲಕ ತಡೆಯಲಾಗಿದೆ.

೭. ಗೌಪ್ಯತೆ ಕಾಪಾಡಿಕೊಳ್ಳವ ಹಕ್ಕು

ಸಾಮಾನ್ಯವಾಗಿ ಮತ್ತು ಕಾನೂನು ರೀತ್ಯ ತಮ್ಮ ಸ್ವಂತ ಮತ್ತು ತಮ್ಮ ಕುಟುಂಬಕ್ಕೆ ಸೇರಿದ ಮಾಹಿತಿಯನ್ನು ಗೌಪ್ಯವಾಗಿಟ್ಟುಕೊಳ್ಳುವ ಹಕ್ಕು ಉಳ್ಳವರಾಗಿರುತ್ತಾರೆ.

ತಂದೆ ಯಾರೆಂದು ಪತ್ತೆ ಹಚ್ಚುವ ಹಕ್ಕು(ಸೆಕ್ಷನ್–೫)

ಕಾನೂನಾತ್ಮಕವಾಗಿ ತಂದೆ ಯಾರೆಂದು ತಳಿಯುವ ಹಕ್ಕು ಮಕ್ಕಳಿಗಿದೆ. ಒಪ್ಪಿಕೊಳ್ಳದ ತಂದೆ ವಿರುದ್ಧ ಜಿಲ್ಲಾ ನ್ಯಾಯಾಲಯದ ನೆರವು ಪಡೆಯುವುದು ಮತ್ತು ಡಿಎನ್ಎ ಪರೀಕ್ಷೆಗೆ ಗುರಿಪಡಿಸುವಂತೆ ಆದೇಶ ಪಡೆಯುವುದು.

ಮಕ್ಕಳಿಗೆ ಜೀವನಾಂಶ ಪಡೆವ ಹಕ್ಕು

ಪ್ರೌಢಾವಸ್ಥೆಗೆ ಬರುವವರೆಗೆ ಜೀವನಾಂಶ ನೀಡುವ ಜವಾಬ್ದಾರಿ ಜನ್ಮ ನೀಡಿದ ತಂದೆ ಮೇಲಿರುವುದು ಈ ಕಾಯ್ದೆ ಮೂಲಕ ಸೂಪ್ರಾಪ್ತವಾಗುವುದು (ಸೆಕ್ಷನ್–೬)

ಆಸ್ತಿ ಪಡೆವ ಹಕ್ಕು

ದೇವದಾಸಿ ಮಹಿಳೆಗೆ ಜನಿಸಿದ ಮಕ್ಕಳು ತಂದೆ ಮತ್ತು ತಾಯಿಯ ಮೂಲದ ಪಿತ್ರಾರ್ಜಿತ ಹಾಗೂ ಸ್ವಯಾರ್ಜಿತ ಆಸ್ತಿ ಪಡೆವ ಹಕ್ಕು ಹೊಂದುವುದು ಕಾಯ್ದೆ (ಕಲಂ–೮) ಮೂಲಕ ಪ್ರಾಪ್ತವಾಗುತ್ತದೆ.

ತಂದೆ ಹೆಸರು ದಾಖಲೆಗಳಲ್ಲಿ ನಮೂದಿಸುವುದು ಖಡ್ಡಾಯವಲ್ಲ ಸೆಕ್ಷನ್–೯)

ಶಿಕ್ಷಣ, ರೇಷನ್ ಕಾರ್ಡ, ಪಾಸ್ಪೋರ್ಟ್, ಮತದಾರರ ಚೀಟಿ, ಪಾನ್‌ಕಾರ್ಡ್ ಮುಂತಾದವುಗಳನ್ನು ಪಡೆಯುವ ಸಂದರ್ಭದಲ್ಲಿ ನಮೂದಿಸಲು ಇಚ್ಚೆ ಪಡೆದ ದೇವದಾಸಿ ಮಕ್ಕಳಿಗೆ ತಂದೆ ಹೆಸರನ್ನು ಹೇಳುವಂತೆ ಒತ್ತಾಯ ಮಾಡದಂತೆ ರಾಜ್ಯ ಸರಕಾರ ಸೂಕ್ತ ಕ್ರಮ ಕೈಗೊಳ್ಳುವುದು.

ಆರೋಗ್ಯ ಸೌಲಭ್ಯ ಪಡೆವ ಹಕ್ಕು(ಸೆಕ್ಷನ್-೧೦)

ಈಗಾಗಲೇ ಸರಕಾರ ನೋಂದಣಿ ಮಾಡಿಕೊಂಡಿರುವ ಎಲ್ಲಾ ದೇವದಾಸಿಯರಿಗೆ ಆರೋಗ್ಯ ಸೌಲಭ್ಯ ಮತ್ತು ಚಿಕಿತ್ಸೆ ಪಡೆಯುವ ಹಕ್ಕು ಹೊಂದುತ್ತಾರೆ.

ದೇವದಾಸಿ ಪದ್ಧತಿ ಅನ್ವಯ ಮದುವೆ ಕಾನೂನುಬಾಹಿರ, ಅದನ್ನು ನಿಷೇಧೀಸಿದೆ(ಸೆಕ್ಷನ್-೧೧)

ಸಂಪ್ರದಾಯಿಕವಾಗಿ ಮಹಿಳೆಯನ್ನು ದೇವರಿಗೆ ಮದುವೆ ಮಾಡಿಸಿರುವುದು ಕಾನೂನು ಬಾಹಿರ ಅದು ಮದುವೆಯಲ್ಲ ಎಂದು ಅಸಿಂದು ಮಾಡಲಾಗಿದೆ. ಈಗಾಗಲೇ ದೇವದಾಸಿಯಾಗಿರುವ ಮಹಿಳೆ ಇಚ್ಛಿಸಿದಲ್ಲಿ ಮದುವೆ ಮಾಡಿಕೊಳ್ಳಲು ಕಾನೂನಾತ್ಮಕವಾಗಿ ಅರ್ಹರಾಗುತ್ತಾರೆ.

ದಾಸಿ ಬಿಡುವ/ ಮುತ್ತುಕಟ್ಟುವ ಆಚರಣೆ ತಡೆಗೆ ಜಿಲ್ಲಾಧಿಕಾರಿಗೆ ವಿಶೇಷ ಅಧಿಕಾರಿ

ದೇವರಿಗೆ ದೇವದಾಸಿ ಬಿಡುವ ಪ್ರಸಂಗ ಕಂಡುಬಂದಲ್ಲಿ ತಹಸಿಲ್ದಾರ ಮತ್ತು ನ್ಯಾಯಾಧೀಶರ ಅಧಿಕಾರ ಹೊಂದಿರುವ ಜಿಲ್ಲಾಧಿಕಾರಿ ಸ್ವತಃ ದೂರು ದಾಖಲಿಸಿಕೊಂಡು ನಡೆಯುವ ಅಂತಹ ಮದುವೆಯನ್ನು ನಿಲ್ಲಿಸುವ ಅಥವಾ ಮದುವೆ ಆಗಿದ್ದಲ್ಲಿ ಕಾಯ್ದೆ ಅನುಸಾರ ಅಂತಹ ಮದುವೆಯನ್ನು ಮದುವೆಯಲ್ಲ ಎಂದು ಕ್ರಮಕೈಗೊಳ್ಳುವ ಅಧಿಕಾರ ನೀಡಲಾಗಿದೆ. ತಪ್ಪಿತಸ್ಥರನ್ನು ಬಂಧಿಸುವ, ದೇವದಾಸಿ ಮಾಡುವ ಪ್ರಕರಣಗಳಿಗೆ ಹೆಸರುವಾಸಿಯಾದ ಸ್ಥಳಗಳಲ್ಲಿ ನಿಷೇಧಾಜ್ಞೆ ಹೇರುವ ಅಧಿಕಾರಿಗೆ ನೀಡಲಾಗಿದೆ. ಜಿಲ್ಲಾಧಿಕಾರಿ ಆದೇಶ ಉಲ್ಲಂಘಿಸಿದರೆ ಒಂದು ವರ್ಷ ಸಜೆ ಮತ್ತು ದಂಡ ವಿಧಿಸಲಾಗುವುದು.

ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಜಾಗೃತ ಸಮಿತಿಗಳ ರಚನೆ

ದೇವದಾಸಿ ಪದ್ಧತಿ ಆಚರಣೆ ತಡೆ, ಪುನರ್ವಸತಿ ಹಾಗೂ ಕಾನೂನು ಕ್ರಮ ಜರುಗಿಸುವ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಮಿತಿಗಳ ರಚನೆಗೆ ಅವಕಾಶ.

ತಾಲ್ಲೂಕು ಮಟ್ಟದ ಜಾಗೃತ ಸಮಿತಿ ರಚನೆ ಮತ್ತು ಕರ್ತವ್ಯಗಳು(ಕಾಯ್ದೆ ಸೆಕ್ಷನ್-೧೬)

ಸಮಿತಿಯ ಅಧಕ್ಷರಾಗಿ ತಹಸಿಲ್ದಾರ್ ಇಬ್ಬರು ದೇವದಾಸಿಯರು ಮತ್ತು ಇಬ್ಬರು ಮಕ್ಕಳು ಸದಸ್ಯರೊಡನೆ, ತಾಲ್ಲೂಕಿನ ಇಬ್ಬರು ಮಹಿಳಾ ಪೋಲೀಸ್ ಅಧಿಕಾರಗಳು, ಒಬ್ಬರು ಸಮಾಜ ಕಾರ್ಯಕರ್ತರು, ಸಮಾಜ ಕಲ್ಯಾಣ ಇಲಾಖೆ ನಾಡಲ್ ಅಧಿಕಾರಿ, ಮಹಿಳ ಕಲ್ಯಾಣ ಇಲಾಖೆ ಅಧಿಕಾರಿಗಳು ಸದಸ್ಯರಾಗಿದ್ದು ತಾಲ್ಲೂಕು ಪಂಚಾಯಿತಿ ಮುಖ್ಯಾಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ. ೪ ಜನ ದೇವದಾಸಿ ಕುಟುಂಬ ಪ್ರತಿನಿಧಿಗಳಿಗೆ ಸಮಿತಿಯಲ್ಲಿ ಸದಸ್ಯತ್ವ ಕಡ್ಡಾಯಗೊಳಿಸಲಾಗಿದೆ.

ಅಲ್ಲದೆ ಪ್ರತಿ ಎರಡು ತಿಂಗಳಿಗೊಮ್ಮ ಕಡ್ಡಾಯವಾಗಿ ಸಭೆನಡೆಸಿ ಪ್ರಗತಿ ಪರಿಶೀಲನೆ ಮಾಡುವುದು. ಅಂತಹ ಸಭೆಗಳಿಗೆ ಹಾಜರಾಗುವಂತೆ ೭ ದಿನಗಳ ಮುಂಚಿತವಾಗಿ ನೋಟೀಸ್ ನೀಡಿ ಸದಸ್ಯರು ಹಾಜರಗುವಂತೆನೋಡಿಕೊಳ್ಳುವುದು.

ಸಮಿತಿಯು ೩ ವರ್ಷಕ್ಕೊಮ್ಮೆ ದೇವದಾಸಿ ಸಮೀಕ್ಷೆ ನಡೆಸುವುದು ಮತ್ತು ದೇವದಾಸಿರಿಂದ ಅರ್ಜಿ ಸ್ವೀಕರಿಸುವುದು, ಸರಿ ಇದೆಯೆ ಎಂದು ಪರಿಶೀಲಿಸಿ ಪಟ್ಟಿ ಅಂತಿಮ ಮಾಡಿ ಅಂತಹ ದೇವದಾಸಿ ಮಹಿಳೆಯರಿಗೆ ಗುರುತಿನ ಚೀಟಿಯನ್ನು ಅವರು ಅರ್ಜಿ ಸಲ್ಲಿಸಿದ ೬ ತಿಂಗಳ ಒಳಗೆ ನೀಡುವುದು, ದೇವದಾಸಿ ಸಮುದಾಯದವರು ರಚಿಸಿಕೊಂಡಿರುವ ಸಂಘ/ಸಂಸ್ಥೆ, ಸಹಕಾರಿ ಸಂಘಗಳನ್ನು ಗುರುತಿಸಿ ಮನ್ಯ ಮಾಡುವುದು, ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು, ಸಮಗ್ರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದು, ಏಕಗವಾಕ್ಷಿ ಮೂಲಕ ಅವರಿಗೆ ಕೊಡಬೇಕಾದ ಸವಲತ್ತುಗಳನ್ನು ನೀಡುವುದು, ಆರೋಗ್ಯಕ್ಕೆ ಸಂಬಂಧಿಸಿದ ಸವಲತ್ತು ನೀಡುವುದು ಮತ್ತು ಕಾಯ್ದೆ ಅನುಸಾರ ಕಾರ್ಯಕ್ರಮ ಅನುಷ್ಠಾನ ಮಾಡಿದ ವರದಿಯನ್ನು ಸಿದ್ದಪಡಿಸಿ ಜಿಲ್ಲಾ ಅಮಿತಿಗೆ ಸಲ್ಲಿಸುವುದು ಮುಂತಾದ ಕೇಲಸಗಳನ್ನು ಸಮಿತಿ ನಿರ್ವಹಿಸುವುದು.

ಜಿಲ್ಲಾ ಮಟ್ಟಸ ಜಾಗೃತ ಸಮಿತಿ ರಚನೆ(ಕಾಯ್ದೆ ಸೆಕ್ಷನ್–೧೭–೨೧)

ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಜಾಗೃತಿ ಸಮಿತಿ ರಚಿಸಲು ಕಾಯ್ದೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ. ಸದರಿ ಸಮಿತಿಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧೀಕಾರಿ ಉಪಾಧ್ಯಕ್ಷರಾಗಿ, ತಾಲ್ಲೂಕಿಗೆ ಒಬ್ಬರಂತೆ ದೇವದಾಸಿ ಸಮುದಾಯದ ಪ್ರತಿನಿಧಿಗಳು, ದೇವದಾಸಿ ಸಮುದಾಯದ ಇಬ್ಬರು ವಯಸ್ಕ ಮಕ್ಕಳು, ದೇವದಾಸಿ ಉಪನಿರ್ದೇಶಕರು ಸದಸ್ಯರಾಗಿರುವ ಸಮಿತಿಗೆ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಜಿಲ್ಲಾ ಮಟ್ಟದ ಜಾಗೃತಿ ಸಮಿತಿ ಕರ್ತವ್ಯಗಳು(ಕಾಯ್ದೆ ಸೆಕ್ಷನ್ ೧೭–೨೧)

ಪ್ರತಿ ಎರಡು ತಿಂಗಳಿಗೊಮ್ಮೆ ಸಮಿತಿಯು ಸಭೆ ಸೇರಿ ಕಾಯ್ದೆ ಮತ್ತು ಕಾರ್ಯಕ್ರಮ ಅನುಷ್ಠಾನದ ಬಗ್ಗೆ ಪರಿಶೀಲನೆ ನಡೆಸುವ ಆದೇಶ ಕಾಯ್ದೆಯಲ್ಲಿದೆ. ತಾಲ್ಲೂಕು ಸಮಿತಿಗಳಿಂದ ವರದಿಗಳನ್ನು ತರಿಸಿಕೊಂಡು ಪರಿಶೀಲಿಸುವುದು. ವಿವಿಧ ಇಲಾಖೆಗಳಿಂದ ದೇವದಾಸಿ ಕುಟುಂಬಗಳಿಗೆ ನೀಡಬೇಕಾದ ಸವಲತ್ತುಗಳು ತಲುಪಂತೆ ನೋಡಿಕೊಳ್ಳುವುದು, ನೀಡಲಾದ ಮತ್ತು ನೀಡಬೇಕಾದ ಸವಲತ್ತುಗಳ ಬಗ್ಗೆ ಮಾಹಿತಿ ಪಡೆದು ಮುಂದಿನ ಆದೇಶ ನೀಡುವುದು, ಸಮುದಾಯ ಮತ್ತು ದೇವಾದಾಸಿ ಕುಟುಂಬಗಳಿಂದ ದೂರು ಸ್ವೀಕರಿಸಿ ಪರಿಶೀಲಿಸುವುದು, ಜಿಲ್ಲಾ ಮಯ್ಯು ತಾಲೂಕು ಮಟ್ಟದ ಅಧಿಕಾರಿಗಳಿಗೆ ಕಾಲಕಾಲಕ್ಕೆ ಸಭೆ ಮತ್ತು ತರಬೇತಿಗಳನ್ನು ನೀಡುವುದು. ಕಾಯ್ದೆ ವಿವಿಧ ಕಲಂಗಳ ಪ್ರಕಾರ ಕ್ರಮಕೈಗೊಂಡಿರುವುದನ್ನು ಕಾತ್ರಿಪಡಿಸಿಕೊಳ್ಳುವುದು, ರಾಜ್ಯ ಮಟ್ಟದ ದೇವದಾಸಿ ಪುನರ್ವಸತಿ ಸಮಿತಿಗೆ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳುಹಿಸಿಕೊಡುವುದು. ಈಲ್ಲಾ ಸಮಿತಿ ಸಿವಿಲ್ ನ್ಯಾಯಾಲಯ ಅಧಿಕಾರ ಚಲಾಯಿಸಬಹುದು.

ರಾಜ್ಯ ಮಟ್ಟದ ಜಾಗೃತ ಮತ್ತು ಅನುಷ್ಟಾನ ಸಮಿತಿ ರಚನೆ (ಸೆಕ್ಷನ್- ೨೨ & ೨೩)

ರಾಜ್ಯ ಸಮಿತಿಯಲ್ಲಿ ರಾಜ್ಯ ಸರಕಾರದ ಮುಖ್ಯ ಕಾರ್ಯದರ್ಶಿ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಗುವುದು. ಸದರಿ ಸಮಿತಿಯಲ್ಲಿ ಜಿಲ್ಲೆಗೆ ಒಬ್ಬರಂತೆ ದೇವದಾಸಿ ಸಮಿದಾಯದ ಪ್ರತಿನಿಧಿ, ಇಬ್ಬರು ಹಿರಿಯ ಸಾಮಾಜಿಕ ಕಾರ್ಯಕರ್ತರು, ಮಹಿಳಾ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರು ಸದಸ್ಯರಾಗಿರುವ ಸಮಿತಿಗೆ ಸವಾಜ ಕಲ್ಯಾಣ ಇಲಾಖೆ ಜಂಟಿಕಾರ್ಯದರ್ಶಿ ಸದಸ್ಯಕಾರ್ಯದರ್ಶಿಯಾಗಿರುತ್ತಾರೆ.

ರಾಜ್ಯ ಮಟ್ಟದ ಜಾಗೃತಿ ಮತ್ತು ಅನುಷ್ಟಾನ ಸಮಿತಿ ಕರ್ತವ್ಯಗಳು(ಸೆಕ್ಷನ್-೨೨ & ೨೩)

ಸಮಿತಿಯು ಪ್ರತಿ ಎರಡು ತಿಂಗಳಿಗೊಮ್ಮ ಸಭೆ ಸೇರಿ ಕಾರ್ಯಕ್ರಮ ಅನುಷ್ಟಾನಕುರಿತ ಪ್ರಗತಿ ಪರಿಶೀಲನೆ ಮಾಡುವುದು ಮತ್ತು ಸಮರ್ಪಕ ಅನುಷ್ಟಾನಕ್ಕೆ ಬೇಕಾದ ಎಲ್ಲಾ ಆದೇಶಗಳನ್ನು ಕಾಲಕಾಲಕ್ಕೆ ನೀಡುವುದರ ಜೊತೆಗೆ ಅಗತ್ಯ ಹಣಕಾಸಿನ ಬಿಡುಗಡೆ ಮಾಡುವ ಕರ್ತವ್ಯ ಹೊಂದಿರುತ್ತದೆ. ಕಾಯ್ದೆ ಅನುಸಾರ ಕಾರ್ಯಕ್ರಮಗಳು ಅನುಷ್ಟಾನದ ಬಗ್ಗೆ ನಿಗಾವಹಿಸುವುದು ಸಮಿತಿಯ ಆದ್ಯ ಕರ್ತವ್ಯ.

ದೇವದಾಸಿ ನಿಷೇಧ ಮತ್ತು ಪುರ್ನಸತಿ ಅಧಿಕಾರಿ ನೇಮಕ(ಸೆಕ್ಷನ್-೨೬-೨೯)

ಸದರಿ ಕಾಯ್ದೆ ಅನ್ವಯ ಅಗತ್ಯಕ್ಕೆ ಅನುಗುಣವಾಗಿ ಆಸಕ್ತಿಯುಳ್ಳ ಮಹಿಳ ಅಧಿಕಾರಿಗಳನ್ನು ದೇವದಾಸಿ ನಿಷೇಧ ಮತ್ತು ಪುರ್ನಸತಿ ಅಧಿಕಾರಿಗಳನ್ನು ಸರಕಾರ ನೇಮಕ ಮಾಡುವುದು. ಅವರಿಗೆ ಕಾಯ್ದೆ ಅನಿಷ್ಟಾನಗೊಳಿಸಲು ಬೇಕಾದ ತರಭೇತಿ ನೀಡುವುದರ ಜೊತೆ ಅಧಿಕಾರ ನೀಡಿ ನೇಮಕ ಮಾಡುವುದು.

ದೇವದಾಸಿ ಮಹಿಳೆ ಮತ್ತು ಮಕ್ಕಳ ಸಮೀಕ್ಷೆ (ಸೆಕ್ಷನ್-೩೦)

ತಾಲ್ಲೂಕು ಕಾತ್ರಿಪಡಿಸಿಕೊಂಡ ನಂತರ ಅಂತಹ ಕುಟುಂಬಗಳಿಗೆ ತಾಲ್ಲೂಕು ಸಮಿತಿ ಗುರುತಿನ ಪತ್ರವನ್ನು ನೀಡುವುದು. ಗುರುತಿನ ಪತ್ರ ಸವಲತ್ತುಗಳನ್ನು ಪಡೆಯಲು ಪುರಾವೆಯಾಗುವುದು.

ದೇವದಾಸಿ ಆರೋಗ್ಯ ಕಾಪಾಡುವ ಹಕ್ಕು (ಸೆಕ್ಷನ್-೩೩-೩೯)

ಪ್ರತಿಯೊಬ್ಬ ದೇವದಾಸಿ ಪ್ರಸ್ತುತ ಆಚರಣೆಯಲ್ಲಿರುವ ರಾಜ್ಯ ಮತ್ತು ಕೇಂದ್ರ ಆರೋಗ್ಯ ಕಾರ್ಯಕ್ರಮಗಳ /ವಿಮೆ ಯೋಜನೆಗಳ ಸವಲತ್ತು ಪಡೆಯುವ ಹಕ್ಕು ಹೊಂದಿರತಕ್ಕದ್ದು, ಚಿಕಿತ್ಸೆ ಮತ್ತು ಔಷಧಿಗಳನ್ನು ಉಚಿತವಾಗಿ ಪಡೆಯುವಂತೆ ಮತ್ತು ಕೆಲವು ಗಂಬೀರ ಕಾಯಿಲೆಗಳಿಗೆ ಪ್ರಮಾಣ ವೆಚ್ಚವೂ ಸೇರಿದಂತೆ ಸಂಪೂರ್ಣ ವೆಚ್ಚ ಸರಕಾರದಿಂದ ನೀಡುವುದು. ಎಲ್ಲಾ ದೇವದಾಸಿ ಮಹಿಳೆಯರಿಗೆ ಆರೋಗ್ಯ ತಪಾಸಣೆ ಮಾಡಿಸುವುದು. ಈ ಸಂದರ್ಭದಲ್ಲಿ ಕೆಲವು ಗಂಬೀರ ಕಾಯಿಲೆಗಳು ಕಂಡುಬಂದಲ್ಲಿ ಅಂತಹವರಿಗೆ ವಿಶೇಷ ಚಿಕಿತ್ಸೆ ನೀಡಲು ಡಿಪಿಆರ್ಓ ಸೂಕ್ತ ಕ್ರಮ ಪ್ರಕ್ರಿಯೆಯನ್ನು ವಿವರಿಸಿ ಈ ಕಾಯ್ದೆ ಜಾರಿಗೆ ಬಂದ ೬ ತಂಗಳ ಒಳಗೆ ಆದೇಶ ಹೊರಡಿಸಿವುದು.

ಭೂಮಿ ಮತ್ತು ವಸತಿ ಹಕ್ಕು(ಸೆಕ್ಷನ್-೪೨-೪೫)

ಗುರುತಿಸಲ್ಪಟ್ಟ ಎಲ್ಲಾ ದೇವದಾಸಿ ಕುಟುಂಬಕ್ಕೆ ಒಂದು ವರ್ಷದ ಒಳಗಾಗಿ ಕನಿಷ್ಠ ಪಕ್ಷ ಎರಡು ಎಕರೆ ಕೃಷಿ ಭೂಮಿ ಅಥವಾ ಅದರ ಸರಿಸಮಾನವಾದ ಬೇರೇನಾದರು ನೀಡುವುದು. ಒಂದು ವೇಳೆ ದೇವದಾಸಿ ಮರಣ ಹೊಂದಿದ್ದರೆ ಅವರು ಮಕ್ಕಳು/ಮೊಮ್ಮಕ್ಕಳಿಗೆ ನೀಡುವುದು. ಅದೇ ರೀತಿ ವಸತಿಗಾಗಿ ೪ ಗುಂಟ ನಿವೇಶನ ಮಂಜೂರು ಮಾಡುವುದು ಮತ್ತು ಪ್ರಸ್ತುತ ವಸತಿ ಯೋಜನೆಗಳಿಗೆ ಲಿಂಕ್ ಮಾಡುವ ಮೂಲಕ ಮನೆ ನಿರ್ಮಾಣಕ್ಕೆ ಚಾಲನೆ ನೀಡುವುದು.

ಪುನರ್ವಸತಿ ಪಡೆಯುವ ಹಕ್ಕು(ಸೆಕ್ಷನ್ ೪೯-೫೪)

ಮಾಸಿಕ ವೇತನ(ಸೆಕ್ಷನ್-೪೯):ದೇವದಾಸಿ ಮಹಿಳೆಯರ ಜೀವನ ನಿರ್ವಹಣೆಗಾಗಿ ಕನಿಷ್ಠ ವೇತನದ ಶೇಕಡಾ ೫೦%ರಷ್ಟನ್ನು ನಿಗಧಿಗೊಳಿಸಿ ಮಾಸಿಕ ವೇತನ ನೀಡುವುದು.

ಶಿಷ್ಯವೇತನ (ಸೆಕ್ಷನ್-೫೦) ಸ್ವ ಉದ್ಯೋಗ ಮಾಡಲಿಚ್ಚಿಸುವ ಮಕ್ಕಳಿಗೆ/ಆಕಾಂಕ್ಷಿಗಳಿಗೆ ಶಿಷ್ಯವೇತನ ಸಹಿತ ಕೌಶಲ್ಯ ತರಭೇತಿ ನೀಡುವುದು.

ಆಹಾರ ಭದ್ರತೆಗಾಗಿ(ಸೆಕ್ಷನ್-೫೧) ಅಂತ್ಯೋದಯ ಅನ್ನ ಯೋಜನೆ ಕಾರ್ಡ್ ಎಲ್ಲಾ ದೇವದಾಸಿ ಕುಟುಂಬಗಳಿಗೆ ವಿತರಿಸುವುದು.

ವಿದ್ಯಾರ್ಥಿ ವೇತನ(ಸೆಕ್ಷನ್-೫೨) ದೇವದಾಸಿ ಮಕ್ಕಳಿಗೆ ವಿದ್ಯಾಭ್ಯಾಸ ಮುಂದುವರೆಸಲು ಪೂರಕವಾದ ವಿದ್ಯಾರ್ಥಿ ವೇತನ ಮತ್ತು ಹಾಸ್ಟೆಲ್ ಸೌಲಭ್ಯ ಒದಗಿಸುವುದು.

ಸರ್ಕಾರಿ ಉದ್ಯೋಗದಲ್ಲಿ ಆದ್ಯತೆ (ಸೆಕ್ಷನ್-೫೩)

ಸರ್ಕಾರಿ ಇಲಾಖೆಗಳಲ್ಲಿ ಇರುವ ತಾತ್ಕಾಲಿಕ/ ಗುತ್ತಿಗೆ ಆಧಾರ ಮತ್ತು ಖಾಯಂ ಉದ್ಯೋಗ ನೀಡುವಾಗ ದೇವದಾಸಿ ಮಕ್ಕಳಿಗೆ ಆಧ್ಯತೆ ಮೇಲೆ ನೀಡುವುದು.

ದೇವದಾಸಿ ಮಕ್ಕಳ ಮದುವೆಗೆ ಪ್ರೋತ್ಸಾಹ ಧನ(ಸೆಕ್ಷನ್-೫೪)

ದೇವದಾಸಿ ಮಕ್ಕಳ ಮದುವೆ ಪ್ರೋತ್ಸಾಹಿಸಲು ಪೂರಕವಾಗಿ ಪ್ರೋತ್ಸಾಹ ಧನ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುವುದು.

ದೇವದಾಸಿ ಪದ್ಧತಿ ಆಚರಿಸುವವರಿಗೆ ದಂಡ ಮತ್ತು ಶಿಕ್ಷೆ (ಸೆಕ್ಷನ್-೫೬-೫೭)

ದೇವದಾಸಿ ಪದ್ದತಿಯನ್ನು ಆಚರಣೆ(ಸೆಕ್ಷನ್-೫೬) ಪ್ರೇರೆಪಿಸುವ ಮಾಡುವ/ ಮುತ್ತು ಕಟ್ಟುವ/ ಪ್ರಚೋದನೆ ನೀಡುವವರಿಎ ೨ ರಿಂದ ೫ ವರ್ಷಗಳ ಜೈಲು ಶಿಕ್ಷೆ ಮತ್ತು ಒಂದು ಲಕ್ಷ ರೂಪಾಯಿ ದಂಡ. ಪುನಃ ಅಂತ ಕೆಲಸ ಮಾಡಿದರೆ ೭ವರ್ಷ ಜೈಲು ಶಿಕ್ಷೆ ಮತ್ತು ೫ ಲಕ್ಷ ರೂಪಾಯಿ ದಂಡ ವಿಧಿಸುವುದು.

ಪ್ರಶ್ನಾವಳಿ

ಅ) ನಿಮಗೆ ಭೂಮಿ/ ಆಸ್ತಿ ಇದೆಯೇ?

ಎ) ಇದ್ದಲ್ಲಿ ಅದನ್ನು ನೀವು ಹೇಗೆ ಪಡೆದುಕೊಂಡಿದ್ದೀರಿ?

	ಎ	ಬಿ	ಸಿ	ಖ	ಭೂರಹಿತ

ಎ) ಪೂರ್ವಜರಿಂದ ಬಿ) ದಾನಿಗಳು ನೀಡಿದ್ದು ಸಿ) ಸ್ವಂತಕ್ಕೆ ತೆಗೆದುಕೊಂಡಿದ್ದು ಡಿ) ಸರ್ಕಾರದ್ದು

೯				೪೧
೧೮%				೮೨%

೧೮. ಯಾವ ಬ್ಯಾಂಕಿನಲ್ಲಿ ನಿಮ್ಮ ಖಾತೆ ಇದೆ. ಎ ಬಿ ಸಿ ಖ

ಎ) ಸಹಕಾರಿ ಬ್ಯಾಂಕ್ ಬಿ) ಅಂಚೆ ಬ್ಯಾಂಕ್ ಸಿ) ಗ್ರಾಮೀಣ ಬ್ಯಾಂಕ್ ಡಿ) ರಾಷ್ಟ್ರೀಕೃತ ಬ್ಯಾಂಕ್

೨೦	೨೫	೫
೪೦%	೫೦%	೧೦%

೧೯. ನೀವು ರಾಜಕೀಯವಾಗಿ ಭಾಗವಹಿಸದ್ದೀರಾ?

ಹೌದು	ಇಲ್ಲ
೮	೪೨
೧೬%	೮೪%

೨೦. ಯಾವ ಹಂತದಲ್ಲಿ ಭಾಗವಹಿಸದ್ದೀರಿ? ಎ ಬಿ ಸಿ ಡಿ

ಎ) ಗ್ರಾಮ ಪಂಚಾಯಿತಿ ಬಿ) ತಾಲ್ಲೂಕು ಪಂಚಾಯಿತಿ ಸಿ) ಜಿಲ್ಲಾ ಪಂಚಾಯಿತಿ ಡಿ) ಎಂ.ಎಲ್.ಎ.

೮

ಬಿ. ರಾಜಕೀಯದಲ್ಲಿ ವಾಸ್ತವ ಜೀವನ ವಿಧಾನ ಹೇಗೆ ಇದೆ? ಕಾರಣ ೧

೧. ಉರಿನ ಪ್ರಮುಖ ವ್ಯಕ್ತಿಗಳಿಗೆ ಮಾತ್ರ ರಾಜಕೀಯ ಸಿಮಿತವಾಗಿದೆ. ಮತ್ತು ಅವರೊಂದಿಗೆ ನಮ್ಮ ದೇಹ ಸಂಬಂಧವನ್ನು ಬೆಳೆಸಿಕೊಂಡರೆ ಮಾತ್ರ ರಾಜಕೀಯದಲ್ಲಿ ಅವಕಾಶ ದೊರೆಯುತ್ತದೆ. ೨

೨. ಶ್ರೀಮಂತರು ಮತ್ತು ದೇವದಾಸಿಯರ ಮಧ್ಯೆ ರಾಜಕೀಯ ಕ್ಷಣಕಾಲಿಕವಾಗಿರುತ್ತದೆ. ೩

೩. ನೀವು ಗ್ರಾಮ ಪಂಚಾಯಿತಿಯಂತಹ ರಾಜಕೀಯದಲ್ಲಿ ಸ್ಪರ್ಧಿಸುವುದರಿಂದ ಏನಾದರು ಬದಲಾವಣೆಯಾಗಿದೆಯಾ? ಕಾರಣ ೧

೧. ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಭಾಗವಹಿಸಿದವರು ಮಾತ್ರ ಬದಲಾವಣೆಯ ಆದಿಯಲ್ಲಿದ್ದಾರೆ. ೨

೨. ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಸಿಗದೆ ಕೇವಲ ಮತಗಳು ಹಾಕಲು ಸಿಮಿತವಾಗಿದ್ದಾಗ ಇನ್ಯಾವ ಬದಲಾವಣೆ ನಮಗೆ ೩

೨೧. ನೀವು ಸರ್ಕಾರದಿಂದ ಯಾವುದಾದರೂ ಆರ್ಥಿಕ ಸೌಲಭ್ಯ ಪಡೆದಿದ್ದೀರಾ?

ಕಾರಣ	೧	೫	೧೦%
೧. ಬ್ಯಾಂಕ ಸಾಲ	೨	೧೬	೩೨%
೨. ಸಹಕಾರಿ ಬ್ಯಾಂಕ ಸಾಲ	೩	೨೯	೫೮%
೩. ಇಲ್ಲ			

೨೨. ನೀವು ಆರ್ಥಿಕೇತರ ವೃತ್ತಿಯಲ್ಲಿ ತೊಡೆಗಿಕೊಂಡಿರಾ?

ಹೌದು	ಇಲ್ಲ
೨೧	೨೫
೪೬%	೫೪%

೨೩. ಇತ್ತೀಚಿನ ದಿನಗಳಲ್ಲಿ ನಿಮ್ಮ ಸಮಸ್ಯೆಗಳು ಕಾರಣ	೧	೧೦	೨೦%
೧. ಸಾಮಾಜಿಕ ಸ್ಥಾನಮಾನ	೨	೧೨	೨೪%
೨. ಆರ್ಥಿಕ ಪರಿಸ್ಥಿತಿ	೩	೨೮	೫೬%
೩. ದೇವದಾಸಿ ಹಣೆಪಟ್ಟಿ			
೧೮. ದೇವದಾಸಿ ಪದ್ದತಿ ನಿರ್ಮೂಲನೆಯಾಗಬೇಕಾ? ಕಾರಣ	೧	೪	೧೦%
೧. ಮೌಢ್ಯಚರಣೆ	೨	೯	೨೨%
೨. ಅನಿವಾರ್ಯ ಪರಿಸ್ಥಿತಿ	೩	೨೮	೬೮%
೩. ಸಂಪೂರ್ಣ ನಿರ್ಮೂಲನೆ ಆಗಬೇಕು			
೧೯. ಕೊನೆದಾಗಿ ದೇವದಾಸಿ ಪದ್ದತಿಯ ನಿಮ್ಮ ಮಾತು ಕಾರಣ	೧	೬	೧೪%
೧. ಕೂಲಿನಾಲಿ ಜೀವನ ನಿರ್ವಹಣೆ	೨	೯	೨೧%

೨. ನನಗೆ ಕೊನೆಯಾಗಬೇಕು ೩ ೨೮ ೬೫%

೩. ನಿರ್ಮೂಲನೆ ಆಗಬೇಕು

೨೦. ನೀವು ವೃತ್ತಿ ರಂಗಭೂಮಿ ಅಥವಾ ನಾಟಕ, ಬಯಲಾಟ ಪ್ರದರ್ಶನ ಕಲೆಯಲ್ಲಿ ಭಾಗವಹಿಸುತ್ತೀರಾ?

	ಹೌದು	ಇಲ್ಲ
	೪	೪೬
	೮%	೯೨%

೨೧. ಭಾಗವಹಿಸುವುದಾದರೆ ಯಾವ ಯಾವ ರಂಗಭೂಮಿಯಲ್ಲಿ ಭಾಗವಹಿಸುತ್ತೀರಿ?

	ಎ	ಬಿ	ಸಿ	ಡಿ
ಎ) ನಾಟಕ ಬಿ) ಬಯಲಾಟ ಸಿ) ಪ್ರವಚನ ಡಿ)	ಇತರೆ		೪	

೨೨. ಇ ರಂಗಭೂಮಿಯಿಂದ ದೊರೆಯುವ ಸಂಭಾವನೆಯಿಂದ ಎಷ್ಟು ಗಳಿಸುತ್ತೀರಾ?

೧. ಅಂದು ರಂಗಭೂಮಿಗೆ ಬಹಳ ಪ್ರಶಸತ್ಯವನ್ನ ನೀಡುತ್ತಿದ್ದರು ಆದರೆ ಇಂದು ಆರ್ಥಿಕವಾಗಿ ಬಲಗೋಳ್ಳಲಿಕ್ಕೆ ಇದು ಒಂದು ಕೌಶಲ್ಯವಾಗಿದೆ.

೨. ಒಂದು ದಿನದ ನಾಟಕಕ್ಕೆ ೬ ರಿಂದ ೮ ಸಾವಿರ ರೂಪಾಯಿ ದೊರೆಯುತ್ತದೆ.

೨೩. ಇತರೆ ಯಾವುದಾದರೂ ವೃತ್ತಿಗಳಲ್ಲಿ ನೀವು ನಿಮ್ಮನ್ನು ತೊಡಗಿಸಿಕೊಂಡಿದ್ದಿರಾ?

೧. ದೇವದಾಸಿಯರವರು ಸಮಾಜದಲ್ಲಿರುವ ದೇವಾಲಯಕ್ಕೆ ಮಾತ್ರ ಸಿಮಿತವಾಗದೆ, ಕೃಷಿ, ಕೃಷಿಯೇತರ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಮಾಹಿತಿದಾರರ ವಿವರ

ಕ್ರಸಂ	ಹೆಸರು	ಗ್ರಾಮ	ವಯಸ್ಸು	ಜಾತಿ
೧	ಬರಿಕರ ಹನುಮಕ್ಕ	ಹಂಪಪಟ್ಟಣ	೫೨	ಗಂಗಾಮತ
೨	ವನಜಾಕ್ಷಿ	ಹಂಪಪಟ್ಟಣ	೩೦	ವಾಲ್ಮೀಕಿ
೩	ಗಂಗಮ್ಮ	ಹಂಪಪಟ್ಟಣ	೪೫	ವಾಲ್ಮೀಕಿ
೪	ದೇವಮ್ಮ	ಹಂಪಪಟ್ಟಣ	೫೦	ಆದಿ ಕರ್ನಾಟಕ
೫	ನಿಂಗಮ್ಮ	ಹಂಪಪಟ್ಟಣ	೬೫	ಆದಿ ಕರ್ನಾಟಕ
೬	ಮೈಲಮ್ಮ	ಹಂಪಪಟ್ಟಣ	೫೦	ಆದಿ ಕರ್ನಾಟಕ
೭	ದುರ್ಗಮ್ಮ	ಹಂಪಪಟ್ಟಣ	೫೫	ಆದಿ ಕರ್ನಾಟಕ
೮	ರಾಧಮ್ಮ	ಹಂಪಪಟ್ಟಣ	೪೫	ವಾಲ್ಮೀಕಿ
೯	ಸುಜಾತ	ಹಂಪಪಟ್ಟಣ	೪೦	ವಾಲ್ಮೀಕಿ
೧೦	ಜ್ಯೋತಿ	ಹಂಪಪಟ್ಟಣ	೩೮	ಆದಿ ಕರ್ನಾಟಕ
೧೧	ಯಂಕಮ್ಮ ಜಿ	ಬನ್ನಿಗೋಳ	೫೫	ವಾಲ್ಮೀಕಿ
೧೨	ಅಂಬಿಗರ ಗೀತೆ	ಬನ್ನಿಗೋಳ	೫೦	ವಾಲ್ಮೀಕಿ
೧೩	ಗಂಗಮ್ಮ ಜಿ	ಬನ್ನಿಗೋಳ	೪೫	ಆದಿ ಕರ್ನಾಟಕ
೧೪	ಮಣಿಯಮ್ಮ	ಬನ್ನಿಗೋಳ	೪೦	ಆದಿ ಕರ್ನಾಟಕ
೧೫	ಬಂಗಾಳಿ ದುರ್ಗವ್ವ	ಬನ್ನಿಗೋಳ	೫೪	ಆದಿ ಕರ್ನಾಟಕ
೧೬	ಹನುಮಕ್ಕ	ಬನ್ನಿಗೋಳ	೫೫	ಆದಿ ಕರ್ನಾಟಕ
೧೭	ಬಸಮ್ಮ	ಬನ್ನಿಗೋಳ	೬೦	ವಾಲ್ಮೀಕಿ
೧೮	ಪೂಜಾರಿ ಹನುಮವ್ವ	ಬನ್ನಿಗೋಳ	೫೧	ಆದಿ ಕರ್ನಾಟಕ
೧೯	ಕೆಂಪಮ್ಮ	ಬನ್ನಿಗೋಳ	೪೩	ವಾಲ್ಮೀಕಿ
೨೦	ಸುಂದರಮ್ಮ	ಬನ್ನಿಗೋಳ	೪೮	ಆದಿ ಕರ್ನಾಟಕ

೨೧	ತಳವಾರ ಗಂಗಮ್ಮ	ಚಿಲುಗೋಡು	೪೦	ವಾಲ್ಮೀಕಿ
೨೨	ಪಡೆನಾರ್ ಸಾಕಮ್ಮ	ಚಿಲುಗೋಡು	೫೬	ವಾಲ್ಮೀಕಿ
೨೩	ಬಾಳಮ್ಮ	ಚಿಲುಗೋಡು	೪೫	ವಾಲ್ಮೀಕಿ
೨೪	ರೇಣುಕಮ್ಮ	ಚಿಲುಗೋಡು	೬೫	ವಾಲ್ಮೀಕಿ
೨೫	ನಾಗಮ್ಮ	ಚಿಲುಗೋಡು	೪೩	ವಾಲ್ಮೀಕಿ
೨೬	ಕರಿಯವ್ವ	ಚಿಲುಗೋಡು	೫೫	ಆದಿ ಕರ್ನಾಟಕ
೨೭	ಎಲ್ಲಮ್ಮ	ಚಿಲುಗೋಡು	೫೫	ಆದಿ ಕರ್ನಾಟಕ
೨೮	ಹುಲಿಗಮ್ಮ	ಚಿಲುಗೋಡು	೪೦	ಆದಿ ಕರ್ನಾಟಕ
೨೯	ಗೌರಮ್ಮ	ಚಿಲುಗೋಡು	೫೭	ಆದಿ ಕರ್ನಾಟಕ
೩೦	ಪಕೀರಮ್ಮ	ಚಿಲುಗೋಡು	೬೦	ವಾಲ್ಮೀಕಿ
೩೧	ನಾಗಮ್ಮ	ಮರಿಯಮ್ಮನಹಳ್ಳಿ	೬೫	ವಾಲ್ಮೀಕಿ
೩೨	ಸುಬದ್ರಮ್ಮ	ಮರಿಯಮ್ಮನಹಳ್ಳಿ	೪೫	ಆದಿ ಕರ್ನಾಟಕ
೩೩	ಭಾರತಿ	ಮರಿಯಮ್ಮನಹಳ್ಳಿ	೫೫	ಆದಿ ಕರ್ನಾಟಕ
೩೪	ಪುಟ್ಟಮ್ಮ	ಮರಿಯಮ್ಮನಹಳ್ಳಿ	೪೬	ಆದಿ ಕರ್ನಾಟಕ
೩೫	ಗೌರಿ	ಮರಿಯಮ್ಮನಹಳ್ಳಿ	೪೦	ವಾಲ್ಮೀಕಿ
೩೬	ಕೋಟ್ರಮ್ಮ	ತಂಬ್ರಹಳ್ಳಿ	೫೫	ಆದಿ ಕರ್ನಾಟಕ
೩೭	ದುರ್ಗಮ್ಮ	ತಂಬ್ರಹಳ್ಳಿ	೫೦	ಆದಿ ಕರ್ನಾಟಕ
೩೮	ಕೆಂಚವ್ವ	ತಂಬ್ರಹಳ್ಳಿ	೬೨	ಆದಿ ಕರ್ನಾಟಕ
೩೯	ಮಲ್ಲವ್ವ	ತಂಬ್ರಹಳ್ಳಿ	೫೮	ವಾಲ್ಮೀಕಿ
೪೦	ನಾಗಮ್ಮ	ತಂಬ್ರಹಳ್ಳಿ	೫೦	ವಾಲ್ಮೀಕಿ
೪೧	ಜಾನಕಮ್ಮ	ರಾಮನಗರ	೬೦	ವಾಲ್ಮೀಕಿ
೪೨	ಜ್ಯೋತಿಮ್ಮ	ರಾಮನಗರ	೪೫	ವಾಲ್ಮೀಕಿ
೪೩	ಕನಕಮ್ಮ	ರಾಮನಗರ	೬೫	ವಾಲ್ಮೀಕಿ

೪೪	ಬಸಮ್ಮ	ರಾಮನಗರ	೫೦	ಆದಿ ಕರ್ನಾಟಕ
೪೫	ಅಕ್ಕವ್ವ	ರಾಮನಗರ	೫೮	ಆದಿ ಕರ್ನಾಟಕ
೪೬	ರಾಮಕ್ಕ	ರಾಮನಗರ	೬೦	ಗಂಗಾಮತ
೪೭	ಹನುಮಕ್ಕ	ರಾಮನಗರ	೪೫	ಗಂಗಾಮತ
೪೮	ನಿಂಗಮ್ಮ	ರಾಮನಗರ	೬೦	ವಾಲ್ಮೀಕಿ
೪೯	ಶಾಂತಮ್ಮ	ರಾಮನಗರ	೫೫	ವಾಲ್ಮೀಕಿ
೫೦	ಭಾಗ್ಯಮ್ಮ	ರಾಮನಗರ	೬೫	ಆದಿ ಕರ್ನಾಟಕ

ಛಾಯಾ ಚಿತ್ರಗಳು

ಛಾಯಾ ಚಿತ್ರಗಳು



ಹುಲಿಗೆಮ್ಮ ದೇವಿ



ಬಾಲಕಿಗೆ ಮುತ್ತು ಕಟ್ಟಿ ದೇವದಾಸಿಯನ್ನಾಗಿ ಮಾಡುತ್ತಿರುವುದು



ಮುತ್ತು ಕಟ್ಟಿಸಿಕೊಂಡ ಮಹಿಳೆಯನ್ನು ಸಂದರ್ಶಿಸುತ್ತಿರುವ ಸಂಶೋಧಕ



ಹುಲಿಗಮ್ಮ ದೇವಸ್ಥಾನದ ಆವರಣದಲ್ಲಿ ಹಿರಿಯ ದೇವದಾಸಿ ಮಹಿಳೆಗೆ ಹಸಿರು ಗಾಜಿನ ಬಳೆ ತೊಡಿಸುತ್ತಿವುದು



ಹಿರಿಯ ದೇವದಾಸಿ ಮಹಿಳೆಯರಿಂದ ಮಾಹಿತಿ ಪಡೆಯುತ್ತಿರುವ ಸಂಶೋಧಕರು



ಡಬ್ಬಿ ಅಂಗಡಿ ವ್ಯಾಪಾರ ನಡೆಸುತ್ತಿರುವ ದೇವದಾಸಿ ಮಹಿಳೆ



ಜೊಗಪ್ಪ



ಪಡ್ಲಿಗೆ ಪೂಜೆ ಮಾಡುತ್ತಿರುವುದು




ದೇವದಾಸಿ ಮಹಿಳೆಯರಿಗೆ ಸರ್ಕಾರ ನಿರ್ಮಿಸಿಕೊಟ್ಟ ಜನತಾ ಮನೆ



ಜೋಗಪ್ಪ (ಪರುಶುರಾಮಪ್ಪ, ಆಂಧ್ರ)





ಬುಡಕಟ್ಟು ಅಧ್ಯಯನ ವಿಭಾಗ